# ಅಖಿಲ ಭಾರತ ಪತ್ರಿಕೆ

## ಮೇ 2025



# ಉನ್ನತ ಪ್ರಜ್ಞೆ

ಬೆಲೆ : 15/-



ಫೋಟೋ: ಇಮೇಜಿಂಗ್ ಸಾವಿತ್ರಿ

ಶೃಂಗದುತ್ತುಂಗ ತುಂಗಶ್ರೇಣಿಗಳ ಸಾಮ್ರಾಜ್ಯ ತಾಣವಿದುವು
ಜೊತೆಗಿದೋ ಜ್ಯೋತಿ–ಕಾಂತಿಗಳ ಮಿಡಿತ ಸುವಿಶಾಲ ಸಮತೆ–ತಲವು

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 4 ರೇಣು 2 ಪುಟ 359)**

**ಅಖಿಲ ಭಾರತ ಪತ್ರಿಕೆ**
**ಮೇ 2025**

ಸಂಪುಟ: 35 ಸಂಚಿಕೆ: 05

**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com

**ಪರಿಶೀಲನಾ ಸಮಿತಿ:**
ಡಾ॥ ಆರ್.ಕೆ. ಕುಲಕರ್ಣಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
https://www.sriaurobindo
complex.org/archive.php
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

# ಪರಿವಿಡಿ

## ಉನ್ನತ ಪ್ರಜ್ಞೆ

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು

**ಅವರೋಹಣ ಮತ್ತು ಆರೋಹಣ** 3
ಅನು: ಡಾ॥ ಮಹಾದೇವ ಸಕ್ರಿ

**ಅವತರಣದ ನಿಬಂಧೆಗಳು** 14
ಅನು: ಶ್ರೀ ರಮೇಶ್ ಸರಗೂರ

**ಶಕ್ತಿಯ ಅವತರಣಕ್ಕೆ ಅಡೆತಡೆ ಯಾವುದರಿಂದ?** 22
ಅನು: ಶ್ರೀಮತಿ ವಿಶಾಲಾಕ್ಷೀ ಸತ್ಯನ್

**ಅಧಿ–ಚೇತನದ ನೆಲೆಗೆ ತೆರೆದುಕೊಳ್ಳುವಿಕೆ** 31
ಅನು: ನಾಗಜ್ಯೋತಿ ಮಾನ್ವಿ

**ಇತರರಿಗೆ ಸಹಾಯ ಮತ್ತು ಈ ಜಗತ್ತು** 35
ಅನು: ಶ್ರೀ ಕಿಶೋರಕುಮಾರ ಕಾಸಾರ

**ಶ್ರೀ ಅರವಿಂದರ 'ಉರ್ವಶಿ'** 53
ಅನು: ಶ್ರೀ ಕಿಶೋರಕುಮಾರ ಕಾಸಾರ (ಸಮಷ್ಟಿ)

**'ಶ್ರೀ ಅರವಿಂದರ 'ಗೀತಾ ಪ್ರಬಂಧಗಳು'** 65
ಅನು: ಜಾನ್ವಿ

**ವಾರ್ತಾಪತ್ರ** 76

# ಸಂಪಾದಕರ ಟಿಪ್ಪಣಿ

ಮಾನವನ ವಿಕಾಸಾತ್ಮಕವಾದ ಯಾನವೂ ಇನ್ನೂ ಪೂರ್ಣಗೊಂಡಿರುವದಿಲ್ಲ. ಈಗಲೂ ಅವನು ವಿಕಾಸಗೊಳ್ಳುತ್ತಲೇ ಇದ್ದಾನೆ. ಅವನು ತನ್ನದೇ ಮೂಲ ನೆಲೆಗೆ ತಲುಪುವದರ ಸಲುವಾಗಿಯೇ ಇನ್ನೂ ಕೆಲವು ಮೈಲುಗಳನ್ನು (ಕಿ.ಮಿ.ಗಳನ್ನು) ಪಯಣಿಸಬೇಕಾಗಿದೆ. ಅದಕ್ಕಾಗಿ ಅವನು ತರ್ಕಾಧಾರಿತ ಮನೋಹಂತದಿಂದ ಮುಕ್ತನಾಗಿ, ಔನ್ನತ್ಯದ ಹಂತಗಳ ನೆಲೆಗೆ ಅಂದರೆ ಚೇತನಾ ಹಂತಕ್ಕೆ ಆರೋಹಣಗೊಳ್ಳಬೇಕಿದೆ. ಇದು ಸಾಧ್ಯತೆ ಇರುವ ಕುರಿತು ಮತ್ತು ಅದು ಅಲ್ಲಿ ಕಾಂತಿಪೂರ್ಣತೆಯಿಂದ ಮಿನುಗುತ್ತಿರುವದನ್ನು ಪಡೆದುಕೊಳ್ಳುವ ಸಾಧ್ಯತೆಯನ್ನು ತಲುಪಬೇಕಿದೆ. ಈ ಈ ಪರಮ ಮಾನಸದ ತುರೀಯಾವಸ್ಥೆಯನ್ನು ಅವನು ಪಡೆದುಕೊಳ್ಳಲೆಂದು, ಅಧಿಮಾನಸದ ಕಾಂತಿಪೂರ್ಣ ವೈಭವಗಳನ್ನು ಮತ್ತು ಉನ್ಮನೀ ಮನೋಭಾವದ (ಸುಪ್ರಾಮೆಂಟಲ್) ಅಸ್ತಿತ್ವವನ್ನು ಹೊಂದಬೇಕಾಗಿದೆ.

ಈ ಸಂಚಿಕೆಯಲ್ಲಿ ನಮ್ಮ ಸಲುವಾಗಿಯೇ ಕಾಯುತ್ತಿರುವ ಈ ಪರಾ–ಚೇತನದ ಅಸ್ತಿತ್ವವನ್ನು ತೋರುತ್ತಿರುವ ಕೆಲವು ಬೆಳಕಿನ ಕಿಂಡಿಗಳಲ್ಲಿ ಕಾಣುವ ಕಾಂತಿ ಕಿರಣಗಳನ್ನು ರೂಪಿಸಲಾಗಿದೆ. (ಎಐಎಮ್)

# ಅವರೋಹಣ ಮತ್ತು ಆರೋಹಣ

**– ಅನು: ಡಾ॥ ಮಹಾದೇವ ಸಕ್ರಿ, ವಿಜಯಪುರ**

ನಮ್ಮ ಯೋಗವು ಆರೋಹಣ ಮತ್ತು ಅವರೋಹಣಗಳ ದ್ವಿಗುಣ ಚಲನೆಯಾಗಿದೆ; ಒಬ್ಬರು ಪ್ರಜ್ಞೆಯ ಉನ್ನತ, ಉನ್ನತ ಹಂತಗಳಿಗೆ ಏರುತ್ತಾರೆ, ಆದರೆ ಅದೇ ಸಮಯದಲ್ಲಿ ಅವರು ಆ ಪ್ರಜ್ಞಾಶಕ್ತಿಯನ್ನು ಮನಸ್ಸಿಲ್ಲಿ ಹಾಗೂ ಜೀವನದಲ್ಲಿ ಮಾತ್ರವಲ್ಲದೆ, ಕೊನೆಯಲ್ಲಿ ದೇಹದಲ್ಲೂ ಕೆಳಗೆ ತರುತ್ತಾರೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/376**

ಕೆಳ ಪ್ರಜ್ಞೆಯು ಉನ್ನತ ಪ್ರಜ್ಞೆಯನ್ನು ಸೇರಿಕೊಳ್ಳಲು ಅದರೆಡೆಗೆ ಮೇಲಕ್ಕೆ ಏರುತ್ತದೆ – ಉನ್ನತ ಪ್ರಜ್ಞೆಯು ಕೆಳ ಪ್ರಜ್ಞೆಯನ್ನು ಪರಿವರ್ತಿಸಲು ಕೆಳಗಿಳಿಯುತ್ತದೆ. ಇದು ಈ ಸಾಧನೆಯಲ್ಲಿನ ಪ್ರಜ್ಞೆಯ ನಿಯಮವಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 30/417**

ಈ ಯೋಗದಲ್ಲಿ, ಸಂಪೂರ್ಣ ತತ್ತ್ವವು, ನಮ್ಮನ್ನು ನಾವು ದೈವೀ ಪ್ರಭಾವಕ್ಕೆ ತೆರೆದುಕೊಳ್ಳುವುದಾಗಿದೆ. ಆ ಪ್ರಭಾವವು ನಿಮ್ಮ (ತಲೆಯ) ಮೇಲಿದೆ ಮತ್ತು ಒಮ್ಮೆ ನೀವು ಅದರ ಬಗ್ಗೆ ಜಾಗೃತರಾಗಲು ಸಾಧ್ಯವಾದರೆ, ನೀವು ಅದನ್ನು ನಿಮ್ಮೊಳಗೆ, ಕೆಳಗೆ ಆಹ್ವಾನಿಸಬೇಕು. ಅದು ಮನಸ್ಸಿನೊಳಗೆ ಮತ್ತು ದೇಹದೊಳಗೆ ಶಾಂತಿಯಾಗಿ, ಬೆಳಕಾಗಿ, ಕಾರ್ಯ ನಿರ್ವಹಿಸುವಂಥ ಒಂದು ಶಕ್ತಿಯಾಗಿ ದೈವೀ ಶಕ್ತಿಯ (ಸಾಕಾರ ಅಥವಾ ನಿರಾಕಾರ) ಉಪಸ್ಥಿತಿಯಾಗಿ, ಆನಂದವಾಗಿ ಕೆಳಗಿಳಿಯುತ್ತದೆ. ನಾವು ಈ ಪ್ರಜ್ಞೆಯನ್ನು ಹೊಂದುವ ಮೊದಲು, ನಾವು ನಂಬಿಕೆಯನ್ನು ಹೊಂದಿರಬೇಕು ಮತ್ತು ತೆರೆದುಕೊಳ್ಳುವಿಕೆಗಾಗಿ ಅಭೀಪ್ಸೆಯನ್ನು ಹೊಂದಿರಬೇಕು. ಆಕಾಂಕ್ಷೆ, ಕರೆ, ಪ್ರಾರ್ಥನೆ, ಇವೆಲ್ಲವುಗಳೂ ಒಂದೇ ಸಂಗತಿಯ ರೂಪಗಳಾಗಿವೆ ಮತ್ತು ಎಲ್ಲವೂ ಪರಿಣಾಮಕಾರಿಯಾಗಿವೆ; ನಿಮಗೆ ಒಗ್ಗುವಂಥ ಅಥವಾ ನಿಮಗೆ ಸುಲಭವಾದ ರೂಪವನ್ನು ನೀವು ಆರಿಸಿಕೊಳ್ಳಬಹುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/106**

**ತಲೆಯ ಮೇಲಿರುವಂಥ ಶಕ್ತಿ ಅಥವಾ ಪ್ರಭಾವ**

ತಲೆಯ ಮೇಲಿರುವ ಶಕ್ತಿಯು, ಸಹಜವಾಗಿಯೇ ಶ್ರೀಮಾತೆಯವರದಾಗಿದೆ – ಇದು ಉನ್ನತ ಪ್ರಜ್ಞೆಯ ಶಕ್ತಿಯಾಗಿದ್ದು ಅದು ತನ್ನ ಅವರೋಹಣದ ಮಾರ್ಗವನ್ನು ಸಿದ್ಧಪಡಿಸಿಕೊಳ್ಳುತ್ತಿದೆ. ತನ್ನಲ್ಲಿ ಒಂದು ವಿಶಾಲವಾದ ಹಾಗೂ ಅಸೀಮಿತವಾದ ಅಸ್ತಿತ್ವದ, ಬೆಳಕಿನ, ಶಕ್ತಿಯ, ಶಾಂತಿಯ, ಆನಂದದ, ಇತ್ಯಾದಿಗಳ ಭಾವನೆಯನ್ನು ಹೊತ್ತು ತರುತ್ತಿರುವ ಉನ್ನತ ಪ್ರಜ್ಞೆಯು ಯಾವಾಗಲೂ ತಲೆಯ ಮೇಲೆ ಇರುತ್ತದೆ ಮತ್ತು ಆಧ್ಯಾತ್ಮಿಕ ಶಕ್ತಿಯು ಪ್ರಕೃತಿಯ ಮೇಲೆ ಕೆಲಸ ಮಾಡಲು ಬಂದಾಗ, ಅದು ಅಲ್ಲಿಂದಲೇ (ಮೇಲಿಂದ) ಬರುತ್ತದೆ. ಆದರೆ, ಪುರುಷನು ಸಿದ್ಧಗೊಳ್ಳದಿರುವ ಕಾರಣ, ಶಾಂತಿ, ಆನಂದ ಇತ್ಯಾದಿಗಳ ಪೂರ್ಣ ರೀತಿಯ ಅವರೋಹಣ ಸಂಭವಿಸುವುದಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 30/458**

ಉನ್ನತ, ಆಧ್ಯಾತ್ಮಿಕ ಅಥವಾ ದೈವೀ ಪ್ರಜ್ಞೆ ಅಥವಾ ಶ್ರೀಮಾತೆಯವರ ಪ್ರಜ್ಞೆ ಎಂದು ಕರೆಯಲ್ಪಡುವ ಉನ್ನತ ಪ್ರಜ್ಞೆಯು ನಿಮ್ಮ (ತಲೆಯ) ಮೇಲಿದೆ, ದೇಹದಲ್ಲಿ ಅಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 30/385**

*"ಭೌತಿಕ ಭಾಗಗಳಲ್ಲಿ ಶ್ರೀಮಾತೆಯವರ ಅವರೋಹಣ ಮತ್ತು ನನ್ನಲ್ಲಿ ಕೆಲಸ ಮಾಡುತ್ತಿರುವ ಶಕ್ತಿಗಳ ಅವರೋಹಣದ ನಡುವೆ ಸಂಬಂಧವೇನಾದರು ಇದೆಯೇ?"*

ಖಂಡಿತವಾಗಿ. ಉನ್ನತ ಶಕ್ತಿಗಳ ಅವರೋಹಣವು, ಒಂದು ಅರ್ಥದಲ್ಲಿ ಶ್ರೀಮಾತೆಯವರ ಅವರೋಹಣವೇ ಆಗಿದೆ – ಏಕೆಂದರೆ ಆ ಶಕ್ತಿಗಳ ಮೂಲಕ ಶ್ರೀಮಾತೆಯವರ ಅವರೋಹಣವಾಗುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/204**

**ಯೋಗ ಶಕ್ತಿ**

ಹೊಸ ಪ್ರಜ್ಞೆಯ ಬೆಳವಣಿಗೆಯೊಂದಿಗೆ ಜೊತೆಗೂಡುವಂಥ ಒಂದು ಶಕ್ತಿ ಇದೆ ಮತ್ತು ಅದು ಅದರೊಂದಿಗೆ ಬೆಳೆಯುತ್ತದೆ ಮತ್ತು ಮತ್ತು ಸ್ವತಃ ಪರಿಪೂರ್ಣವಾಗಲು

ಸಹಾಯ ಮಾಡುತ್ತದೆ. ಈ ಶಕ್ತಿಯು ಯೋಗ ಶಕ್ತಿಯಾಗಿದೆ. ಅದು ಇಲ್ಲಿ ಸುಪ್ತವಾಗಿದೆ ಮತ್ತು ಆಂತರಿಕ ಪುರುಷನ ಎಲ್ಲ ಕೇಂದ್ರಗಳಲ್ಲಿ (ಚಕ್ರಗಳಲ್ಲಿ) ಸುರುಳಿ ಸುತ್ತಿಕೊಂಡಿದೆ ಮತ್ತು ಅದು ಮೂಲದಲ್ಲಿದೆ. ತಂತ್ರಗಳಲ್ಲಿ ಅದನ್ನು ಕುಂಡಲಿನಿ ಶಕ್ತಿ ಎಂದು ಕರೆಯಲಾಗುತ್ತದೆ. ಆದರೆ ಅದು ನಮ್ಮ ಮೇಲೆಯೂ ಇದೆ, ನಮ್ಮ ತಲೆಯ ಮೇಲೆ ದೈವೀ ಶಕ್ತಿಯಾಗಿ ಇದೆ, ಅಲ್ಲಿ ಅದು ಸುರುಳಿಯಾಕಾರದಲ್ಲಿ ಇಲ್ಲ, ಸುಪ್ತವಾಗಿಲ್ಲ, ಸಿಲುಕಿಕೊಂಡಿಲ್ಲ, ಆದರೆ ಅದು ಜಾಗೃತವಾಗಿದೆ, ಹೆಚ್ಚು ಜ್ಞಾನವುಳ್ಳದ್ದಾಗಿದೆ, ಪ್ರಭಲವಾಗಿದೆ, ವಿಸ್ತೃತವಾಗಿದೆ, ವಿಶಾಲವಾಗಿದೆ; ಅದು ಅಲ್ಲಿ ಅಭಿವ್ಯಕ್ತಿಗಾಗಿ ಕಾಯುತ್ತಿರುತ್ತದೆ ಮತ್ತು ಈ ಶಕ್ತಿಗೆ ನಮ್ಮನ್ನು ನಾವು ತೆರೆದುಕೊಳ್ಳಬೇಕು – ಶ್ರೀಮಾತೆಯವರ ಪ್ರಭಾವಕ್ಕೆ ತೆರೆದುಕೊಳ್ಳಬೇಕು. ಮನಸ್ಸಿನಲ್ಲಿ ಅದು ದೈವೀ ಮನಸ್ಸಿನ ಶಕ್ತಿಯಾಗಿ ಅಥವಾ ವಿಶ್ವವ್ಯಾಪಿ ಮನಸ್ಸಿನ ಶಕ್ತಿಯಾಗಿ ತನ್ನನ್ನು ತಾನು ಪ್ರಕಟಿಸಿಕೊಳ್ಳುತ್ತದೆ ಮತ್ತು ಇದು ವೈಯಕ್ತಿಕ ಮನಸ್ಸು ಮಾಡಲಾಗದ ಎಲ್ಲವನ್ನೂ ಮಾಡಬಹುದು; ಅದು ಯೋಗ ಮನಸ್ಸಿನ ಶಕ್ತಿಯಾಗುತ್ತದೆ. ಅದೇ ರೀತಿಯಾಗಿ ಅದು ಪ್ರಾಣಿಕ ಅಥವಾ ಭೌತಿಕದಲ್ಲಿ ಪ್ರಕಟವಾಗಿ ಕಾರ್ಯ ಮಾಡಲು ಪ್ರಾರಂಭಿಸಿದಾಗ ಅದು ಒಂದು ಯೋಗ ಜೀವನ–ಶಕ್ತಿಯಾಗಿ ಅಥವಾ ಒಂದು ಯೋಗ ದೇಹ–ಶಕ್ತಿಯಾಗಿ ಪ್ರಕಟವಾಗುತ್ತದೆ. ಅದು ಬಾಹ್ಯವಾಗಿ ಮತ್ತು ಮೇಲಕ್ಕೆ ಸಿಡಿಯುತ್ತ, ಕೆಳಗಿನಿಂದ ವಿಶಾಲವಾಗಿ ವಿಸ್ತರಿಸುತ್ತ ಎಲ್ಲ ರೂಪಗಳಲ್ಲಿ ಜಾಗೃತಗೊಳ್ಳಬಹುದು; ಅಥವಾ ಅವರೋಹಣಗೊಳ್ಳಬಹುದು ಮತ್ತು ಅಲ್ಲಿ ಅದು ಸಂಗತಿಗಳಿಗೆ ಒಂದು ನಿರ್ದಿಷ್ಟ ಶಕ್ತಿಯಾಗಬಹುದು; ಅದು ದೇಹದಲ್ಲಿ ಕಾರ್ಯ ಮಾಡುತ್ತ, ತನ್ನ ಪ್ರಾಬಲ್ಯವನ್ನು ಸ್ಥಾಪಿಸುತ್ತ, ಮೇಲಿನಿಂದ ವಿಶಾಲವಾಗಿ ವಿಸ್ತರಿಸುತ್ತ ಕೆಳಗೆ ಹರಿಯಬಹುದು, ನಮ್ಮಲ್ಲಿರುವ ಅತ್ಯಂತ ನಿಮ್ನವನ್ನು ನಮ್ಮ ಮೇಲಿರುವ ಉನ್ನತಕ್ಕೆ ಜೋಡಿಸಬಹುದು, ವ್ಯಕ್ತಿಯ ವ್ಯಕ್ತಿತ್ವವನ್ನು ಬ್ರಹ್ಮಾಂಡ ವಿಶ್ವ–ವ್ಯಕ್ತಿತ್ವದಲ್ಲಿ ಅಥವಾ ಸ್ಪಷ್ಟತೆಯಲ್ಲಿ ಹಾಗೂ ಶ್ರೇಷ್ಠತೆಯಲ್ಲಿ ಬಿಡುಗಡೆಗೊಳಿಸಬಹುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 30/422**

## ಅಕ್ಷಯ ಆಧ್ಯಾತ್ಮಿಕ ಶಕ್ತಿ

ಹೇಗಾದರೂ, ಅಲ್ಲಿ ಶಕ್ತಿಯ ಮೂಲವಿರುವುದನ್ನು ಒಮ್ಮೆ ಕಂಡುಕೊಂಡರೆ, ಬಾಹ್ಯ ಸನ್ನಿವೇಶಗಳು ಮತ್ತು ಜೀವನದ ಭೌತಿಕ ಸ್ಥಿತಿಗಳು ಏನೇ ಆಗಿರಲಿ ಅದು ಎಂದಿಗೂ ತೀರುವುದಿಲ್ಲ, ಅದು ಆಧ್ಯಾತ್ಮಿಕ ಎಂದು ವಿವರಿಸಬಹುದಾದ ಶಕ್ತಿಯಾಗಿದೆ,

ಮತ್ತು ಇನ್ನು ಮುಂದೆ ಅದನ್ನು ಕೆಳಗಿನ ಸ್ಥರದಿಂದ, ಅಸಂಗತವಾದ ಆಳದಿಂದ ಸ್ವೀಕರಿಸಲ್ಪಡುವುದಿಲ್ಲ. ಆದರೆ ಅದನ್ನು ಮೇಲಿನ ಸ್ಥರದಿಂದ, ಬ್ರಹ್ಮಾಂಡದ ಸರ್ವೋಚ್ಚ ಮೂಲದಿಂದ ಮತ್ತು ಮನುಷ್ಯನಿಂದ, ಸಾಮಾನ್ಯ ಪ್ರಜ್ಞೆಯಾಚೆಗಿನ ಎಲ್ಲ ಪ್ರಭಾವಶಾಲಿ ಹಾಗೂ ನಿತ್ಯ ಜ್ಯೋತಿಯಿಂದ ಸ್ವೀಕರಿಸಲ್ಪಡುತ್ತದೆ. ಅದು ನಮ್ಮ ಸುತ್ತಲೂ ಇದೆ, ಎಲ್ಲದರಲ್ಲೂ ವ್ಯಾಪಿಸುತ್ತ ಇದೆ; ಮತ್ತು ಅದರೊಂದಿಗೆ ಸಂಪರ್ಕಕ್ಕೆ ಬಂದು ಅದನ್ನು ಸ್ವೀಕರಿಸಲು, ಅದಕ್ಕಾಗಿ ಪ್ರಾಮಾಣಿಕವಾಗಿ ಹಂಬಲಿಸುವುದು, ನಂಬಿಕೆಯಿಂದ ಹಾಗೂ ಶ್ರದ್ಧೆಯಿಂದ ಅದಕ್ಕೆ ನಮ್ಮನ್ನು ನಾವು ಮುಕ್ತವಾಗಿರಿಸಿಕೊಳ್ಳುವುದು, ನಮ್ಮ ಪ್ರಜ್ಞೆಯನ್ನು ವಿಸ್ತರಿಸಿ ಅದನ್ನು ವಿಶ್ವಾತ್ಮಕ ಪ್ರಜ್ಞೆಯೊಂದಿಗೆ ಗುರುತಿಸಿಕೊಳ್ಳುವುದು, ಇವುಗಳನ್ನು ಮಾಡಿದರೆ ಸಾಕು.

ಆರಂಭದಲ್ಲಿ, ಇದು ತುಂಬಾ ಕಷ್ಟಕರವೆಂದು ತೋರುತ್ತದೆ, ಆದರೆ ಅಸಾಧ್ಯವಲ್ಲ. ಈ ವಿದ್ಯಮಾನವನ್ನು ಹೆಚ್ಚು ನಿಕಟವಾಗಿ ಪರಿಶೀಲಿಸುವ ಮೂಲಕ, ಅದು ಪರಕೀಯವಲ್ಲ, ಸಾಮಾನ್ಯವಾಗಿ ಬೆಳೆದ ಮಾನವ ಪ್ರಜ್ಞೆಯಿಂದ ಅಷ್ಟೊಂದು ದೂರವಿಲ್ಲ ಎನ್ನುವುದನ್ನು ನಾವು ಕಾಣಬಹುದು. ವಾಸ್ತವವಾಗಿ, ತಮ್ಮ ಜೀವನದಲ್ಲಿ ಒಮ್ಮೆಯಾದರೂ, ತಮ್ಮನ್ನು ಮೀರಿ ಮೇಲಕ್ಕೆತ್ತಿದಂತೆ, ಕೆಲ ಸಮಯದವರೆಗೆ ಅವರು ಬಯಸಿದ್ದನ್ನು ಮಾಡುವಷ್ಟು ಸಮರ್ಥರನ್ನಾಗಿ ಮಾಡಿದಂಥ ಒಂದು ಅನಿರೀಕ್ಷಿತ ಮತ್ತು ಅಸಾಮಾನ್ಯ ಶಕ್ತಿಯಿಂದ ತುಂಬಿರುವಂತೆ ಅವರ ಜೀವನದಲ್ಲಿ (ಕನಿಷ್ಠ ಒಮ್ಮೆಯಾದರೂ) ಅನುಭವ ಹೊಂದಲಾರದಂಥ ಕೆಲವು ಜನರಿದ್ದಾರೆ; ಅಂತಹ ಕ್ಷಣದಲ್ಲಿ ಯಾವುದೂ ಕಷ್ಟವೆನಿಸುವುದಿಲ್ಲ ಮತ್ತು 'ಅಸಾಧ್ಯ' ಎಂಬ ಪದವು ತನ್ನ ಅರ್ಥವನ್ನು ಕಳೆದುಕೊಳ್ಳುತ್ತದೆ.

ಈ ಅನುಭವವು, ಎಷ್ಟೇ ಕ್ಷಣಿಕವಾಗಿದ್ದರೂ, ಯೋಗದ ಶಿಸ್ತನ್ನು ಭದ್ರಪಡಿಸಬಲ್ಲ ಮತ್ತು ನಿರ್ವಹಿಸಬಲ್ಲ ಉನ್ನತ ಶಕ್ತಿಯೊಂದಿಗಿನ ಸಂಪರ್ಕದ ಒಂದು ಕ್ಷಣಿಕ ದರ್ಶನವನ್ನು ನೀಡುತ್ತದೆ.

ಈ ಸಂಪರ್ಕವನ್ನು ಸಾಧಿಸುವ ವಿಧಾನವನ್ನು ಇಲ್ಲಿ ನೀಡಲಾಗುವುದಿಲ್ಲ. ಅಲ್ಲದೆ, ಇದು ಪ್ರತಿಯೊಬ್ಬ ವ್ಯಕ್ತಿಗೂ ವಿಶಿಷ್ಟವಾಗಿದೆ. ಆ ವ್ಯಕ್ತಿಯ ವೈಯಕ್ತಿಕ ಅಗತ್ಯಗಳಿಗೆ ತನ್ನನ್ನು ಹೊಂದಿಸಿಕೊಳ್ಳುತ್ತ ಮತ್ತು ಮುಂದೆ ಹೋಗಲು ಆತನಿಗೆ ಸಹಾಯ ಮಾಡುತ್ತ ಅದು ಆತ ನಿಂತ ಸ್ಥಳದಿಂದ (ಸ್ಥಿತಿಯಿಂದ) ಪ್ರಾರಂಭವಾಗುತ್ತದೆ. ಮಾರ್ಗವು ಕೆಲವೊಮ್ಮೆ ದೀರ್ಘ ಮತ್ತು ನಿಧಾನವಾಗಿರುತ್ತದೆ, ಆದರೆ ಫಲಿತಾಂಶವು

ನಾವು ತೆಗೆದುಕೊಳ್ಳುವ ತೊಂದರೆಗನುಗುಣವಾಗಿ ಯೋಗ್ಯವಾಗಿರುತ್ತದೆ. ಬಯಸಿದಂತೆ ಮತ್ತು ಎಲ್ಲಾ ಸಂದರ್ಭಗಳಲ್ಲಿಯೂ ಅದರ ಅಗಾಧ ಶುದ್ಧತೆಯಲ್ಲಿ ಸರ್ವಶಕ್ತವಾದಂಥ ಶಕ್ತಿಯ ಅಸೀಮಿತ ಮೂಲದ ಮೇಲೆ ಸೆಳೆಯಲು ಈ ಶಕ್ತಿಯ ಪರಿಣಾಮಗಳನ್ನು ನಾವು ಸುಲಭವಾಗಿ ಊಹಿಸಬಹುದು. ದಣಿವು, ಬಳಲಿಕೆ, ಅನಾರೋಗ್ಯ, ವೃದ್ಧಾಪ್ಯ ಮತ್ತು ಸಾವು ಸಹ ಈ ಪಥದಲ್ಲಿ ಕೇವಲ ಅಡೆತಡೆಗಳಾಗಿ ಪರಿಣಮಿಸುತ್ತದೆ. ಇವುಗಳನ್ನು ದೃಢವಾದ ಇಚ್ಛಾಶಕ್ತಿಯಿಂದ ನಿಶ್ಚಿತವಾಗಿ ಜಯಿಸಬಹುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 12/261–262**

## ಆಧ್ಯಾತ್ಮಿಕ ಬಲವನ್ನು ನಿರ್ದೇಶಿಸುವುದು

ಮೇಲಾಗಿ, ಅದು (ಆಧ್ಯಾತ್ಮಿಕ ಶಕ್ತಿಯು) ಅದರ ಫಲಿತಾಂಶಗಳಲ್ಲಿ ಮಾತ್ರವಲ್ಲದೆ, ಅದರ ಚಲನೆಗಳಲ್ಲಿಯೂ ಬಲವು / ಶಕ್ತಿಯು ಸ್ಪಷ್ಟವಾಗಿದೆ ಮತ್ತು ನಿಶ್ಚಿತವಾಗಿದೆ. ಯಾವಾಗ ನಾನು ಬಲ ಅಥವಾ ಪ್ರಭಾವದ ಅನುಭವಿಸುವಿಕೆಯ ಬಗ್ಗೆ ಮಾತನಾಡುತ್ತೇನೆಯೊ, ಅದರ ಅಸ್ಪಷ್ಟ ಅನುಭವ ಹೊಂದುವುದು ಎಂದು ನನ್ನ ಅರ್ಥವಲ್ಲ, ಆದರೆ ಅದನ್ನು ನಿಶ್ಚಿತವಾಗಿ ಅನುಭವಿಸುವುದಾಗಿದೆ ಮತ್ತು ಪರಿಣಾಮವಾಗಿ ಅದನ್ನು ನಿರ್ದೇಶಿಸಲು, ಅದನ್ನು ಕುಶಲತೆಯಿಂದ ನಿಭಾಯಿಸಲು, ಅದರ ಚಲನೆಯನ್ನು ಗಮನಿಸಲು, ಅದರ ತೀವ್ರತೆಯ ಬಗ್ಗೆ ಮತ್ತು ಅದೇ ರೀತಿ ಬೇರೆಯ ವಿರೋಧಿ ಶಕ್ತಿಗಳ ಬಗ್ಗೆ ಜಾಗೃತವಾಗಲು ಶಕ್ತವಾಗುವುದಾಗಿದೆ; ಇವೆಲ್ಲವುಗಳು ಸಾಧ್ಯವಾಗುವುದು ಹಾಗೂ ಸಾಮಾನ್ಯವಾಗುವುದು ಯೋಗದ ಬೆಳವಣಿಗೆಯಿಂದ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/181–182**

ನಿರ್ದಿಷ್ಟ? "ನಿರ್ದಿಷ್ಟ" ಇದರ ಅರ್ಥವೇನು? ಅದು (ಆಧ್ಯಾತ್ಮಿಕ ಶಕ್ತಿಯು) ತನ್ನದೇ ಆದ ನಿರ್ದಿಷ್ಟತೆಯನ್ನು / ನಿಶ್ಚಿತತೆಯನ್ನು ಹೊಂದಿದೆ; ನಾವು ಅರಿವಿರುವ ಮತ್ತು ಅದನ್ನು ಯಾವುದೇ "ದಿಕ್ಕಿನಲ್ಲಿ" ನಿರ್ದಿಷ್ಟವಾಗಿ ಅಥವಾ ನಾವು ಆಯ್ಕೆ ಮಾಡುವ ಯಾವುದೇ ಉದ್ದೇಶದ ಮೇಲೆ ಕಳಿಸಬಹುದಾದ ಒಂದು ರೂಪವನ್ನು ಅದು ಪಡೆದುಕೊಳ್ಳಬಹುದು (ಉದಾಹರಣೆಗೆ, ಒಂದು ತೊರೆಯಂತೆ).

ಇದು ಆಧ್ಯಾತ್ಮಿಕ ಪ್ರಜ್ಞೆಯಲ್ಲಿ ಅಂತರ್ಗತವಾಗಿರುವ ಶಕ್ತಿಯ ಬಗ್ಗೆ ಸತ್ಯದ ಹೇಳಿಕೆಯಾಗಿದೆ. ನಾನು ಮಾತನಾಡುತ್ತಿರುವುದು ಜಗತ್ತಿನ ಒಂದು ಹಂತದಲ್ಲಿ ಒಂದು ನಿರ್ದಿಷ್ಟ ಫಲಿತಾಂಶವನ್ನು ಪಡೆದುಕೊಳ್ಳಲು ಯಾವುದೇ ಸೂಕ್ಷ್ಮ ಶಕ್ತಿಯ (ಇದು ಆಧ್ಯಾತ್ಮಿಕ ಅಥವಾ ಮಾನಸಿಕ ಅಥವಾ ಪ್ರಾಣಿಕ ಶಕ್ತಿಯಾಗಿರಬಹುದು) ಉದ್ದೇಶಪೂರ್ವಕ ಬಳಕೆಯ ಬಗ್ಗೆ. ಅಗೋಚರವಾದ ಭೌತಿಕ ಶಕ್ತಿಗಳ ಅಲೆಗಳು ಇರುವಂತೆ (ವಿಶ್ವ ತರಂಗಗಳು ಇತ್ಯಾದಿ.) ಅಥವಾ ವಿದ್ಯುತ್ ಪ್ರವಾಹಗಳು ಇರುವಂತೆ, ಮನಸ್ಸಿನ ಅಲೆಗಳು, ಚಿಂತನೆಯ ಪ್ರವಾಹಗಳು, ಭಾವನೆಗಳ ಅಲೆಗಳು ಅಲ್ಲಿವೆ, ಉದಾ: ಕೋಪ, ದುಃಖ, ಇತ್ಯಾದಿ. ಇವುಗಳು ಹೊರ ಹೋಗಿ ಇತರರ ಮೇಲೆ, ತಿಳಿಯದೆ ಪರಿಣಾಮ ಬೀರುತ್ತದೆ (ಅವುಗಳು ಎಲ್ಲಿಂದ ಬರುತ್ತವೆ ಎಂದು ಗೊತ್ತಾಗದೆ) – ಅವರು ಪರಿಣಾಮವನ್ನು ಮಾತ್ರ ಅನುಭವಿಸುತ್ತಾರೆ. ಯಾರಾದರು, ನಿಗೂಢ ಅಥವಾ ಆಂತರಿಕ ಅರಿವನ್ನು ಹೊಂದಿದವರು, ಅವುಗಳು ಬರುವುದನ್ನು ಮತ್ತು ತನ್ನನ್ನು ಆಕ್ರಮಿಸುವುದನ್ನು ಆತ ಅನುಭವಿಸಬಹುದು. ಒಳ್ಳೆಯ ಅಥವಾ ಕೆಟ್ಟ ಪ್ರಭಾವಗಳು ಆ ರೀತಿಯಲ್ಲಿ ತಮ್ಮನ್ನು ತಾವು ಪ್ರಸಾರ ಮಾಡಿಕೊಳ್ಳಬಹುದು; ಅದು ಯಾವುದೇ ಉದ್ದೇಶವಿಲ್ಲದೆ ತಾನಾಗಿಯೇ ಸಂಭವಿಸಬಹುದು, ಆದರೆ ಅವುಗಳ ಉದ್ದೇಶಪೂರ್ವಕವಾದ ಬಳಕೆಯನ್ನು ಮಾಡಲು ಸಾಧ್ಯವಿದೆ. ಆಧ್ಯಾತ್ಮಿಕ ಅಥವಾ ಬೇರೆ ಶಕ್ತಿಯ ಉದ್ದೇಶಪೂರ್ವಕ ಉತ್ಪಾದನೆಯೂ ಇರಬಹುದು. ಯಾವುದೇ ಬಾಹ್ಯ ಕ್ರಿಯೆ, ಮಾತು ಅಥವಾ ಇತರ ಸಲಕರಣೆಗಳ ಸಹಾಯವಿಲ್ಲದೆ ನೇರವಾಗಿ ಕಾರ್ಯ ನಿರ್ವಹಿಸುವ ಪರಿಣಾಮಕಾರಿ ಇಚ್ಛಾಶಕ್ತಿಯ ಅಥವಾ ಕಲ್ಪನೆಯನ್ನೂ ಸಹ ಬಳಸಬಹುದು. ಇದು ಆ ಅರ್ಥದಲ್ಲಿ ನಿರ್ದಿಷ್ಟವಲ್ಲ, ಆದರೆ ಎಲ್ಲವೂ ಪರಿಣಾಮಕಾರಿಯಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/183**

### ಅವರೋಹಣಕ್ಕಾಗಿ ಶಿರದ ಮೇಲೆ ಕೇಂದ್ರೀಕರಿಸಿ

ಶಿರದ ಮೇಲೆ ಕೇಂದ್ರೀಕರಿಸುವ ಪ್ರಭಾವವು ಶಾಂತಿಯನ್ನು, ನಿಶ್ಶಬ್ದತೆಯನ್ನು ತರುವುದಾಗಿದೆ. ಈ ಪ್ರಭಾವವು, ದೇಹ ಭಾವದಿಂದ ಬಿಡುಗಡೆಯನ್ನು ತರುತ್ತದೆ ಮತ್ತು ನಿಮ್ಮ (ಮಾನಸಿಕ–ಪ್ರಾಣಿಕ–ಭೌತಿಕ) ಪ್ರಜ್ಞೆಯು ಮೇಲೆದ್ದು ಮೇಲಿರುವ ಉನ್ನತ ಪ್ರಜ್ಞೆಯನ್ನು ಕೂಡಿಕೊಳ್ಳಲು ಮಾರ್ಗವನ್ನು ಮುಕ್ತಗೊಳಿಸುವುದಕ್ಕಾಗಿ

ಮನಸ್ಸು ಮತ್ತು ಜೀವನದೊಡನೆ ತಾದಾತ್ಮ್ಯವನ್ನು ತರುತ್ತದೆ. ಈ ಮಾರ್ಗವು, ಉನ್ನತ ಪ್ರಜ್ಞೆಯ (ಆಧ್ಯಾತ್ಮಿಕ ಅಥವಾ ದೈವೀ) ಪ್ರಭಾವಗಳನ್ನು ಮನಸ್ಸು, ಜೀವನ ಹಾಗೂ ದೇಹದಲ್ಲಿ ಅವರೋಹಣಗೊಳ್ಳಲು ಸಹಾಯಕವಾಗುತ್ತದೆ. ಈ ಯೋಗದಲ್ಲಿ ಇದನ್ನು ಆಧ್ಯಾತ್ಮಿಕ ಪರಿವರ್ತನೆ ಎಂದು ಕರೆಯಲಾಗುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/307**

ಎರಡನೆಯ ತೆರೆಯುವಿಕೆಯು (ದೈವೀ ಪ್ರಭಾವಕ್ಕೆ) ತಲೆಯಲ್ಲಿರುವ ಪ್ರಜ್ಞೆಯ ಏಕಾಗ್ರತೆಯಿಂದ ಸಾಧಿಸುತ್ತದೆ. ತರುವಾಯ ಪುರುಷನಲ್ಲಿ (ಜೀವಿಯಲ್ಲಿ) ದೈವೀ ಶಾಂತಿ, ಪ್ರಭಾವ, ಬೆಳಕು, ಜ್ಞಾನ, ಆನಂದದ ಅವರೋಹಣಕ್ಕಾಗಿ ಅಭೀಪ್ಸೆ, ಕರೆ ಹಾಗೂ ನಿರಂತರವಾದ ಬಯಕೆಯು ಸಾಧಿಸುತ್ತದೆ. ಇದರಿಂದ ಮೊದಲು ಶಾಂತಿ ಅಥವಾ ಶಾಂತಿ ಹಾಗೂ ಶಕ್ತಿ ಒಟ್ಟಿಗೆ ಸಾಧಿಸಬಹುದು. ವಾಸ್ತವವಾಗಿ, ಕೆಲವರು ಮೊದಲು ಬೆಳಕನ್ನು ಪಡೆಯುತ್ತಾರೆ ಅಥವಾ ಕೆಲವರು ಹಠಾತ್ ಜ್ಞಾನವನ್ನು ಪಡೆದುಕೊಳ್ಳುತ್ತಾರೆ. ಕೆಲವರೊಂದಿಗೆ, ಮೊದಲು, ಅನಂತ ನಿಶ್ಶಬ್ದ, ಬಲ, ಬೆಳಕು ಅಥವಾ ಆನಂದವನ್ನು ಬಹಿರಂಗಪಡಿಸುವಂಥ ತೆರೆಯುವಿಕೆ ಅಲ್ಲಿರುತ್ತದೆ. ನಂತರ, ಅವರು ಆ ಹಂತಕ್ಕೆ ಏರುತ್ತಾರೆ ಇಲ್ಲವೆ ಈ ಸಂಗತಿಗಳು ನಿಮ್ಮ ಪ್ರಕೃತಿಯಲ್ಲಿ ಇಳಿಯಲು ಪ್ರಾರಂಭಿಸುತ್ತವೆ. ಇನ್ನು ಉಳಿದವರೊಂದಿಗೆ, ಮೊದಲು ಅವರೋಹಣವಾಗುವುದು ಶಿರದಲ್ಲಿ, ನಂತರ ಕೆಳಗೆ ಹೃದಯದಲ್ಲಿ, ನಂತರ ನಾಭಿ ಮತ್ತು ಅದರ ಕೆಳಗೆ ಮತ್ತು ಪೂರ್ತಿ ದೇಹದ ಮುಖಾಂತರ, ಇಲ್ಲದಿದ್ದರೆ ಒಂದು ವಿವರಿಸಲಾಗದ ತೆರೆಯುವಿಕೆ – ಯಾವುದೇ ಅವರೋಹಣದ ಅರಿವಿಲ್ಲದೆ – ಶಾಂತಿಯ, ಬೆಳಕಿನ, ವಿಶಾಲತೆಯ ಅಥವಾ ಪ್ರಭಾವದ ಇಲ್ಲವೆ ವಿಶ್ವ ಪ್ರಜೆಯಲ್ಲಿ ಒಂದು ಸಮತಲ ತೆರೆಯುವಿಕೆ ಅಥವಾ, ಇದ್ದಕ್ಕಿದ್ದಂತೆ ವಿಸ್ತಾರವಾದ ಮನಸ್ಸಿನಲ್ಲಿ, ಜ್ಞಾನದ ಒಂದು ಆಸ್ಫೋಟ. ಏನೇ ಬರಲಿ, ಅದನ್ನು ಸ್ವಾಗತಿಸಬೇಕು, ಏಕೆಂದರೆ ಎಲ್ಲದಕ್ಕೂ ಸ್ಪಷ್ಟವಾದ ನಿಯಮವಿಲ್ಲ, – ಆದರೆ ಶಾಂತಿಯು ಮೊದಲು ಬರದಿದ್ದರೆ, ವಿಜೃಂಭಣೆಯಲ್ಲಿ ತಾನು ಉಬ್ಬಿ ಹೋಗದಂತೆ ಅಥವಾ ಸಮತೋಲನವನ್ನು ಕಳೆದುಕೊಳ್ಳದಂತೆ ಎಚ್ಚರವಹಿಸಬೇಕು. ದೈವೀ ಬಲ ಅಥವಾ ಶಕ್ತಿ, ಶ್ರೀಮಾತೆಯವರ ಶಕ್ತಿಯು ಕೆಳಗಿಳಿದು ಹಿಡಿತ ಸಾಧಿಸಿದಾಗ ಪ್ರಜ್ಞೆಯ ಸಂಘಟನೆಯು ಪ್ರಾರಂಭವಾಗುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 30/327–328**

## ಮಾನಸಿಕ ಕೇಂದ್ರದಲ್ಲಿ ಏಕಾಗ್ರತೆ

ಮನಸ್ಸಿನಲ್ಲಿ ಏಕಾಗ್ರಗೊಳಿಸುವ ಮಾರ್ಗ ಒಂದಾದರೆ, ತಲೆಯಲ್ಲಿ ಕೇಂದ್ರೀಕರಿಸುವ ಮಾರ್ಗ ಇನ್ನೊಂದು. ಇದು ಮೇಲ್ಮೈ ಮನಸ್ಸಿನ ಮೌನವನ್ನು ತರುವಲ್ಲಿ ಯಶಸ್ವಿಯಾದರೆ, ಆಧ್ಯಾತ್ಮಿಕ ಅನುಭವವನ್ನು ಮತ್ತು ಆಧ್ಯಾತ್ಮಿಕ ಜ್ಞಾನವನ್ನು ಪಡೆದುಕೊಳ್ಳಲು ಹೆಚ್ಚು ಸಮರ್ಥವಾದಂಥ ಆಂತರಿಕ, ವಿಶಾಲವಾದ, ಆಳವಾದ, ಮನಸ್ಸನ್ನು ತೆರೆಯುತ್ತದೆ. ಆದರೆ ಒಮ್ಮೆ ಇಲ್ಲಿ ಕೇಂದ್ರೀಕರಿಸಿದ ನಂತರ ಮೌನ ಮಾನಸಿಕ ಪ್ರಜ್ಞೆಯನ್ನು ಮನಸ್ಸಿನ ಮೇಲಿರುವ ಎಲ್ಲದಕ್ಕೂ ಮೇಲಕ್ಕೆ ತೆರೆಯಬೇಕು. ಸ್ವಲ್ಪ ಸಮಯದ ನಂತರ ಪ್ರಜ್ಞೆಯು ಮೇಲಕ್ಕೆ ಏರುತ್ತಿರುವುದನ್ನು ಅನುಭವಿಸುತ್ತೇವೆ ಮತ್ತು ಕೊನೆಯಲ್ಲಿ, ದೀರ್ಘಕಾಲ ದೇಹದಲ್ಲಿ ಕಟ್ಟಿಟ್ಟಂಥ ಮುಚ್ಚಳದಾಚೆ ಮೇಲೆ ಹೋಗುತ್ತದೆ. ಅದು ತಲೆಯ ಮೇಲೆ ಒಂದು ಕೇಂದ್ರವನ್ನು ಕಂಡುಕೊಳ್ಳುತ್ತದೆ ಮತ್ತು ಅದು ಅಲ್ಲಿ ಅನಂತದಲ್ಲಿ ಮುಕ್ತಗೊಳಿಸಲ್ಪಡುತ್ತದೆ. ಅಲ್ಲಿ ಅದು ವಿಶ್ವಾತ್ಮನೊಡನೆ, ದೈವೀ ಶಾಂತಿ, ಬೆಳಕು, ಶಕ್ತಿ, ಜ್ಞಾನ, ಆನಂದದೊಂದಿಗೆ ಸಂಪರ್ಕಕ್ಕೆ ಬರಲು ಪ್ರಾರಂಭಿಸುತ್ತದೆ. ಅದರೊಳಗೆ ಪ್ರವೇಶಿಸಲು ಮತ್ತು ಅದಾಗಲು ಪ್ರಾರಂಭಿಸುತ್ತದೆ. ಪ್ರಕೃತಿಯಲ್ಲಿ ಈ ಸಂಗತಿಗಳ ಅವರೋಹಣವನ್ನು ಅನುಭವಿಸಲು ಪ್ರಾರಂಭಿಸುತ್ತದೆ. ಮನಸ್ಸಿನಲ್ಲಿ ಸ್ತಬ್ಧತೆಯ ಆಕಾಂಕ್ಷೆಯೊಂದಿಗೆ ತಲೆಯಲ್ಲಿ ಕೇಂದ್ರೀಕರಿಸುವುದು ಮತ್ತು ಮೇಲಿರುವ ಆತ್ಮನ ಮತ್ತು ದೈವಿಕತೆಯ ಸಾಕ್ಷಾತ್ಕಾರವು ಏಕಾಗ್ರತೆಯ ಎರಡನೆಯ ಮಾರ್ಗವಾಗಿದೆ. ಆದಾಗ್ಯೂ, ತಲೆಯಲ್ಲಿ ಪ್ರಜ್ಞೆಯ ಏಕಾಗ್ರತೆಯು ಮೇಲಿರುವ ಕೇಂದ್ರಕ್ಕೆ ಆರೋಹಣದ ಸಿದ್ಧತೆಯಾಗಿದೆ ಎಂಬುದನ್ನು ನೆನಪಿಟ್ಟುಕೊಳ್ಳುವುದು ಬಹಳ ಮುಖ್ಯ; ಇಲ್ಲದಿದ್ದರೆ ನಾವು ನಮ್ಮ ಸ್ವಂತ ಮನಸ್ಸಿನಲ್ಲಿ ಮತ್ತು ಅದರ ಅನುಭವಗಳಲ್ಲಿ ಬಂಧಿಯಾಗಬಹುದು ಅಥವಾ ಹೆಚ್ಚೆಂದರೆ, ಅಲ್ಲಿ ಉತ್ಕೃಷ್ಟ ಆಧ್ಯಾತ್ಮಿಕ ಸ್ಥಿತಿಗೆ ಏರುವ ಬದಲು ಮೇಲಿರುವ ಸತ್ಯದ ಪ್ರತಿಬಿಂಬವನ್ನು ಮಾತ್ರ ಪಡೆದುಕೊಳ್ಳಬಹುದು. ಕೆಲವರಿಗೆ ಮಾನಸಿಕ ಏಕಾಗ್ರತೆಯು ಸುಲಭವಾಗಿದೆ, ಕೆಲವರಿಗೆ ಹೃದಯ ಕೇಂದ್ರದಲ್ಲಿನ ಏಕಾಗ್ರತೆಯು ಸುಲಭವಾಗಿದೆ; ಕೆಲವರು ಎರಡನ್ನೂ ಪರ್ಯಾಯವಾಗಿ ಮಾಡುವಂಥ ಸಾಮರ್ಥ್ಯ ಹೊಂದಿದ್ದಾರೆ – ಆದರೆ, ನಾವು ಮಾಡಲು ಸಾಧ್ಯವಾದರೆ, ಹೃದಯ ಕೇಂದ್ರದಿಂದ ಪ್ರಾರಂಭಿಸುವುದು ಹೆಚ್ಚು ಅಪೇಕ್ಷಣೀಯವಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/7**

**ಅವರೋಹಣವು ಸಂಭವಿಸಬೇಕಾದರೆ (ನಮ್ಮನ್ನು ನಾವು) ಹೇಗೆ ತೆರೆದುಕೊಳ್ಳಬೇಕು**

ಸಾಧಕನು, ದೈವೀ ಶಕ್ತಿಯು (ಕೊನೆ ಪಕ್ಷ ಅದರ ಫಲಿತಾಂಶಗಳು) ತನ್ನಲ್ಲಿ ಕಾರ್ಯ ನಿರ್ವಹಿಸುತ್ತಿರುವುದರ ಬಗ್ಗೆ ಜಾಗೃತವಾಗಿರುವ ಒಂದು ಸ್ಥಿತಿ ಇದೆ. ಮತ್ತು ತನ್ನ ಸ್ವಂತ ಮಾನಸಿಕ ಚಟುವಟಿಕೆಗಳಿಂದ, ಪ್ರಾಣಿಕ ಚಡಪಡಿಕೆಯಿಂದ ಅಥವಾ ದೈಹಿಕ ಅಸ್ಪಷ್ಟತೆಯಿಂದ ಮತ್ತು ಜಡತ್ವದಿಂದ ಅದರ ಅವರೋಹಣವನ್ನು ಅಥವಾ ಅದರ ಕ್ರಿಯೆಯನ್ನು ತಡೆಯುವುದಿಲ್ಲ. ಅದು ದೈವಕ್ಕೆ ಮುಕ್ತತೆಯಾಗಿದೆ. ಶರಣಾಗತಿಯು, ತೆರೆದುಕೊಳ್ಳುವ ಅತ್ಯುತ್ತಮ ಮಾರ್ಗವಾಗಿದೆ; ಆದರೆ ಎಲ್ಲಿಯವರೆಗೆ ಶರಣಾಗತಿ ಇರುವುದಿಲ್ಲವೊ, ಒಂದು ನಿರ್ದಿಷ್ಟ ಹಂತದವರೆಗೆ ಆಕಾಂಕ್ಷೆ ಮತ್ತು ಶಾಂತತೆಯು ಸಹಾಯ ಮಾಡಬಹುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/105–106**

ಪ್ರತಿ ಹಂತದಲ್ಲೂ ದೈವೀ ಅನುಗ್ರಹದಲ್ಲಿ ನಂಬಿಕೆಯನ್ನಿಡುವುದು, ಆಲೋಚನೆಯನ್ನು ನಿರಂತರವಾಗಿ ದೈವದೆಡೆಗೆ ನಿರ್ದೇಶಿಸುವುದು ಮತ್ತು ಪುರುಷನು (ಜೀವನು) ತೆರೆದುಕೊಳ್ಳುವವರೆಗೂ ತನ್ನನ್ನು ತಾನು ಅರ್ಪಿಸಿಕೊಳ್ಳುವುದು ಮತ್ತು ಆಧಾರದಲ್ಲಿ ಶ್ರೀಮಾತೆಯವರ ಶಕ್ತಿಯು ಕೆಲಸ ಮಾಡುತ್ತದೆ ಎಂದು ಭಾವಿಸುವುದು ಯೋಗದಲ್ಲಿ ಪ್ರಮುಖ ವಿಷಯವಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/166**

ಹೌದು, ಮನಸ್ಸನ್ನು ಶಾಂತಗೊಳಿಸುವ ಮೂಲಕ ನೀವು ಶ್ರೀಮಾತೆಯವರನ್ನು ಕರೆದು ಅವರಿಗೆ (ಅವರ ಪ್ರಭಾವಕ್ಕೆ) ತೆರೆದುಕೊಳ್ಳಲು ಸಾಧ್ಯವಾಗುತ್ತದೆ. ಹಿತವಾದ ಪರಿಣಾಮವು ಚೈತ್ಯನ ಒಂದು ಸ್ಪರ್ಶವಾಗಿತ್ತು – ಈ ಸ್ಪರ್ಶವು, ಚೈತ್ಯನನ್ನು ತನ್ನ ಆಂತರಿಕ ಶಾಂತಿ, ಪ್ರೀತಿ ಮತ್ತು ಸಂತೋಷದ ಉಡುಗೊರೆಯೊಂದಿಗೆ ತೆರೆಯುವಿಕೆಯನ್ನು ಸಿದ್ಧಪಡಿಸುಂಥ ಸ್ಪರ್ಶಗಳಲ್ಲಿ ಒಂದಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/163**

ಮೊದಲನೆಯದರಿಂದ ಮುಕ್ತತೆಯು ಯಾವಾಗಲೂ ಪೂರ್ಣಗೊಳ್ಳುವುದಿಲ್ಲ – ಪುರುಷನ ಒಂದು ಭಾಗವು ತೆರೆದುಕೊಳ್ಳುತ್ತದೆ, ಪ್ರಜ್ಞೆಯ ಉಳಿದ ಭಾಗಗಳು

ಇನ್ನೂ ಮುಚ್ಚಲ್ಪಟ್ಟಿರುತ್ತವೆ ಅಥವಾ ಅರ್ಧ ಮಾತ್ರ ತೆರೆದುಕೊಂಡಿರುತ್ತವೆ – ಎಲ್ಲ ಭಾಗಗಳು ತೆರೆದುಕೊಳ್ಳುವವರೆಗೆ ನಾವು ಹಂಬಲಿಸಬೇಕು. ಉತ್ತಮ ಹಾಗೂ ಅತ್ಯಂತ ಪ್ರಭಾವೀ ಸಾಧಕನೊಂದಿಗೂ ಸಹ, ಪೂರ್ಣ ತೆರೆದುಕೊಳ್ಳುವಿಯು ಸಮಯವನ್ನು ತೆಗೆದುಕೊಳ್ಳುತ್ತದೆ; ಅಥವಾ ಯಾವುದೇ ಪ್ರಯಾಸವಿಲ್ಲದೆ ಒಮ್ಮಿಂದೊಮ್ಮೆಗೆ ಎಲ್ಲವನ್ನೂ ತೊರೆಯಲು (ತ್ಯಜಿಸಲು) ಸಮರ್ಥರಾದವರು ಯಾರೂ ಇಲ್ಲ. ಆದ್ದರಿಂದ, ನಿಮ್ಮ ಕರೆಯು ಆಲಿಸಲ್ಪಡುವುದಿಲ್ಲ ಎಂದು ಭಾವಿಸಲು ಯಾವುದೇ ಕಾರಣವಿಲ್ಲ – ಮಾನವ ಸಹಜ ಪ್ರಕೃತಿಯ ತೊಂದರೆಗಳು ಶ್ರೀಮಾತೆಯವರಿಗೆ ತಿಳಿದಿವೆ ಆದ್ದರಿಂದ ಅವರ ಸಹಾಯ ಅಲ್ಲಿರುತ್ತದೆ. ಯಾವಾಗಲೂ ನಿಷ್ಠನಾಗಿರು, ಯಾವಾಗಲೂ ಹಂಬಲಿಸು, ಆಗ ಪ್ರತಿ ತೊಂದರೆಯ ನಂತರ ಪ್ರಗತಿ ಇರುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/156–157**

**ಎಳೆಯಬೇಡಿ, ಶಾಂತಿಯಿಂದ ಕಾಯಿರಿ, ಹಂಬಲಿಸಿ ಮತ್ತು ಸೆಳೆಯಿರಿ**

ದೈವೀ ಅವರೋಹಣದ ಒತ್ತಡವನ್ನು ನೀವು ಸಹಿಸಬೇಕಾದರೆ, ನೀವು ತುಂಬಾ ಬಲಶಾಲಿಯಾಗಿರಬೇಕು ಮತ್ತು ಶಕ್ತಿಶಾಲಿಯಾಗಿರಬೇಕು, ಇಲ್ಲದಿದ್ದರೆ ನೀವು ಆ ಒತ್ತಡವನ್ನು ಸಹಿಸಿಕೊಳ್ಳಲಾರಿರಿ. ಕೆಲವು ವ್ಯಕ್ತಿಗಳು, "ದೈವೀ ಶಕ್ತಿಯು ಏಕೆ ಇನ್ನೂ ಬಂದಿಲ್ಲ?" ಎಂದು ಕೇಳುತ್ತಾರೆ. ಏಕೆಂದರೆ ಅದಕ್ಕೆ ಅವರು ಇನ್ನೂ ಸಿದ್ಧರಾಗಿಲ್ಲ. ದೈವೀ ಅವರೋಹಣದ ಒಂದು ಚಿಕ್ಕ ಅಂಶವು ನಿಮ್ಮನ್ನು ಹಾಡುವಂತೆ, ಕುಣಿಯುವಂತೆ ಮತ್ತು (ಉತ್ಸಾಹದಲ್ಲಿ) ಅರಚುವಂತೆ ಮಾಡುವುದಾದರೆ, ಇಡೀ ದೈವೀ ಅವರೋಹಣವಾದರೆ ಏನು ಸಂಭವಿಸಬಹುದು? ಊಹಿಸಿ!

ಆದ್ದರಿಂದ ದೇಹದಲ್ಲಿ, ಪ್ರಾಣದಲ್ಲಿ, ಮತ್ತು ಮನಸ್ಸಿನಲ್ಲಿ ಬಲವಾದ ಮತ್ತು ದೃಢವಾದ ಆಧಾರವಿಲ್ಲದ ಜನರಿಗೆ "ಎಳೆಯಬೇಡಿ" ಎಂದು ಹೇಳುತ್ತೇವೆಯೇ. ಇದರರ್ಥ "ದೈವೀ ಶಕ್ತಿಗಳನ್ನು ಎಳೆಯಲು ಪ್ರಯತ್ನಿಸಬೇಡಿ, ಆದರೆ ಶಾಂತಿ ಮತ್ತು ಸ್ಥಿರತೆಯಿಂದ ಕಾಯಿರಿ" ಎಂದು ನಾವು ಹೇಳುತ್ತೇವೆಯೇ. ಯಾಕೆಂದರೆ ಅವರಿಗೆ ಅವರೋಹಣವನ್ನು ಸಹಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಆದರೆ ಅಗತ್ಯವಾದ

ಆಧಾರ ಮತ್ತು ಅಡಿಪಾಯವನ್ನು ಹೊಂದಿರುವವರಿಗೆ ಇದಕ್ಕೆ ವಿರುದ್ಧವಾಗಿ, "ಹಂಬಲಿಸಿ ಮತ್ತು ಸೆಳೆಯಿರಿ" ಎಂದು ನಾವು ಹೇಳುತ್ತೇವೆ. ಯಾಕೆಂದರೆ ಅವರು ಸ್ವೀಕರಿಸಲು ಸಾಧ್ಯವಾಗುತ್ತದೆ ಮತ್ತು ದೈವದಿಂದ ಅವರೋಹಣಗೊಳ್ಳುವ ಶಕ್ತಿಗಳಿಂದ ಅಸಮಾಧಾನಗೊಳ್ಳುವುದಿಲ್ಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/11**

ನನ್ನ ಪ್ರಕಾರ ("ಬಲವು ಬರಲಿ" ಎಂದು ಬರೆಯುವ ಮೂಲಕ) ನೀವು ಅದನ್ನು ಕೆಳಕ್ಕೆ ಎಳೆಯಬೇಕಾಗಿಲ್ಲ, ಆದರೆ ನಿಮ್ಮ ಪೂರ್ಣ ಆಕಾಂಕ್ಷೆ ಮತ್ತು ಒಪ್ಪಿಗೆಯಿಂದ ನೀವು ಅದರ ಪ್ರವೇಶಕ್ಕೆ ಸಹಾಯ ಮಾಡಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 30/480**

ಈ ರೀತಿಯ ತಿಳಿಗೇಡಿತನ ಮತ್ತು ದೌರ್ಬಲ್ಯ ಮತ್ತು ಗಲಭೆ ಸಂಭವಿಸಬಾರದು. ಅದು ಬಂದಾಗ, ದೇಹದಿಂದ ಸಮೀಕರಿಸಲ್ಪಡುವುದಕ್ಕಿಂತ ಹೆಚ್ಚಿನ ಬಲವನ್ನು ಎಳೆಯಲಾಗುತ್ತಿದೆ ಎಂದು ಅದು ತೋರಿಸುತ್ತದೆ. ಅಂತಹ ಸಮಯದಲ್ಲಿ, ನೀವು ತೊಂದರೆಯು ಸರಿದು ಹೋಗುವವರೆಗೆ ಮತ್ತು ಸರಿಯಾದ ಸಮತೋಲನ ಸಾಧಿಸುವವರೆಗೆ ನೀವು ಸಮಾಧಾನವಾಗಿರಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 30/481**

ಬಲವಂತವಾಗಿ ಬೆಳಕನ್ನು ಕೆಳಕ್ಕೆ ತರುವುದು (ಅದನ್ನು ಕೆಳಕ್ಕೆಳೆಯುದು) ಖಂಡಿತವಾಗಿಯೂ ತಪ್ಪು. ಅತಿಮಾನಸವನ್ನು ತ್ವರಿತವಾಗಿ ಪಡೆಯಲಾಗದು. ಸಮಯ ಬಂದಾಗ, ಅದು ತಾನಾಗಿಯೇ ತೆರೆದುಕೊಳ್ಳುತ್ತದೆ – ಆದರೆ, ಅದಕ್ಕಿಂತ ಮೊದಲು ಮಾಡುವುದು ಬಹಳಷ್ಟಿದೆ ಮತ್ತು ಅದನ್ನು ತಾಳ್ಮೆಯಿಂದ ಮತ್ತು ಅವಸರವಿಲ್ಲದೆ ಮಾಡಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 30/481 – ಶ್ರೀ ಅರವಿಂದರು**

# ಅವತರಣದ ನಿಬಂಧೆಗಳು

**– ಅನು: ಶ್ರೀ ರಮೇಶ್ ಸರಗೂರ, ಮೈಸೂರು**

## ಪ್ರಶಾಂತತೆಯಲ್ಲಿ ಮತ್ತು ಏಕಾಗ್ರತೆಯಲ್ಲಿ ಸ್ವೀಕಾರ

ಮೌನ ಮತ್ತು ಏಕಾಗ್ರತೆಯಲ್ಲಿ ಇಳಿದು ಬರುತ್ತಿರುವ ಶಕ್ತಿಯನ್ನು ಸ್ವೀಕರಿಸುವುದು ವಿವೇಕಯುಕ್ತವಾದದ್ದು. ಆದರೆ ಈ ಮೌನ ಮತ್ತು ಏಕಾಗ್ರತೆಯು ತನ್ನ ಬಯಕೆಯಂತೆ ತಾನು ಸ್ವಚ್ಛಂದವಾಗಿ ನಡೆಯಲು ಅವಕಾಶವಿಲ್ಲದೆ ಹೋದದ್ದರಿಂದ ಉತ್ಪನ್ನವಾಗುವ ಪ್ರಾಣಮಯದ ಅಸಮಾಧಾನದ ಫಲವಾಗಿರಬೇಕಾಗಿಲ್ಲ.

ಈ ಏಕಾಗ್ರತೆ ಮತ್ತು ಮೌನವು ಅಗಾಧವಾದ ಶಾಂತಿಯಿಂದ ತುಂಬಿರುವುದು ಮಾತ್ರವಲ್ಲದೇ ಅತ್ಯಂತ ಉತ್ಕಟವಾದ ಸಂತೋಷದಿಂದಲೂ ಕೂಡಿರಬೇಕು. ಆಗ ಸಾಧಕರಿಗೆ ಈ ಸಂಚಲನೆಯು ನೈಜ ಮತ್ತು ಶುದ್ಧ ಎಂದು ತಿಳಿಯುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 17/54**

ಶಾಂತವಾಗಿರುವುದು ತೆರೆದುಕೊಂಡಿರುವುದು ಶಕ್ತಿಗೆ ಕರೆ ನೀಡಿರುವುದು ಅಥವಾ ಅದರ ಅವರೋಹಣಕ್ಕಾಗಿ ಕಾಯುತ್ತಿರುವುದು ಯಾವಾಗಲೂ ಅತ್ಯುತ್ತಮವೇ ಆಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/136**

## ನಿನ್ನ ಅಭೀಪ್ಸೆಗೆ ಉತ್ತರವಾಗಿ ಶಕ್ತಿಯ ಅವರೋಹಣ

ಎಲ್ಲಕ್ಕಿಂತಲೂ ಮಿಗಿಲಾಗಿ ಆ ಆಂತರಿಕ ಜ್ವಾಲೆ, ಅಭೀಪ್ಸೆ ಬೆಳಕಿಗಾಗಿ ಹಂಬಲ... ನಿನ್ನನ್ನು ಆವರಿಸಿಕೊಳ್ಳುವ ಅದೊಂದು ಬಗೆಯ ಪ್ರಕಾಶಮಯ ಉತ್ಸಾಹ. ಕರಗಿಹೋಗಬೇಕು, ತನ್ನನ್ನು ತಾನು ಸಮರ್ಪಿಸಿಕೊಳ್ಳಬೇಕು, ಕೇವಲ ಪರಮಾತ್ಮನಿಗಾಗಿ ಬದುಕಬೇಕು ಎಂಬ ವಿರೋಧಿಸಲಾಗದ ಆಂತರಿಕ ಅಗತ್ಯ.

ಆಗ ಆ ಕ್ಷಣದಲ್ಲಿ ನೀನು ನಿನ್ನ ಅಭೀಪ್ಸೆಯ ಅನುಭವವನ್ನು ಹೊಂದುವೆ. ಆದರೆ ಆ ಕ್ಷಣವು ಪರಿಪೂರ್ಣವಾಗಿ ಪ್ರಾಮಾಣಿಕವಾಗಿರಬೇಕು ಮತ್ತು ಸಾಧ್ಯವಿದ್ದಷ್ಟು ಸಮಗ್ರವಿರಬೇಕು. ಇವೆಲ್ಲವೂ ಕೇವಲ ತಲೆಯಲ್ಲಿ ಮಾತ್ರವೇ ಸಂಭವಿಸಬಾರದು. ಎಲ್ಲೆಡೆಯಲ್ಲಿ, ಶರೀರದ ಎಲ್ಲಾ ಜೀವಕೋಶಗಳಲ್ಲಿಯೂ ಆಗಬೇಕು. ಈ ಅಪ್ರತಿಹತ ಅಗತ್ಯವನ್ನು ಪ್ರಜ್ಞೆಯು ಪರಿಪೂರ್ಣವಾಗಿ ಹೊಂದಿರಬೇಕು. ಇದು ಸ್ವಲ್ಪ ಕಾಲ

ಇದ್ದು, ನಂತರ ಕ್ಷೀಣವಾಗಿ, ತದನಂತರ ಅದೃಶ್ಯವಾಗಿ ಬಿಡುತ್ತದೆ. ಬಹುದೀರ್ಘ ಕಾಲ ಇವುಗಳನ್ನು ಧಾರಣೆ ಮಾಡಲು ನೀನಗೆ ಸಾಧ್ಯವಾಗುವುದಿಲ್ಲ. ಒಂದು ಕ್ಷಣದ ನಂತರ ಅಥವಾ ಮರುದಿನ ಅಥವಾ ಸ್ವಲ್ಪ ಕಾಲ ನಂತರ, ಇದ್ದಕ್ಕಿದ್ದಂತೆ ಇದಕ್ಕೆ ತದ್ವಿರುದ್ಧವಾದ ಅನುಭವ ನಿನಗಾಗುವುದು. ಪ್ರಜ್ಞೆಯ ಆರೋಹಣವನ್ನು ನೀನು ಅನುಭವಿಸುವುದಕ್ಕೆ ಬದಲಾಗಿ, ಅದರ ಅವರೋಹಣವನ್ನು ಪ್ರತ್ಯುತ್ತರವಾಗಿ ಪಡೆಯುತ್ತಿರುವ ಭಾವನೆ ಉಂಟಾಗುವುದು. ಮತ್ತು ಕೇವಲ ಉತ್ತರವಲ್ಲದೆ ಬೇರೆ ಯಾವುದೂ ಅಸ್ತಿತ್ವದಲ್ಲಿರುವುದಿಲ್ಲ. ಕೇವಲ ದೈವೀ ಚಿಂತನೆ, ದೈವೀ ಸಂಕಲ್ಪ, ದೈವೀ ಶಕ್ತಿ, ದೈವೀ ಕ್ರಿಯೆಯಲ್ಲದೆ ಬೇರೆ ಏನು ಇರುವುದಿಲ್ಲ. ಮತ್ತು ನೀನು ಸಹ ಅಲ್ಲಿರುವುದಿಲ್ಲ.

ಅದು ನಮ್ಮ ಅಭೀಪ್ಸೆಗೆ ಪ್ರತ್ಯುತ್ತರವಾಗಿದೆ ಎಂದು ಹೇಳಬಹುದು. ನಂತರ ಅದು ತಕ್ಷಣವೇ ಘಟಿಸಬಹುದು – ಅದು ಬಹಳ ಅಪರೂಪ ಆದರೆ ಸಂಭವಿಸಬಹುದು. ನೀನು ಎರಡು ಕ್ರಿಯೆಗಳನ್ನು ಏಕಕಾಲಕ್ಕೆ ಅನುಭವಿಸಿದರೆ, ಆ ಸ್ಥಿತಿಯು ಪರಿಪೂರ್ಣವಾದುದು. ಸಾಮಾನ್ಯವಾಗಿ ಅವು ಪರ್ಯಾಯವಾಗಿ, ಒಂದರ ಬಳಿಕ ಒಂದು ಅತ್ಯಂತ ಹತ್ತಿರವಾಗಿ, ಸಂಪೂರ್ಣ ಐಕ್ಯಸ್ಥಿತಿಯಾಗುವ ಕ್ಷಣದವರೆಗೂ ಸಂಭವಿಸುತ್ತವೆ. ಬಳಿಕ ಯಾವುದೇ ವ್ಯತ್ಯಾಸ ಇರುವುದಿಲ್ಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/56–57**

**ಸ್ವೀಕಾರ ಮನೋಭಾವದ ಶಾಂತಿಯು ಇರಲಿ**

ನಿನ್ನ ಸತ್ತೆಯ ಹಲವಾರು ಸ್ತರಗಳಲ್ಲಿ ಸ್ವೀಕಾರ ಮನೋಭಾವದ ಶಾಂತಿಯು ಸ್ಥಾಯಿಯಾಗಿ ಸಿದ್ಧತೆಯಾದ ಬಳಿಕ ಆ ಉನ್ನತ ಶಕ್ತಿಯು ಇಳಿದು ಬರುತ್ತದೆ. ಆ ಪರಾಶಕ್ತಿಗೆ ಆರೋಹಿಸಬೇಕೆಂಬ ಅಭೀಪ್ಸೆಯಿರಲಿ ಅಥವಾ ಇಳಿದು ಬರುವ ಆ ಶಕ್ತಿಗೆ ನಿರ್ಲಿಪ್ತವಾಗಿ ತೆರೆದುಕೊಳ್ಳಬೇಕೆಂಬ ಗ್ರಹಣ ಶೀಲತೆಯಿರಲಿ, ಸತ್ತೆಯ ಎಲ್ಲಾ ಭಾಗಗಳಲ್ಲಿಯೂ ಪರಿಪೂರ್ಣ ಶಾಂತಿ ನೆಲೆ ನಿಲ್ಲುವುದು ಅದಕ್ಕೆ ಸೂಕ್ತವಾದ ನೆಲೆಗಟ್ಟಾಗಿರುತ್ತದೆ. ನಿನ್ನ ಪ್ರಶಾಂತ ಅಭೀಪ್ಸೆಯಲ್ಲಿ ಸಾಕಷ್ಟು ಬಲ ಅಥವಾ ಸಂಕಲ್ಪ ಶಕ್ತಿಯಿಲ್ಲದಿದ್ದರೆ ಮತ್ತು ಮೇಲೇರಿ ಹೋಗಲು ಸ್ವಲ್ಪ ಪ್ರಯತ್ನವು ಅಗತ್ಯವಿದೆ ಎಂದು ನೀನು ಭಾವಿಸಿದರೆ, ಅದನ್ನು ತಾತ್ಕಾಲಿಕ ಸಾಧನವಾಗಿ ನೀನು ಉಪಯೋಗಿಸುತ್ತಾ ಹೋಗಬಹುದು. ಸಹಜವಾದ ತೆರೆದುಕೊಳ್ಳುವಿಕೆಯಲ್ಲಿನ ಮೌನದ ಕರೆ ಅಥವಾ

ಸರಳವಾದ ಪ್ರಯತ್ನರಹಿತ ಸಂಕಲ್ಪವು ಪರಾಶಕ್ತಿಯ ಕಾರ್ಯವನ್ನು ಆವಾಹಿಸುವ ತನಕ ನೀನು ನಿನ್ನ ಪ್ರಯತ್ನವನ್ನು ಮುಂದುವರಿಸಬಹುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 36/301**

ಕೆಲವರು ಶಕ್ತಿಯ ಅಥವಾ ಶಾಂತಿಯು ಇಳಿದು ಬರಲು ಆರಂಭಿಸಿದಾಗ, ಶರೀರದ ಹೊಯ್ದಾಟವನ್ನು ಅನುಭವಿಸುತ್ತಾರೆ. ಏಕೆಂದರೆ ಇದು ಶಕ್ತಿ ಸ್ವೀಕಾರಕ್ಕೆ ಅನುವು ಮಾಡಿಕೊಡುತ್ತದೆ. ಶಕ್ತಿಯ ಅವರೋಹಣವನ್ನು ತಡೆದುಕೊಂಡು ಧಾರಣೆ ಮಾಡಲು ದೇಹವು ಸಶಕ್ತವಾದಾಗ ಈ ಹೊಯ್ದಾಟವು ನಿಂತು ಹೋಗುತ್ತದೆ.

ಶಾಂತಿಯು ಧ್ಯಾನದ ಸಮಯದಲ್ಲಿ ಪೂರ್ಣವಾಗಿ ಇಳಿದು ಬರುತ್ತದೆ ಏಕೆಂದರೆ ಆ ಸಮಯದಲ್ಲಿ ಶ್ರೀಮಾತೆಯವರ ಏಕಾಗ್ರತೆಯು ಉನ್ನತ ಪ್ರಜ್ಞೆಯ ಶಕ್ತಿಯನ್ನು ಕೆಳಗಿಳಿಸುತ್ತದೆ. ಹಾಗೆ ಅದು ಕೆಳಗಿಳಿಯಲು ಆರಂಭಿಸಿದಾಗ ಶಕ್ತಿಯ ಪ್ರಮಾಣವೂ ಹೆಚ್ಚುತ್ತದೆ ಮತ್ತು ಅದು ಸಾಧಕನ ಸ್ವೀಕಾರ ಸಾಮರ್ಥ್ಯವನ್ನು ಅಧಿಕಗೊಳಿಸುತ್ತದೆ. ಎಲ್ಲ ಸಂದರ್ಭ ಸನ್ನಿವೇಶಗಳಲ್ಲಿ ಇದು ಸ್ವಾಭಾವಿಕ ವಾಗುವವರೆಗೆ ಮತ್ತು ಎಲ್ಲಾ ಕಾಲದಲ್ಲಿಯೂ ಸುಲಲಿತವಾಗುವವರೆಗೆ, ಅವರೋಹಣವು ಸ್ಥಿರವಾಗಿ ದೀರ್ಘಕಾಲ ಸಾಧ್ಯವಾಗುವವರೆಗೆ ಇದು ನಡೆಯುತ್ತದೆ. ಸಾಧಕನು ಪ್ರಶಸ್ತಿಯನ್ನು ಸ್ವೀಕರಿಸುವುದಕ್ಕೋಸ್ಕರ ತನ್ನ ಪ್ರಜ್ಞೆಯನ್ನು ಎಷ್ಟು ಪ್ರಶಾಂತವಾಗಿಟ್ಟುಕೊಳ್ಳಲು ಸಾಧ್ಯವೋ ಅಷ್ಟು ಶಾಂತವಾಗಿ ಇರಬೇಕು. ಉನ್ನತ ಆಧ್ಯಾತ್ಮಿಕ ಪ್ರಜ್ಞೆಯ ಶಾಂತಿ, ಶಕ್ತಿ, ಬೆಳಕು ಮತ್ತು ಆನಂದವು ಮೇಲ್ಗಡೆ ಆವೃತವಾಗಿ ಎಲ್ಲರಲ್ಲಿಯೂ ಇದೆ. ಅದು ಕೆಳಗಿಳಿದು ಬರಲು ನಾವು ಒಂದು ಬಗೆಯಲ್ಲಿ ಊರ್ಧ್ವಮುಖವಾಗಿ ತೆರೆದುಕೊಳ್ಳಬೇಕಾದ ಅಗತ್ಯವಿದೆ – ಮನಸ್ಸಿನ ಶಾಂತಿ ಮತ್ತು ಅವರೋಹಣದ ಪ್ರಭಾವಕ್ಕೆ ಏಕಾಗ್ರತೆಯಿಂದ ನಿಷ್ಕ್ರಿಯ ಭಾವದಿಂದ ವಿಶಾಲವಾಗಿ ಒಡ್ಡಿಕೊಳ್ಳುವುದು ಪರಾಶಕ್ತಿಯ ಇಳಿಯುವಿಕೆಗೆ ಅತ್ಯುತ್ತಮವಾದ ಸ್ಥಿತಿಯಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 30/481–482**

**ಶುದ್ಧಿ ಮತ್ತು ಶಾಂತಿಯನ್ನು ಕೆಳಗಡೆಗೆ ಕರೆ**

ಆ ರೀತಿಯಲ್ಲಿ ನೀನು ಹಿಂದಕ್ಕೆ ಹೆಜ್ಜೆ ಇಟ್ಟು ನಿಂತಾಗ, ನಿನ್ನೊಳಗೆ, ಮೇಲುಸ್ತರದ ಪರಿಶ್ರಮದ, ಹಿಂದೆ ಶಾಂತ ಸ್ಥಿತಿಯನ್ನು ಕಂಡುಕೊಳ್ಳಲು ಸುಲಭವಾಗುವುದು. ಅಲ್ಲಿಂದ ನೀನು ನಿನ್ನನ್ನು ಮುಕ್ತಗೊಳಿಸಲು ನಮ್ಮ ನೆರವಿಗಾಗಿ

ಪರಿಣಾಮಕಾರಿಯಾಗಿ ಕರೆ ನೀಡಬಹುದು. ದೈವೀ ಉಪಸ್ಥಿತಿ, ಮೌನ, ಶಾಂತಿ, ಶುದ್ಧಿ, ಶಕ್ತಿ, ಬೆಳಕು, ಆನಂದ, ವೈಶಾಲ್ಯತೆ... ಎಲ್ಲವೂ ಮೇಲ್ಗಡೆ ಇದ್ದು, ನಿನ್ನೊಳಗೆ ಇಳಿದು ಬರಲು ತಮ್ಮ ಹಾದಿ ಕಾಯುತ್ತಾ ಇವೆ. ಈ ಶಾಂತಿಯನ್ನು ನಿನ್ನ ಹಿನ್ನೆಲೆಯಲ್ಲಿ ಕಂಡುಕೋ. ನಿನ್ನ ಮನಸ್ಸು ಕೂಡ ಹೆಚ್ಚು ಹೆಚ್ಚು ಶಾಂತವಾಗುವುದು. ಪ್ರಶಾಂತ ಮನಸ್ಸಿನಿಂದ ನೀನು ಮೊದಲು ಶುದ್ಧಿ ಮತ್ತು ಶಾಂತಿಯನ್ನು ನಂತರ ದೈವೀ ಶಕ್ತಿಯನ್ನು ಕೆಳಗೆ ಬರಲು ಕರೆಯಬಹುದು. ಕೆಳಗಿಳಿದು ಬರುತ್ತಿರುವ ಈ ಶುದ್ಧಿ ಮತ್ತು ಶಾಂತಿಯನ್ನು ನೀನು ಭಾವಿಸಬಲ್ಲೆಯಾದರೆ, ಅದು ಕೆಳಗಿಳಿದು ನೆಲೆನಿಂತು ಸ್ಥಾಪಿತವಾಗುವವರೆಗೂ ನೀನು ಮರಳಿ ಮರಳಿ ಅದನ್ನು ಆಹ್ವಾನಿಸಬಲ್ಲೆ. ನಿನ್ನೊಳಗಿನ ಚಲನೆಗಳನ್ನು ಬದಲಾಯಿಸಲು ಮತ್ತು ನಿನ್ನ ಪ್ರಜ್ಞೆಯನ್ನು ಪರಿವರ್ತಿಸಲು ಶಕ್ತಿಯು ಕಾರ್ಯ ಗೈಯುತ್ತಿರುವುದನ್ನು ನೀನಾಗ ಕಾಣಬಲ್ಲೆ. ಈ ಕ್ರಿಯೆಯಲ್ಲಿ ನೀನು ಶ್ರೀಮಾತೆಯ ಸಾನ್ನಿಧ್ಯದ ಮತ್ತು ಅವರ ಶಕ್ತಿಯ ಅರಿವನ್ನು ಹೊಂದುವೆ. ಒಮ್ಮೆ ಇದನ್ನು ಸಾಧಿಸಿಯಾದರೆ,ಉಳಿದದ್ದೆಲ್ಲವೂ ಕಾಲಾನುಕ್ರಮದಲ್ಲಿ ಸಿದ್ಧಿಯಾಗುವುದು. ಇದೇ ನಿಜವಾದ ಮತ್ತು ಧೈರ್ಯ ಪ್ರಕೃತಿಯ ವಿಕಾಸವು ಕಾಲದ ಹಾದಿಯಲ್ಲಿ ಸಾಧಿಸಲ್ಪಡುವುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 31/741**

ನೀನು ಅನುಭವಿಸುತ್ತಿರುವ ಶಾಂತಿ, ಶುದ್ದಿ ಮತ್ತು ಮೌನವು ನಿನ್ನ ನಿನ್ನ ಪ್ರಜ್ಞೆಯು ಉನ್ನತವಾದ ದೈವೀ ಪ್ರಜ್ಞೆಯೊಡನೆ ಒಂದು ಮಿಲನವನ್ನು ಅಥವಾ ಪ್ರಬಲವಾದ ಸಂಪರ್ಕವನ್ನು ಸಾಧಿಸಿದ್ದರಿಂದ ಉಂಟಾದದ್ದು. ಅದು ಆರಂಭದಲ್ಲಿ ಸ್ಥಾಯಿಯಾಗಿರುವುದು ಶಕ್ಯವಿಲ್ಲ. ಆದರೆ ಮೌನ ಮತ್ತು ಶಾಂತಿಯು ಹೆಚ್ಚು ಹೆಚ್ಚು ನೆಲೆ ನಿಲ್ಲುವುದರ ಮುಖಾಂತರ, ಮರಳಿ ಮರಳಿ ಇಳಿಯುವುದರ ಮೂಲಕ ಅದು ಸ್ಥಿರವಾಗಬಲ್ಲದು. ಅಂತಿಮವಾಗಿ ನಿತ್ಯಶಾಂತಿಯು ಮತ್ತು ದೈವೀ ಪ್ರಜ್ಞೆಯ ಮೌನವು ಕೆಳಗಿನ ಅಪರಾ ಪ್ರಕೃತಿಯೊಳಗೆ ಪರಿಪೂರ್ಣವಾಗಿ ಇಳಿದು ಬರುತ್ತವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/66**

ನಿನ್ನ ಸತ್ತೆಯ ಒಳಗೆ ನೀನು ಅನುಭವಿಸುವ ಶುದ್ಧಿಯು ಅದೇಕೆ ಕೇವಲ ಕಲ್ಪನೆಯಾಗಿರಬೇಕು? ಉನ್ನತವಾದ ದೈವೀ ಪ್ರಜ್ಞೆಯು ನಿನ್ನ ಸತ್ತೆ ಅಥವಾ ಆಧಾರವನ್ನು ಸ್ಪರ್ಶಿಸಿದಾಗ ಅದು ಒಂದು ಮೂಲಭೂತವಾದ ಶುದ್ಧಿಯನ್ನು

ಉಂಟುಮಾಡುತ್ತದೆ. ನಿನ್ನ ಸತ್ತೆಯ ಎಲ್ಲಾ ಭಾಗಗಳು ಆ ಶುದ್ಧಿಯನ್ನು ಹಂಚಿಕೊಳ್ಳುತ್ತವೆ. ಅಥವಾ ನಿನ್ನ ಬಾಹ್ಯ ಸತ್ತೆಯು ಸಕ್ರಿಯವಾಗಿ ಅದನ್ನು ಹಂಚಿಕೊಳ್ಳಲು ಸಾಧ್ಯವಾಗದೇ ಹೋದರೂ ಸಹ, ಅದು ಸಾಕಷ್ಟು ಮೂಕವಾಗುತ್ತದೆ. ಇದರಿಂದಾಗಿ ಆಂತರಿಕ ಸತ್ತೆಯು ಯಾವುದೇ ಅನುಭವವನ್ನು ಪಡೆಯಲು ಅಡಚಣೆಯುಂಟಾಗದ ಸಂದರ್ಭ ಏರ್ಪಡುತ್ತದೆ. ಆದರೆ ಈ ಸ್ಥಿತಿಯು ದೀರ್ಘಕಾಲ ಇರಲಾರದು. ಏಕೆಂದರೆ ಅದೊಂದು ಪರಿಪೂರ್ಣವೂ ಮತ್ತು ಶಾಶ್ವತವೂ ಆಗಿರುವ ಅವರೋಹಣವಾಗಿರದೆ ಪೂರ್ವಸಿದ್ಧತೆಯ ಪ್ರಾಥಮಿಕ ಸ್ಪರ್ಶವಾಗಿದೆ. ಆದರೆ ಅದು ನಡೆಯುವಷ್ಟು ಕಾಲ ಅದು ಸತ್ಯವೇ ಆಗಿದೆ. ಕಾಮ ವಾಸನೆಯು ನಿಜವಾಗಿಯೂ ಬಾಹ್ಯ ಸತ್ತೆಯಲ್ಲಿರುವಂತಾದ್ದು. ಪ್ರಕೃತಿಯಲ್ಲಿ ಅದರ ವಿಕೃತಿ ಅಥವಾ ಅದರ ದೋಷಪೂರ್ಣ ಪ್ರಾತಿನಿಧಿಕತೆಯು ಬಾಹ್ಯವಾದುದು. ಯೌಗಿಕ ಅನುಭವವು ಸತತವಾಗಲು ಮತ್ತು ಸ್ವಾಭಾವಿಕವಾಗಲು ಇವು ಪ್ರಮುಖವಾದ ಅಡಚಣೆಗಳಾಗಿವೆ. ಸಾಮಾನ್ಯವಾಗಿ ಅಂತಹ ವಿರೋಧಿ ಅಂಶವು ಒಂದು ಯೋಗಾನುಭವದ ನಂತರ ಮತ್ತೆ ತನ್ನನ್ನು ತಾನು ದೃಢೀಕರಿಸಲು ಯತ್ನಿಸುವುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 30/443**

## ದೈವೀ ಶಕ್ತಿಗೆ ಮಾತ್ರವೇ ತೆರೆದುಕೊಳ್ಳಬೇಕು

ಆ ಸಾಧಕನಿಂದ ಶಕ್ತಿಯು ಹೊರಗೆ ಹರಿದು ಹೋಗಲು ಕಾರಣವೇನೆಂದರೆ ಆತನು ಎಲ್ಲಾ ಪ್ರಭಾವಗಳಿಗೂ ವಿವೇಚನೆಯಿಲ್ಲದೆ, ನಿಷ್ಕ್ರಿಯನಾಗಿ, ಜಡನಾಗಿ ತನ್ನನ್ನು ತೆರೆದುಕೊಳ್ಳಲು ಅನುವು ಮಾಡಿಕೊಟ್ಟಿರುವುದು. ಒಬ್ಬನು ಕೇವಲ ದೈವೀ ಶಕ್ತಿಗೆ ಮಾತ್ರವೇ ತನ್ನನ್ನು ತಾನು ಅಡ್ಡಿಪಡಿಸದೇ ತೆರೆದುಕೊಳ್ಳಬೇಕು. ಎಲ್ಲಾ ಬಗೆಯ ಶಕ್ತಿಗಳಿಗೂ ತನ್ನನ್ನು ಒಡ್ಡಿಕೊಂಡು ವಶವಾಗದಂತೆ ಎಚ್ಚರಿರಬೇಕು. ಮತ್ತೊಬ್ಬ ವ್ಯಕ್ತಿಯಲ್ಲಿ ಪರಮಾತ್ಮನನ್ನು ಕಾಣುತ್ತೇನೆ ಎಂಬ ಆತುರದಲ್ಲಿ ತನ್ನನ್ನು ತೆರೆದು–ಕೊಂಡಾಗ, ಆ ವ್ಯಕ್ತಿಯಲ್ಲಿ ಕಾರ್ಯ ಮಾಡುತ್ತಿರುವ ಯಾವುದೇ ಶಕ್ತಿಯ ಅಧೀನಕ್ಕೆ, ಪ್ರಭಾವಕ್ಕೆ ಸಾಧಕನು ಒಳಗಾಗಿ ಬಿಡುವ ಸಾಧ್ಯತೆ ಇರುತ್ತದೆ. ಈಗಾಗಲೇ ಸಾಧಕನಲ್ಲಿ ಸಂಚಯವಾಗಿರುವ ದೈವೀ ಶಕ್ತಿಯು ಆ ವ್ಯಕ್ತಿಯ ಸಂಪರ್ಕದಿಂದ ಸೋರಿಹೋಗುವ ಸಂಭವವೂ ಇರುತ್ತದೆ. ಆದ್ದರಿಂದ ಅವನು ಈ ವಿಧಾನವನ್ನು ಅನುಸರಿಸುವುದು ಸೂಕ್ತವಲ್ಲ. ಮೇಲ್ಗಡೆಯ ಶಾಂತಿ ಮತ್ತು ಶಕ್ತಿಯು ಇಳಿದು ಬರಲೆಂದು, ಪೂರ್ಣಶುದ್ಧಿಯು ನೆಲೆ ನಿಲ್ಲಲಿ ಎಂದು ಅವನು ಅಭೀಪ್ಸಿಸಲಿ. ತನ್ನನ್ನು ತಾನು

ಕೇವಲ ಶಕ್ತಿಗೆ ಮಾತ್ರವೇ ತೆರೆದುಕೊಳ್ಳಲಿ. ಸರ್ವವ್ಯಾಪಿಯಾಗಿರುವ ಪರಮಾತ್ಮನನ್ನು ಕಾಣುವಂತಹ ಅನುಭವಗಳು (ಕೇವಲ ಆತನು ಆಯ್ಕೆ ಮಾಡಿರುವ ವ್ಯಕ್ತಿಯಲ್ಲಿ ಮಾತ್ರವಲ್ಲದೆ) ಈ ಯೌಗಿಕ ಸಿದ್ಧತೆಯ ಫಲವಾಗಿ ಮೂಡಿಬರುತ್ತವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 30/492–493**

*ನಾನು ಧ್ಯಾನಿಸಲು ಪ್ರಯತ್ನಿಸಿದೆ. ಆದರೆ ಮನಸ್ಸು ಸಹಕಾರ ನೀಡದಿದ್ದುದರಿಂದ, ಧ್ಯಾನದ ಪ್ರಯತ್ನವನ್ನು ಬಿಟ್ಟುಬಿಡಬೇಕಾಯಿತು.*

ನೀನು ಧ್ಯಾನಿಸಲು ಅಸಮರ್ಥನಾದಾಗ, ಶಾಂತನಾಗಿರು. ಶ್ರೀಮಾತೆಯ ಶಾಂತಿ ಅಥವಾ ಶಕ್ತಿಯನ್ನು ನಿನ್ನೊಳಗೆ ಕರೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/215**

ಅಂತರಾತ್ಮ ಚೈತ್ಯ ಪುರುಷದ ಜೊತೆಗಿನ ಸಂಪರ್ಕದ ಈ ಅಪೂರ್ವ ಕ್ಷಣಗಳು ಸಾಮಾನ್ಯವಾಗಿ ನಮ್ಮ ಜೀವನದ ಒಂದು ನಿರ್ಣಾಯಕ ತಿರುವನ್ನು ಗುರುತು ಮಾಡುತ್ತವೆ. ಅವು ಭವಿಷ್ಯದ ಮುಂದಿನ ಹೆಜ್ಜೆಗಳಾಗಿವೆ. ಪ್ರಜ್ಞೆಯ ಪ್ರಗತಿಯ ದ್ಯೋತಕವಾಗಿವೆ. ಬಹುತೇಕ ಅವು ಬಾಳಿನಲ್ಲಿ ಒಂದು ಸಂದಿಗ್ಧತೆ ಅಥವಾ ಬಿಕ್ಕಟ್ಟಿಗೆ ಸಂಬಂಧಿಸಿವೆ. ಒಂದು ಪರಮ ಉತ್ಕಟ ಸನ್ನಿವೇಶದಲ್ಲಿ ಇದು ಘಟಿಸಿ, ಸಮಗ್ರ ಸತ್ತೆಯಲ್ಲಿ ಒಂದು ಕರೆಯು ಮೂಡಿಬರುತ್ತದೆ. ಈ ಕರೆಯು ಎಷ್ಟು ಶಕ್ತಿಶಾಲಿಯೂ, ಪ್ರಭಾವಯುಕ್ತವೂ ಆಗಿರುತ್ತದೆಂದರೆ, ಅಪ್ರಜ್ಞೆಯ ಆವರಣವನ್ನು ಆಂತರಿಕ ಪ್ರಜ್ಞೆಯು ಸೀಳಿಕೊಂಡು ಹೊರಹೊಮ್ಮುತ್ತದೆ. ಮೇಲಿನ ಸ್ತರದಲ್ಲಿ ಅದು ಸರ್ವ ಪ್ರಕಾಶಮಾನವಾಗಿ ಗೋಚರವಾಗುತ್ತದೆ. ಸತ್ತೆಯ ಈ ಒಳಗಿನ ಕರೆಯು ಸಶಕ್ತವಾಗಿದ್ದಾಗ, ಅದು ಒಂದು ದೈವೀ ಮಾತೃಕೆಯನ್ನೋ, ಒಂದು ದಿವ್ಯ ವ್ಯಷ್ಟಿಯನ್ನೋ, ಒಂದು ದೈವಿ ಪಾರ್ಶ್ವ ಭೂಮಿಕೆಯನ್ನು ಕೆಳಗೆ ಇಳಿದು ಬರುವಂತೆ ಮಾಡಬಲ್ಲದು. ಹಾಗೆ ಇಳಿದು ಬಂದ ದೈವೀ ಅಂಶವು ನಿನ್ನೊಡನೆ ಒಂದು ನಿರ್ದಿಷ್ಟ ಕ್ಷಣದಲ್ಲಿ ಸಂಯೋಜನೆ–ಗೊಳ್ಳುತ್ತದೆ. ಗೊತ್ತುಪಡಿಸಿದ ನಿಗದಿತ ಕಾರ್ಯವನ್ನು ನೆರವೇರಿಸುತ್ತದೆ, ಒಂದು ಕದನದಲ್ಲಿ ಗೆಲುವು ಸಾಧಿಸುತ್ತದೆ ಅಥವಾ ಯಾವುದೋ ಅಂಶವನ್ನು ಅಭಿವ್ಯಕ್ತಿಸುತ್ತದೆ. ಈ ಕಾರ್ಯವು ಈಡೇರಿದ ಬಳಿಕ ಆ ಮಾತೃಕೆಯು ಬಹಳಷ್ಟು ಸಾರಿ ಸ್ವಸ್ಥಾನಕ್ಕೆ ಹಿಂದಿರುಗುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/341**

**ಅವರೋಹಣಕ್ಕಾಗಿ ಅಭೀಪ್ಸಿಸು**

ಸತ್ಯಕ್ಕಾಗಿ, ಪ್ರಜ್ಞೆಗಾಗಿ, ಶಾಂತಿ, ಆನಂದ, ಜ್ಞಾನಗಳಿಗಾಗಿ ಪ್ರಾರ್ಥನೆ, ದೈವೀ ಶಕ್ತಿಯು ಇಳಿದು ಬರಲೆಂದು ಒಂದು ಆಮಂತ್ರಣ ಅಥವಾ ಒಬ್ಬ ಸಾಧಕನ ಪ್ರಯತ್ನದ ಗುರಿ ಸಾಧನೆಗಾಗಿ ಆಂತರಿಕ ಸತ್ತೆಯು ಊರ್ಧ್ವಮುಖವಾಗಿ ಹೊರಳುವುದೇ, ದೈವಕ್ಕೆ ಮೊರೆ ಇಡುವುದೇ, ಹಂಬಲಿಸಿ ಕರೆಯನ್ನು ನೀಡುವುದೇ ಅಭೀಪ್ಸೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/56–57**

*ಶ್ರೀಮಾತೆಯವರ ಕೃತಿಯಿಂದ ಶಾಂತಿ ಮತ್ತು ಸಮತೆಯು ಮೇಲಿನಿಂದ ಕೆಳಗೆ ಇಳಿದು ಬರುವುವೇ?*

ಹಾಗೆ ಅವು ಕೆಳಗಿಳಿದಾಗ, ಅದು ಅಂತರಾತ್ಮ ಜೀವದ ಅಭೀಪ್ಸೆ ಮತ್ತು ಶ್ರೀಮಾತೆಯ ಕೃಪೆಯ ಸಂಯೋಗದಿಂದ ಆಗಿರುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/165**

ಶ್ರೀಮಾತೆಯ ಶಾಂತಿಯು ನಿನ್ನ ಮೇಲ್ಗಡೆ ಇದ್ದೇ ಇದೆ – ಅಭೀಪ್ಸೆಯಿಂದ ಮತ್ತು ಶಾಂತವಾದ ತೆರೆದುಕೊಳ್ಳುವಿಕೆಯಿಂದ ಅದು ಇಳಿದು ಬರುತ್ತದೆ. ಅದು ಪ್ರಾಣಮಯವನ್ನು ಮತ್ತು ಶರೀರವನ್ನು ತನ್ನ ವಶಕ್ಕೆ ತೆಗೆದುಕೊಂಡು ಬಳಿಕ ಸಮತ್ವವು ಸುಲಭವಾಗುತ್ತದೆ ಮತ್ತು ಅಂತ್ಯದಲ್ಲಿ ತಂತಾನೆ ಸಹಜ ಸ್ವಾಭಾವಿಕವಾಗಿಬಿಡುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/135–136**

ನೀನು ಶಕ್ತಿಯನ್ನು ಮೇಲಿನಿಂದ ಕೆಳಕ್ಕೆ ಕರೆಯಲು (ಅಲ್ಲಿ ಅದು ಯಾವಾಗಲೂ ಇದ್ದೇ ಇದೆ) ಏಕಾಗ್ರತೆಯನ್ನು ಸಾಧಿಸಬಹುದು. ಮೊದಲಿಗೆ ಶ್ರೀಮಾತೆಯ ಶಾಂತಿ ಮತ್ತು ಮೌನ, ನಂತರ ಅವರ ಶಕ್ತಿ ಮತ್ತು ಬೆಳಕು ಮತ್ತು ಆನಂದ. ಅದು ಯಾವಾಗಲೂ ಶಿರಸ್ಸಿನ ಮೇಲ್ಗಡೆ ಇದ್ದೇ ಇರುವುದು – ಆದರೆ ಮಾನವ ಮನಸ್ಸಿನ ಸ್ತರದಿಂದ ಅದು ಅತಿಚೇತನವಾಗಿದೆ – ಅಭೀಪ್ಸೆ ಮತ್ತು ಏಕಾಗ್ರತೆಯಿಂದ ಅದು ಜಾಗೃತವಾಗಬಲ್ಲದು ಮತ್ತು ಮನಸ್ಸು, ಪ್ರಾಣ ಹಾಗೂ ದೇಹದ ಒಳಗೆ ಅದು ಇಳಿದು ಪ್ರವೇಶಿಸುವಂತೆ ಆಧಾರವು ಅದಕ್ಕೆ ತೆರೆದುಕೊಳ್ಳಬಲ್ಲದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/155**

ಶಾಂತಿಯನ್ನು ಮೊದಲಿಗೆ ಹೃದಯ ಮತ್ತು ನಾಭಿ ಪ್ರದೇಶಕ್ಕೆ ಕೆಳಗಿಳಿಸಬೇಕು. ಇದರಿಂದ ಅದಕ್ಕೆ ಒಂದು ಬಗೆಯ ಆಂತರಿಕ ಸ್ಥಿರತೆ ಉಂಟಾಗುತ್ತದೆ. ಅದು ಪರಿಪೂರ್ಣವಲ್ಲದಿರಬಹುದು. ಅಭೀಪ್ಸೆ, ಪ್ರಬಲವೂ ಪ್ರಶಾಂತವೂ ಆದ ಇಚ್ಛಾಶಕ್ತಿ, ಯಾವ ಭಾಗಗಳಿಗೆ ನೀನು ಶಾಂತಿಯನ್ನು ಆವಾಹಿಸುವೆಯೋ ಅವುಗಳ ಒಳಗೆ ಇರುವ (ಇಲ್ಲಿ ಅದು ಭಾವ ಕೋಶ ಮತ್ತು ಉನ್ನತ ಪ್ರಾಣದ ಭಾಗಗಳು) ದೈವವಿರೋಧೀ ಅಂಶಗಳ ದೃಢವಾದ ನಿರಾಕರಣೆ.... ಇದಕ್ಕೆ ಹೊರತಾಗಿ ಬೇರೆ ಯಾವುದೇ ಮಾರ್ಗವೂ ಇರುವುದಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 30/452 – ಶ್ರೀ ಅರವಿಂದರು**

ಸಾಮಾನ್ಯವಾಗಿ ಪ್ರಕೃತಿಯ ಮೇಲೆ ಕಾರ್ಯಮಾಡುವ ಮತ್ತು ಹೃದಯದಲ್ಲಿ ದೈವೀ ಸಾನ್ನಿಧ್ಯಕ್ಕೆ ಅದನ್ನು ಸಿದ್ಧಪಡಿಸುವ ದೈವೀ ಶಕ್ತಿಯೇ ಕೆಳಗಿಳಿದು ಬರುವುದು. ಹೀಗೆ ಅವರೋಹಣವಾಗುವ ದೈವೀ ಶಕ್ತಿಯನ್ನು ಸ್ವೀಕರಿಸಿ ಧಾರಣೆ ಮಾಡಲು ಮಾನವ ಪ್ರಕೃತಿಯಲ್ಲಿನ ಅನೇಕ ಅಂಶಗಳನ್ನು ಬದಲಾಯಿಸಬೇಕಾಗಿದೆ – ಅಶಕ್ತಿ, ಅಸಾಮರ್ಥ್ಯ ಮತ್ತು ಮನಸ್ಸಿನ ಪರಿಮಿತಿ, ಹೃದಯದಲ್ಲಿ ಶುದ್ಧಿಯ ಕೊರತೆ, ಉಳಿದ ಭಾಗಗಳಲ್ಲಿ ಅವಿಶ್ರಾಂತ ಚಡಪಡಿಕೆ ಇತ್ಯಾದಿ. ಇಳಿದು ಬರುವ ದೈವೀ ಶಕ್ತಿಯನ್ನು ಸ್ವೀಕರಿಸಿ ಧಾರಣೆ ಮಾಡಲು ಪ್ರಶಾಂತ ಮನಸ್ಸು ಮತ್ತು ಪರಿಶುದ್ಧ ಹೃದಯವು ಅತ್ಯಗತ್ಯ. ಅದಕ್ಕಾಗಿಯೇ ಆಕೆಯಲ್ಲಿ ಒಂದು ಬಗೆಯ ಅಶಕ್ತತೆ ಮತ್ತು ಚಡಪಡಿಕೆಯು ಕಂಡುಬರುವುದು. ಅದು ಸರ್ವೇಸಾಧಾರಣವಾದ ಅನುಭವ. ಆಕೆಯು ಸಾಧನೆಯಲ್ಲಿ ಇನ್ನೂ ಮುಂದಕ್ಕೆ ಪ್ರಗತಿ ಸಾಧಿಸಲು ಬಯಸಿದರೆ, ಮನೋಮಯ ಮತ್ತು ಪ್ರಾಣಮಯದಲ್ಲಿ ಸ್ಥಿರತೆಗಾಗಿ, ಶಾಂತಿಗಾಗಿ, ಶುದ್ಧಿ ಇತ್ಯಾದಿಗಳಿಗಾಗಿ ಆಕೆಯು ಅಭೀಪ್ಸಿಸಬೇಕು. ಮತ್ತು ಯಾವ ಶಕ್ತಿಯು ಇಳಿದು ಬರುತ್ತಿದೆಯೋ ಅದು ಇವೆಲ್ಲವನ್ನೂ ಅವಳೊಳಗೆ ಸ್ಥಾಪಿಸಲು ಆಕೆಯು ಅವಕಾಶ ಮಾಡಿಕೊಡಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 30/487–88 – ಶ್ರೀ ಅರವಿಂದರು**

# ಶಕ್ತಿಯ ಅವತರಣಕ್ಕೆ ಅಡೆತಡೆ ಯಾವುದರಿಂದ?

**– ಅನು: ಶ್ರೀಮತಿ ವಿಶಾಲಾಕ್ಷೀ ಸತ್ಯನ್, ಬೆಂಗಳೂರು**

## ಮನಸ್ಸಿನ ವಿಶ್ರಾಂತಿರಹಿತ ಚಟುವಟಿಕೆ

ಬುದ್ಧಿಮತ್ತೆಯ ಕೆಲವು ದೋಷಭರಿತ ಪ್ರಕ್ರಿಯೆಗಳ ಬಗ್ಗೆ ಸಾಧಕನಿಗೆ ವಿಶೇಷ ಎಚ್ಚರಿಕೆ ನೀಡುವದು ಅವಶ್ಯಕ. ಮೊದಲಿಗೆ ಮಾನಸಿಕ ಚಿಂತನೆಗಳು ಮತ್ತು ಪ್ರಭಾವಗಳು ಅಥವಾ ಬೌದ್ಧಿಕ ತೀರ್ಮಾನಗಳನ್ನು ಸಾಕ್ಷಾತ್ಕಾರವೆಂದು ತಪ್ಪಾಗಿ ತಿಳಿಯಬಾರದು. ಎರಡನೆಯದಾಗಿ, ಮನಸ್ಸಿನ ವಿಶ್ರಾಂತಿರಹಿತ ಚಟುವಟಿಕೆ ಅಂದರೆ ಚಂಚಲ ಮನಸ್ಸು. ಚೈತ್ಯದ ನಿಖರತೆಯನ್ನು ಸ್ವ–ಪ್ರೇರಣೆ ಮತ್ತು ಆಧ್ಯಾತ್ಮಿಕ ಅನುಭವಗಳಿಗೆ ತೊಂದರೆ ನೀಡುವದು ಮತ್ತು ನೈಜ ಪ್ರಕಾಶಭರಿತ ಜ್ಞಾನದ ಅವರೋಹಣಗಳಿಗೆ ಜಾಗವಿಲ್ಲದಂತೆ ಮಾಡುವದು ಅಥವಾ ಅದು ಮಾನವ ಮಾನಸಿಕ ಸ್ತರವನ್ನು ಸ್ಪರ್ಶಿಸುತ್ತಿದ್ದಂತೆ ಅಥವಾ ಇನ್ನೂ ಮೊದಲೇ ಕುರೂಪಿಯಾಗುವಂತೆ ಮಾಡುವದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 31/14**

ಚೇತನವು ಸದಾಕಾಲ ಚಿಕ್ಕ ಚಿಕ್ಕ ಮಾನಸಿಕ ಚಲನೆಗಳಲ್ಲಿ ತೊಡಗಿದ್ದರೇ – ಅದರಲ್ಲೂ ಸಾಮಾನ್ಯವಾಗಿ ಎಲ್ಲರಿಗೂ ಇರುವಂತೆ, ಪ್ರಾಣಿಕ ಚಲನೆಗಳ ಗುಂಪಿನೊಂದಿಗೆ ಜೊತೆಗೂಡಿದ್ದರೆ, ಅಪೇಕ್ಷೆಗಳು ಮತ್ತು ಮಾನವನ ಮನಸ್ಸನ್ನು ವಿಷಪೂರಿತಗೊಳಿಸುವ ಇನ್ನೇನಾದರೂ ಆವರಿಸಿದ್ದರೆ, ಅಸಮರ್ಪಕ ಸ್ಥಳೀಯ ತರ್ಕಬದ್ಧತೆಯನ್ನು ಹೊರತುಪಡಿಸಿದರೂ – ನವ ಜ್ಞಾನ ಶ್ರೇಣಿಗಳಿಗೆ, ಮೂಲಭೂತ ಅನುಭವಗಳಿಗೆ ಅಥವಾ ಆಳವಾದ ಮತ್ತು ಅಗಾಧವಾಗಿರುವ ಆತ್ಮದ ಆರೋಹಣ ಮತ್ತು ಅವರೋಹಣಗಳಿಗೆ ಜಾಗವಾದರೂ ಎಲ್ಲಿರುವದು? ಅದರ ಚಟುವಟಿಕೆಗಳ ನಡುವೆ ಇದ್ದಕ್ಕಿದ್ದಂತೆ ಆಧ್ಯಾತ್ಮಿಕ ಅನುಭವದ ಪ್ರವಾಹದಿಂದ ಮನಸ್ಸು ಚಕಿತಗೊಳ್ಳಲೂ ಬಹುದು. ಆದರೆ ನಂತರದಲ್ಲಿ ಅದು ಪ್ರಶ್ನಿಸಲು ಪ್ರಾರಂಭಿಸಿದರೆ, ಸಂಶಯವನ್ನು ವ್ಯಕ್ತಪಡಿಸಿದರೆ, ಸಿದ್ಧಾಂತಗಳನ್ನು ರೂಪಿಸಿದರೆ, ಇದೇನೆಂದು ಊಹಿಸತೊಡಗಿದರೆ, ಇದು ಸತ್ಯವೇ? ಅಥವಾ ಅಲ್ಲವೇ ಎಂದು ಚಿಂತಿಸಿದರೆ, ಮನಸ್ಸಿನ ಗುಳ್ಳೆಗಳು ಇಲ್ಲವಾಗುವವರೆಗೂ ಕಾಯುವದನ್ನು ಹೊರತುಪಡಿಸಿ ಬೇರೇನನ್ನೂ ಆಧ್ಯಾತ್ಮಿಕ ಶಕ್ತಿಗೆ ಮಾಡಲಾಗುವದಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/340**

## ಯಾವುದೋ ಒಂದು ಭಾಗವು ಗ್ರಹಿಸದೆ ಇರುವಾಗ ಅಸಮತೋಲನವು ಉಂಟಾಗಬಹುದು

ನಿನಗೆ ಹೀಗೆ ಹೇಳಲಾಗುತ್ತದೆ: "ನಿನ್ನನ್ನು ತೆರೆದುಕೋ, ನೀನು ಶಕ್ತಿಯನ್ನು ಪಡೆಯುವೆ." ನಿನಗೆ ಹೀಗೆ ಹೇಳಲಾಗಿತ್ತು: "ಸದಾಶಯವನ್ನು ಹೊಂದಿರು, ಶ್ರದ್ಧಾಭರಿತನಾಗಿರು ಮತ್ತು ನಿನ್ನನ್ನು ರಕ್ಷಿಸಲಾಗುವದು." ಮತ್ತು ನಿಜಕ್ಕೂ ನೀನು ಚೇತನಾಭರಿತನಾಗುವೆ, ಶಕ್ತಿಯುಕ್ತನಾಗುವೆ, ಸಂಪೂರ್ಣವಾಗಿ ರಕ್ಷಿತನಾಗುವೆ. ನಿನಗಿರುವ ನಂಬಿಕೆಗೆ ಅನುಗುಣವಾಗಿ ಮತ್ತು ನಿನ್ನ ತೆರೆದುಕೊಳ್ಳುವಿಕೆಗೆ ಅನುಗುಣವಾಗಿ ನೀನು ಅದೆಲ್ಲವನ್ನೂ ಪಡೆಯುವೆ. ಅದು ನೀನು ಶಕ್ತಿವಂತನಾಗಿರಲು ನೆರವಾಗುವದು. ಅದು ನಿನಗೆ ಸಣ್ಣ ಆಂತರಿಕ ತೊಂದರೆಗಳು ಉಂಟಾದಾಗ ತಿರಸ್ಕರಿಸಿ ದೃಢತೆಯನ್ನು ಪುನಃ ವ್ಯವಸ್ಥಿತಗೊಳಿಸುವದು. ನಿನಗೆ ಉಂಟಾಗಬಹುದಾದ ಸಣ್ಣ ಆಘಾತಗಳು ಮತ್ತು ಆಕಸ್ಮಿಕಗಳಿಂದಲೂ ಸಹ ಅದು ನಿನ್ನನ್ನು ರಕ್ಷಿಸುವದು. ಆದರೆ ನಿನ್ನ ಸತ್ತೆಯಲ್ಲಿ ಎಲ್ಲೋ ಒಂದು ಕಡೆ – ನಿನ್ನ ದೇಹದಲ್ಲಾಗಲೀ, ಅಥವಾ ಪ್ರಾಣದಲ್ಲಾಗಲೀ ಅಥವಾ ಮನಸ್ಸಿನಲ್ಲಾಗಲೀ, ಹಲವಾರು ಭಾಗಗಳಲ್ಲಿ ಅಥವಾ ಒಂದೇ ಒಂದು ಭಾಗದಲ್ಲಿ ಅವರೋಹಣವಾಗುತ್ತಿರುವ ಶಕ್ತಿಯನ್ನು ಸ್ವೀಕರಿಸಲು ಅಸಾಧ್ಯವಾದರೆ ಅದು ಯಂತ್ರದಲ್ಲಿರುವ ಒಂದು ಮರಳಿನ ಕಣದಂತೆ ವರ್ತಿಸುವದು. ನಿನಗೆ ಗೊತ್ತಿದೆಯಲ್ಲಾ, ಒಂದು ಉತ್ತಮವಾದ ಯಂತ್ರ ಎಲ್ಲಾ ವಿಧದಲ್ಲೂ ಸಮರ್ಪಕವಾಗಿ ಕೆಲಸ ಮಾಡುತ್ತಿದ್ದಾಗ, ಅದರೊಳಗೆ ಸ್ವಲ್ಪ ಮರಳನ್ನು ಹಾಕಿದರೆ, ಜಾಸ್ತಿಯಲ್ಲ ಒಂದೆರಡು ಕಣಗಳನ್ನು ಹಾಕಿದರೂ ಇದಕ್ಕಿದ್ದಂತೆ ಎಲ್ಲವೂ ಕೆಟ್ಟು ಯಂತ್ರವು ನಿಂತುಹೋಗುವದು. ಅದೇ ರೀತಿಯಲ್ಲಿ, ಗ್ರಹಿಸುವಿಕೆಯು ಯಾವುದಾದರೊಂದು ಭಾಗದಲ್ಲಿ ಅಲ್ಪ ಸ್ವಲ್ಪ ಕಡಿಮೆಯಾದರೂ ಅದು ಸಂಪೂರ್ಣವಾಗಿ ಮುಚ್ಚಿಹೋಗುವದು (ಅದರ ಕಡೆ ತಿರುಗಿನೋಡಿದಾಗ, ಎಲ್ಲೋ ಒಂದು ಸಣ್ಣ ಕರಿಯ ಚುಕ್ಕಿಯಂತೆ ಕಾಣಿಸುವದು, ಒಂದು ಸಣ್ಣ ವಸ್ತು ಕಲ್ಲಿನಂತೆ ಗಟ್ಟಿಯಾಗಿ ಇರುವದು, ಅದರೊಳಗೆ ಶಕ್ತಿಯು ಪ್ರವೇಶಿಸಲಾಗುವದಿಲ್ಲ. ಏಕೆಂದರೆ ಅದು ಶಕ್ತಿಯನ್ನು ಸ್ವೀಕರಿಸಲು ಒಪ್ಪುವದಿಲ್ಲ – ಅದಕ್ಕೆ ಸ್ವೀಕರಿಸಲಾಗುವದಿಲ್ಲ ಅಥವಾ ಅದು ಸ್ವೀಕರಿಸುವದಿಲ್ಲ) ಮತ್ತು ತಕ್ಷಣದಲ್ಲಿ ಅದು ಒಂದು ದೊಡ್ಡ ಅಸಮತೋಲನವನ್ನು ಸೃಷ್ಟಿಸುವದು. ಅದ್ಭುತವಾಗಿ ಅರಳುತ್ತಾ ಆರೋಹಣ ಮಾಡುತ್ತಿದ್ದ ಇದು ತೊಂದರೆಗೆ ಒಳಗಾಗುವದು. ಉದಾಹರಣೆಗೆ, ನೀನು ಸಹಜ ಸಮತೋಲನ ಮತ್ತು ಉತ್ತಮವಾದ ಆರೋಗ್ಯವನ್ನು

ಹೊಂದಿರುವಾಗ ಎಲ್ಲವೂ ಸಮರ್ಪವಾಗಿ ನೆರವೇರುತ್ತಿರುವದು. ನಿನಗೆ ವಿರೋಧಿಸಲು ಏನೂ ಇರುವದಿಲ್ಲ. ಒಂದು ದಿನ ನವ ಚಿಂತನೆಯೊಂದು ಕಾಣಿಸಿ, ಒಂದು ಹೊಸ ಪ್ರೇರಣೆಯು ಉಂಟಾಯಿತೆಂದುಕೊಳ್ಳಿ. ನಿಮಗೆ ಒಂದು ಮಹತ್ತರ ಅಭೀಪ್ಸೆಯು ಮೈದೋರಿ ಶ್ರೇಷ್ಠ ಶಕ್ತಿಯನ್ನು ಪಡೆದಿರೆಂದುಕೊಳ್ಳಿ. ಒಂದು ಅತ್ಯುತ್ತಮ ಸುಂದರ ಅನುಭವವೂ ಉಂಟಾಗಿರಬಹುದು. ಅದು ನಿಮಗೆ ಆಂತರಿಕ ಬಾಗಿಲುಗಳನ್ನು ತೆರೆದಿರಬಹುದು. ಅದರಿಂದ ನಿಮಗೆ ಹಿಂದೆ ಅರಿವಿಗೆ ಬಾರದೆ ಇದ್ದ ಜ್ಞಾನವನ್ನು ನೀವು ಪಡೆದಿರಬಹುದು. ಆಗ ನೀನು ಎಲ್ಲವೂ ಸಮರ್ಪಕವಾಗಿದೆ ಪ್ರತಿಯೊಂದೂ ಸರಿಯಾಗಿ ನೆರವೇರುವದು ಎಂದುಕೊಳ್ಳುವಿರಿ.... ಮುಂದಿನ ದಿನದಲ್ಲಿಯೇ ನಿಮಗೆ ಖಾಯಿಲೆಯು ಉಂಟಾಗುವದು. ಆಗ ನೀವು ಹೇಳುವಿರಿ: "ಇನ್ನೂ ಅದೇನೇ? ಅದು ಅಸಾಧ್ಯ! ಅದು ಸಂಭವಿಸಬಾರದು. ಆದರೆ ಅದು ನಾನು ಈಗ ತಾನೇ ಹೇಳಿದುದೇ ಆಗಿದೆ: ಮರಳಿನ ಒಂದು ಕಣ. ಯಾವುದೋ ಒಂದು ಭಾಗಕ್ಕೆ ಸ್ವೀಕರಿಸಲಾಗಲಿಲ್ಲ. ತಕ್ಷಣವೇ ಅದು ಒಂದು ಅಸಮತೋಲನವನ್ನು ತರುವದು. ಅದು ಬಹಳ ಚಿಕ್ಕದಾಗಿದ್ದರೂ, ಅದರಿಂದಲೇ ನಿಮಗೆ ಖಾಯಿಲೆಯು ಉಂಟಾಗುವದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/176**

### ಅವರೋಹಣಕ್ಕೆ ಶುದ್ಧೀಕರಣವು ಏಕೆ ಅವಶ್ಯಕ?

ಸಾಧನೆಯ ಮೊದಲ ಪ್ರಮುಖ ಸಕಾರಾತ್ಮಕ ಅನುಭವವೇ ಶಾಂತತೆಯ ಅವರೋಹಣ. ಶಾಂತತೆಯ ಅವಸ್ಥೆಯಲ್ಲಿ ಸಹಜ ಚಿಂತನೆಯ ಮನಸ್ಸು (ಬುದ್ಧಿ) ಮೌನವಾಗುವದು. ಅಥವಾ ಅದರ ಬಹುಪಾಲು ಚಟುವಟಿಕೆಯನ್ನು ರದ್ದುಗೊಳಿಸುವದು. ಅದು ಹಾಗೆ ಮಾಡಿದಾಗ ನಾವು ಜಾಗರೂಕರಾಗಿರದಿದ್ದರೆ, ಅನೇಕ ಸಲ ಭಾವನಾತ್ಮಕ ಮನಸ್ಸು ಮುನ್ನುಗ್ಗಬಹುದು, ಅಥವಾ ಒಂದು ವಿಧವಾದ ಯಾಂತ್ರಿಕ ಭೌತಿಕ ಅಥವಾ ಸ್ವೇಚ್ಛೆಯಾದ ಅಜಾಗೃತ ಮನಸ್ಸು ಮೇಲೆ ಬಂದು ಕ್ರಿಯಾಶೀಲವಾಗಬಹುದು; ಮೌನಕ್ಕೆ ತೊಂದರೆಯುಂಟುಮಾಡುವವರಲ್ಲಿ ಪ್ರಮುಖರು ಇವರೇ. ಅಥವಾ ಕೆಳಗಿನ ಭಾವನಾತ್ಮಕ ಮನಸ್ಸು ಗೊಂದಲವನ್ನು ಉಂಟುಮಾಡಬಹುದು; ಅದರಿಂದ ಅಹಂಕಾರ ಭಾವೋದ್ರೇಕಗಳು ಮತ್ತು ಅವುಗಳ ಕ್ರೀಡೆಯು ಮೇಲೆ ಬರುವವು. ಇವೆಲ್ಲವೂ ನಾವು ಯಾವುದರಿಂದ ದೂರ ಸರಿಯಬೇಕು ಎಂಬುದರ ಸಂಕೇತಗಳು. ಏಕೆಂದರೆ ಇವುಗಳು ಇದ್ದಾಗ ಉನ್ನತ

ಶಕ್ತಿಗಳು ಅವರೋಹಣ ಮಾಡಿದರೆ ಉದಾ. ಸಾಮರ್ಥ್ಯ ಮತ್ತು ಶಕ್ತಿ, ಜ್ಞಾನ, ಪ್ರೇಮ ಅಥವಾ ಆನಂದ ಈ ನಿಮ್ನ ಅಂಶಗಳು ಅಡ್ಡ ಬರುವವು. ಆಗ ಉನ್ನತ ಚೇತನವು ಹಿಂದಿರುಗುವದು ಅಥವಾ ಅದರ ಅವರೋಹಣವು ಆಚ್ಛಾದಿತವಾಗುವದು ಮತ್ತು ಅದು ನೀಡುವ ಪ್ರೇರೇಪಣೆಯು ನಿಮ್ನ ಸ್ವಭಾವದ ಕಾರ್ಯಗಳಿಗಾಗಿ ದುರುಪಯೋಗವಾಗುವದು. ದೊಡ್ಡ ದೊಡ್ಡ ಅನುಭವಗಳನ್ನು ಹೊಂದಿದ ಮೇಲೆ ಅನೇಕ ಸಾಧಕರು ಇದೇ ಕಾರಣದಿಂದಲೇ ಅಧಿಕವಾದ ಅಹಂಕಾರ, ವಿಪ್ಲವ, ಮಹತ್ವಾಕಾಂಕ್ಷೆ, ಲೈಂಗಿಕತೆ ಅಥವಾ ಇತರ ಭಾವೋದ್ರೇಕಗಳು ಅಥವಾ ಅಸ್ಪಷ್ಟತೆಗಳಿಗೆ ತುತ್ತಾಗುವದು. ಆದುದರಿಂದ ಸಕಾರಾತ್ಮಕ ಅನುಭವದ ಹಿಂದೆ ಅಥವಾ ಜೊತೆಗೂಡಿ ಒಂದು ಪ್ರಾಣಿಕ ಸಂಪೂರ್ಣ ಶುದ್ಧೀಕರಣವು ಇರಲೇಬೇಕು – ಕೊನೆಯ ಪಕ್ಷ ಪ್ರಾಣಿಕವು ಬಹಳ ಬಲವಾದ ಚಟುವಟಿಕೆಗಳನ್ನು ಹೊಂದಿರುವ ಸ್ವಭಾವಗಳಲ್ಲಿ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 28/180–181**

**ಎರಡು ಹಂತಗಳು**

ಯೋಗದಲ್ಲಿ ಎರಡು ಹಂತಗಳಿವೆಯೆಂದು ಸಹ ನೀನು ಅವನಿಗೆ ಹೇಳಬಹುದು. ಮೊದಲನೆಯದು ಸಿದ್ಧತೆ ಮತ್ತೊಂದು ನಿಜವಾದ ತೀವ್ರ ಸಾಧನೆ. ಆತನು ಮೊದಲನೆಯದನ್ನು ಪ್ರಾರಂಭಿಸಬಹುದು. ಈ ಹಂತದಲ್ಲಿ, ಪ್ರಾರ್ಥನೆ, ಭಕ್ತಿ ಮತ್ತು ಧ್ಯಾನದೊಂದಿಗೆ ಹೃದಯದಲ್ಲಿನ ಅಭೀಪ್ಸೆ, ದಿವ್ಯಕ್ಕೆ ತನ್ನ ಜೀವನವನ್ನು ಸಮರ್ಪಿಸುವ ಸಂಕಲ್ಪಗಳು ಬಹಳ ಮುಖ್ಯ. ಸಾಧಿಸಬೇಕಾದ ಮೊದಲನೇ ಗುರಿಯೇ ಸ್ವಭಾವದ ಶುದ್ಧೀಕರಣ. ಅನುಭವಗಳಿಗಾಗಿ ಹಾತೊರೆಯಬಾರದು. ಆದರೆ ಬಂದವನ್ನು ಅವಲೋಕಿಸಬೇಕು. ಸಮರ್ಪಕವಾದ ಮನೋಭಾವ ಮತ್ತು ನೈಜ ಅಭಿವೃದ್ಧಿಗಳಿಗೆ ನೆರವಾಗುವವನ್ನು ಅಂಗೀಕರಿಸಬೇಕು. ಅಹಂಕಾರವನ್ನು ಪ್ರೋತ್ಸಾಹಿಸಿ ವೃದ್ಧಿಗೊಳಿಸುವವನ್ನು ತಿರಸ್ಕರಿಸಬೇಕು. ಪ್ರಗತಿಯು ನಿಧಾನವಾಗಿದ್ದರೆ ಅಥವಾ ತೊಂದರೆಗಳು ಅನೇಕವಾಗಿದ್ದರೆ ತಾಳ್ಮೆಗೆಡಬಾರದು. ಎಲ್ಲವನ್ನೂ ಶಾಂತವಾದ ಸಹನೆಯೊಂದಿಗೆ ನೆರವೇರಿಸಬೇಕು. ಮತ್ತು ದಿವ್ಯಮಾತೆಯಲ್ಲಿ ಸಂಪೂರ್ಣ ನಂಬಿಕೆಯಿರಬೇಕು. ಈ ಅವಧಿಯು ಸಾಧಕನ ಸಾಮರ್ಥ್ಯ ಮತ್ತು ದಿವ್ಯದ ಕಡೆಗಿನ ಆತನ ಅಭೀಪ್ಸೆಯ ಪ್ರಾಮಾಣಿಕತೆಯನ್ನು ಪರೀಕ್ಷಿಸುವದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 35/551**

**ಯೋಗದಲ್ಲಿ ಅವರೋಹಣವು ಏಕೆ ಅವಶ್ಯಕ?**

ನಿನ್ನನ್ನೇ ಮಾಡು ಎಂದು ಹೇಳಿದರೆ, ನೀನು ಏನನ್ನೂ ಮಾಡಲು ಸಾಧ್ಯವಿಲ್ಲ ಎಂಬುದು ನಿಜವಾಗಲೂ ಸತ್ಯ ಸಂಗತಿ; ಆದುದರಿಂದಲೇ, ನಿನಗಾಗಿ ಅದನ್ನು ಮಾಡುವ ಸಾಮರ್ಥ್ಯವಿರುವ ಶಕ್ತಿಯ ಸಂಪರ್ಕದಲ್ಲಿ ನೀನು ಇರಬೇಕು. ಏಕೆಂದರೆ ನಿನಗೆ ಅದನ್ನು ಮಾಡುವ ಶಕ್ತಿಯಿಲ್ಲ. ಮಾಡಬೇಕಾದ ಒಂದೇ ಒಂದು ಕೆಲಸವೆಂದರೆ ಆ ಶಕ್ತಿಗೆ ಕ್ರಿಯಾಶೀಲವಾಗಲು ಅವಕಾಶ ನೀಡಿ ನೀನು ಅದರ ಪಕ್ಕದಲ್ಲಿ ಇರುವದು, ಅಂದರೆ ಆ ಶಕ್ತಿಯಲ್ಲಿ ಶ್ರದ್ಧೆಯನ್ನು ಹೊಂದಿ, ಅದನ್ನು ಅವಲಂಬಿಸುವದು. ನಿನಗೇ ನೀನು ತೊಂದರೆಯನ್ನು ಉಂಟುಮಾಡಿ ಕಿರುಕುಳವನ್ನು ನೀಡಬಾರದು. ಅದನ್ನು ಮೌನವಾಗಿ ನೆನೆದು, ಆಹ್ವಾನಿಸಬೇಕು. ಅದು ಶಾಂತವಾಗಿ ಕ್ರಿಯಾಶೀಲವಾಗಲು ಅವಕಾಶ ನೀಡಬೇಕು. ನೀನು ಅದನ್ನು ಮಾಡಿದರೆ, ನಿನಗಾಗಿ ಉಳಿದದ್ದನ್ನೆಲ್ಲಾ ಮಾಡಲಾಗುವದು. ಎಲ್ಲವನ್ನೂ ಒಮ್ಮೆಲೆ ಮಾಡಲಾಗುವದಿಲ್ಲ, ಏಕೆಂದರೆ ದೂರ ಸರಿಸಬೇಕಾದುದು ಬಹಳವಿದೆ. ಆದರೆ ಅದನ್ನು ದೃಢವಾಗಿ ಮತ್ತು ಹೆಚ್ಚು ಹೆಚ್ಚಾಗಿ ಮಾಡಲಾಗುವದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/188**

(ಯೋಗದಲ್ಲಿ) ಅವಶ್ಯವಾಗಿ ನೆರವೇರಿಸಬೇಕಾಗಿರುವ ಕಾರ್ಯಗಳನ್ನು ನಿನ್ನ ಮಾನಸಿಕ ಪ್ರಯತ್ನಕ್ಕಿಂತಲೂ ಇನ್ನೂ ಹೆಚ್ಚು ಸುಲಭವಾಗಿ ಅವರೋಹಿಸುತ್ತಿರುವ ಶಕ್ತಿ ಮತ್ತು ಶಾಂತಿಗಳ ಮೂಲಕ (ಬಲವನ್ನು ಕೆಳಗೆ ತಂದು) ಮಾಡಬಹುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 30/254**

"ತನ್ನದೇ ಆದ ಶಕ್ತಿಯಿಂದ ಅಥವಾ ಸಂಕಲ್ಪದಿಂದ ಅಥವಾ ಜ್ಞಾನದಿಂದ ಅಥವಾ ಅದರ ಯಾವುದೇ ಸದ್ಗುಣದಿಂದ ದಿವ್ಯತೆಯ ಸ್ವಭಾವವಾಗಿ ನಮ್ಮಲ್ಲಿಯ ಅಹಂಕಾರಭರಿತ ವ್ಯಕ್ತಿಯು ಬದಲಾಗಲು ಸಾಧ್ಯವಿಲ್ಲ. ಅದು (ಅಹಂಕಾರ) ಏನು ಮಾಡಬಹುದೆಂದರೆ ಬದಲಾವಣೆಗೆ ಹೊಂದಿಕೊಳ್ಳಬಹುದು ಮತ್ತು ತಾನು ಏನಾಗಬೇಕೆಂದು ಬಯಸುವದೋ ಅದಕ್ಕೆ ಹೆಚ್ಚು ಹೆಚ್ಚಾಗಿ ಶರಣಾಗಬಹುದು. ಅಹಂಕಾರವು ನಮ್ಮಲ್ಲಿ ಕಾರ್ಯಗತವಾಗಿರುವವರೆಗೂ, ನಮ್ಮ ವೈಯಕ್ತಿಕ ಕ್ರಿಯೆಯು ಅದರ ಸ್ವಭಾವದಲ್ಲಿ ಅಸ್ತಿತ್ವದ ಕೆಳ ಹಂತದ ಭಾಗವಾಗಿಯೇ ಇರುವದು;

ಅದು ಅಸ್ಪಷ್ಟ ಅಥವಾ ಅರ್ಧ ಪ್ರಕಾಶಭರಿತ. ತನ್ನ ಕ್ಷೇತ್ರದಲ್ಲಿ ಪರಿಮಿತ, ಅದರ ಸಾಮರ್ಥ್ಯದಲ್ಲಿ ಭಾಗಶಃ ಪರಿಣಾಮಕಾರಿ; ಒಂದು ಆಧ್ಯಾತ್ಮಿಕ ಬದಲಾವಣೆ, ನಮ್ಮ ಸ್ವಭಾವದ ಪ್ರಕಾಶಭರಿತ ಬದಲಾವಣೆ ಸಂಭವಿಸಬೇಕಾದರೆ, ಅಲ್ಪ ಸ್ವಲ್ಪ ಮಾತ್ರವಲ್ಲ ನಾವು ದಿವ್ಯ ಶಕ್ತಿಯನ್ನು ಪವಾಡಸದೃಶ ಕಾರ್ಯವನ್ನು ವ್ಯಕ್ತಿಯಲ್ಲಿ ನೆರವೇರಿಸಲು ಆಹ್ವಾನಿಸಬೇಕು. ಏಕೆಂದರೆ ಆಕೆಗೆ ಮಾತ್ರ ಆ ನಿರ್ಧಾರಕ, ಸಂಪೂರ್ಣವಾಗಿ ಮೇಧಾವಿ ಮತ್ತು ಅನುಕರಿಸಲಾಗದ ಶಕ್ತಿಯು ಇರುವದು. ಆದರೆ ಒಮ್ಮೆಲೆ ಸಂಪೂರ್ಣವಾಗಿ ಮಾನವ ವೈಯಕ್ತಿಕ ಕ್ರಿಯೆಯ ಜಾಗವನ್ನು ದಿವ್ಯವು ಆಕ್ರಮಿಸಲು ಸಾಧ್ಯವಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23/86**

**ಧ್ಯಾನವು ಒಂದೇ ಒಂದು ವಿಧಾನ ಮಾತ್ರ**

ದಿವ್ಯತೆಯನ್ನು ಸಮೀಪಿಸಲು ಧ್ಯಾನವು ಒಂದು ವಿಧಾನ. ಮತ್ತು ಒಂದು ಶ್ರೇಷ್ಠ ಪಥ. ಆದರೆ ಅದನ್ನು ಹತ್ತಿರದ ಹಾದಿ ಎಂದು ಕರೆಯಲು ಸಾಧ್ಯವಿಲ್ಲ. – ಬಹುಪಾಲು ಜನರಿಗೆ ಅದು ಬಹಳ ಎತ್ತರವಾದುದಾಗಿದ್ದರೂ ದೂರದ ಮತ್ತು ಕಷ್ಟಕರವಾದ ಹಾದಿ. ಅದು ಅವರೋಹಣವನ್ನು ತರುವದರ ಹೊರತಾಗಿ ಹತ್ತಿರದ ದಾರಿಯಾಗಲು ಸಾಧ್ಯವಿಲ್ಲ. ಹಾಗೆ ಮಾಡಿದರೂ, ಅದು ಬಹಳ ಬೇಗ ರೂಪಿಸಿದ ತಳಹದಿ ಮಾತ್ರವಾಗಿರುವದು – ನಂತರದಲ್ಲಿ ಧ್ಯಾನವು ಆ ತಳಹದಿಯ ಮೇಲೆ ಪ್ರಯಾಸದಿಂದ ಒಂದು ದೊಡ್ಡ ಕಟ್ಟಡವನ್ನು ನಿರ್ಮಿಸಬೇಕು. ಅದನ್ನು ಮಾಡಲೇ ಬೇಕಾಗುವದು. ಆದರೆ ಅದು ಹತ್ತಿರದ ಹಾದಿಯಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/212**

ನೀನು ಏನನ್ನು ಧ್ಯಾನವೆಂದು ಕರೆಯುವೆ? ಕಣ್ಣುಗಳನ್ನು ಮುಚ್ಚಿಕೊಂಡು ಗಮನವನ್ನು ಕೇಂದ್ರೀಕರಿಸುವದನ್ನೇ? ನೈಜ ಚೇತನವನ್ನು ಕೆಳಗಡೆಗೆ ಆಹ್ವಾನಿಸಲು ಅದು ಒಂದು ವಿಧಾನ ಮಾತ್ರ. ನೈಜ ಚೇತನದೊಂದಿಗೆ ಜೊತೆಗೂಡುವುದು ಅಥವಾ ಅದರ ಅವರೋಹಣವನ್ನು ಅನುಭವಿಸುವದು ಮಾತ್ರವೇ ಬಹಳ ಮುಖ್ಯವಾದ ವಿಷಯ. ಸಾಂಪ್ರದಾಯಿಕವಲ್ಲದ ವಿಧಾನದಿಂದ ಅದು ಬಂದರೆ, ನನಗೆ ಯಾವಾಗಲೂ ಆಗುವ ರೀತಿಯಲ್ಲಿ, ಉತ್ತಮವೆಂದೇ ಹೇಳಬಹುದು. ಧ್ಯಾನವು ಒಂದು ವಿಧಾನ ಅಥವಾ ಅದು ಒಂದು ಉಪಕರಣ. ನೈಜ ಚಲನೆಯು

ಯಾವುದೆಂದರೆ ನಡೆಯುತ್ತಿರುವಾಗ, ಕೆಲಸ ಮಾಡುತ್ತಿರುವಾಗ ಅಥವಾ ಮಾತನಾಡುತ್ತಿರುವಾಗಲೂ ಸಾಧನೆಯಲ್ಲಿರುವದೇ ಆಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/300**

ಸಹಜವಾಗಿ, ಯಾವುದಾದರೂ ಉನ್ನತ ಚೇತನವು ಅವರೋಹಣ ಮಾಡಿದರೆ, ನಿಮ್ಮ ಚೇತನವನ್ನು ಅದರ ಭಾಗವಾಗಿ ಮಾಡಿಕೊಳ್ಳುವ ಕಾರ್ಯವನ್ನು ಅದು ಮಾಡುವದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 30/441**

ಚೇತನವನ್ನು ಪರಿವರ್ತನೆಗೊಳಿಸಲು ಅವರೋಹಣವು ಆಗಮಿಸುವದು. ಆದರೆ ಪರಿವರ್ತನೆಗೆ ಹೆಚ್ಚು ಕಾಲವು ಅವಶ್ಯಕ. ಒಂದೇ ಕ್ಷಣದಲ್ಲಿ ಅದೆಲ್ಲವೂ ಸಂಭವಿಸುವದಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 30/441**

ಸ್ವಭಾವವನ್ನು ಬದಲಾಯಿಸಲು ಧ್ಯಾನ ಮಾತ್ರ ಮಾಡುವದರಿಂದ ಸಾಧ್ಯ ಎನ್ನುವದು ನಮ್ಮ ಅನುಭವವಲ್ಲ. ಬಾಹ್ಯ ಚಟುವಟಿಕೆಗಳಿಂದ ಮತ್ತು ಕೆಲಸದಿಂದ ನಿವೃತ್ತರಾದವರಿಗೆ ಅದರಿಂದ ಹೆಚ್ಚಿನ ಲಾಭವೇನೂ ದೊರೆತಿಲ್ಲ. ಅನೇಕ ರೀತಿ ಅದರಿಂದ ತೊಂದರೆಯು ಉಂಟಾಗಿದೆ. ಸ್ವಲ್ಪ ಮಟ್ಟಿಗಿನ ಕೇಂದ್ರೀಕರಣ, ಹೃದಯದಲ್ಲಿ ಒಂದು ಆಂತರಿಕ ಅಭೀಪ್ಸೆ, ಅಲ್ಲಿ ಶ್ರೀಮಾತೆಯವರ ಸನ್ನಿಧಿಗೆ ಮತ್ತು ಮೇಲಿನ ಅವರೋಹಣಗಳಿಗೆ ಚೇತನವನ್ನು ತೆರೆದುಕೊಳ್ಳುವದು ಅವಶ್ಯಕ. ಕ್ರಿಯೆಯಿಲ್ಲದೆ (ಕಾರ್ಯವಿಲ್ಲದೆ), ನಿಜಕ್ಕೂ ಸ್ವಭಾವವು ಬದಲಾಗುವದಿಲ್ಲ; ಅದರೊಳಗೆ ಮತ್ತು ಸ್ವಭಾವದಲ್ಲಿಯ ಬದಲಾವಣೆಯ ಬಗ್ಗೆ ಪರೀಕ್ಷೆಯು ಜನರೊಂದಿಗಿನ ಸಂಪರ್ಕದ ಮೂಲಕ ಉಂಟಾಗುವದು. ಯಾರಾದರೂ ಮಾಡುವ ಕಾರ್ಯದ ಬಗ್ಗೆ ಹೇಳಬೇಕೆಂದರೆ, ಉನ್ನತ ಕೆಲಸ ಮತ್ತು ಕೆಳಗಿನ ಕೆಲಸಗಳೆಂದು ಯಾವುದೂ ಇಲ್ಲ. ಶ್ರೀಮಾತೆಗೆ ಅರ್ಪಣೆಯಾಗಿ, ಆಕೆಗಾಗಿ ಮತ್ತು ಆಕೆಯ ಶಕ್ತಿಯಲ್ಲಿ ಕೆಲಸವನ್ನು ಮಾಡಿದಾಗ ಎಲ್ಲ ಕಾರ್ಯಗಳು ಸಮಾನವಾಗಿರುವವು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/252**

**ಪರಿವರ್ತನೆಗೆ ಪುನರಾವರ್ತಿತ ಅವರೋಹಣವೇ ಸಾಧನ**

ಶಿರದ ಕಡೆ ಮೇಲೇರುತ್ತಿರುವ ಅಲೆಗಳ ಅನುಭವವು ಉಂಟಾಗುವದು. ಅದು ಒಂದು ಬಾಹ್ಯ ಅಚೇತನವನ್ನು ತರುವದು ಮತ್ತು ಆಂತರಿಕ ಜಾಗೃತಿಯನ್ನು ಸಹ ತರುವದು. ಮೇಲಿನ ಉನ್ನತ ಚೇತನವನ್ನು ಸಂಪರ್ಕಿಸಲು ಆಧಾರದಿಂದ ಆರೋಹಣ ಮಾಡುತ್ತಿರುವ ನಿಮ್ನ ಚೇತನದ ಕ್ರಿಯೆ ಅದಾಗಿದೆ. ತಾಂತ್ರಿಕ ಪ್ರಕ್ರಿಯೆಯಲ್ಲಿ ಅತಿ ಹೆಚ್ಚಾಗಿ ಪ್ರಸಿದ್ಧವಾಗಿರುವ ಚಲನೆಯನ್ನೇ ಇದು ಹೋಲುವದು. ಅಂದರೆ ಕುಂಡಲಿನಿಯ ಜಾಗೃತಿ ಅಥವಾ ದೇಹದಲ್ಲಿ ಸುಪ್ತವಾಗಿ ಸುರಳಿಯಂತೆ ಸುತ್ತಿಕೊಂಡಿರುವ ಶಕ್ತಿ, ಬೆನ್ನು ಹುರಿಯಲ್ಲಿನ ವಿವಿಧ ಚಕ್ರಗಳ ಮೂಲಕ ಆರೋಹಣ ಮಾಡಿ ಬ್ರಹ್ಮ ರಂಧ್ರವನ್ನು ತಲುಪಿ ಮೇಲಿನ ದಿವ್ಯತೆಯನ್ನು ಸಂಪರ್ಕಿಸುವಿಕೆ. ನಮ್ಮ ಯೋಗದಲ್ಲಿ ಅದೊಂದು ವಿಶಿಷ್ಟ ಪ್ರಕ್ರಿಯೆಯಲ್ಲ, ಆದರೆ ಕೆಲವೊಮ್ಮೆ ಪ್ರವಾಹಗಳಲ್ಲಿ ಮತ್ತು ಕೆಲವೊಮ್ಮೆ ಅಲೆಗಳಂತೆ ಇಡೀ ನಿಮ್ನ ಚೇತನದ ಸಹಜ ಮೇಲೇರುವಿಕೆ. ಕೆಲವೊಮ್ಮೆ ಕಡಿಮೆ ನಿರ್ದಿಷ್ಟ ಚಲನೆ ಮತ್ತೊಂದು ಕಡೆಯಿಂದ ದೇಹದೊಳಗಡೆಗೆ ದಿವ್ಯ ಚೇತನ ಮತ್ತು ಅದರ ಶಕ್ತಿಯ ಅವರೋಹಣ. ಈ ಅವರೋಹಣವು ಶಾಂತಿ ಮತ್ತು ಸಮಾಧಾನ, ಶಕ್ತಿ ಮತ್ತು ಸಾಮರ್ಥ್ಯ, ಪ್ರಕಾಶ, ಸಂತಸ ಮತ್ತು ಆನಂದ, ವಿಸ್ತಾರತೆ, ಸ್ವಾತಂತ್ರ್ಯ, ಜ್ಞಾನಗಳನ್ನು ದಿವ್ಯ ಸತ್ತೆ ಅಥವಾ ಸಾನ್ನಿಧ್ಯವು ಸುರಿಯುತ್ತಿರುವಂತೆ ಭಾಸವಾಗುವದು. ಕೆಲವೊಮ್ಮೆ ಇವುಗಳಲ್ಲಿ ಯಾವುದಾದರೂ ಒಂದು, ಕೆಲವೊಮ್ಮೆ ಹಲವಾರು ಅಥವಾ ಎಲ್ಲವೂ ಒಟ್ಟಿಗೆ ಪ್ರವಹಿಸುವವು. .... ನಿಮ್ನ ಚೇತನವು ಪುನಃ ಪುನಃ ನಿರಂತರವಾಗಿ ಮೇಲೇರುತ್ತಿದ್ದರೇ ಮಾತ್ರ ಮನಸ್ಸು, ಪ್ರಾಣ ಮತ್ತು ಭೌತಿಕವು ಸುಪ್ರಮಾನಸದವರೆಗಿನ ಉನ್ನತ ಸ್ತರಗಳನ್ನು ಸ್ಪರ್ಶಿಸಲು ಸಾಧ್ಯವಾಗುವದು ಮತ್ತು ಅವುಗಳ ಪ್ರಕಾಶ, ಶಕ್ತಿ ಮತ್ತು ಪ್ರಭಾವದಿಂದ ವ್ಯಾಪಿತವಾಗುವದು. ಇಡೀ ಸತ್ತೆ ಮತ್ತು ಸ್ವಭಾವದ ಪರಿವರ್ತನೆಗೆ ಪುನರಾವರ್ತಿತ ಮತ್ತು ನಿರಂತರವಾದ ದಿವ್ಯ ಚೇತನ ಮತ್ತು ಮತ್ತು ಅದರ ಶಕ್ತಿಯ ಅವರೋಹಣವೇ ಸಾಧನ. ಒಮ್ಮೆ ಈ ಅವರೋಹಣವು ದಿನಂ ಪ್ರತಿ ಬರಲು ಪ್ರಾರಂಭವಾದರೆ, ದಿವ್ಯ ಶಕ್ತಿ ಮತ್ತು ಶ್ರೀಮಾತೆಯ ಸಾಮರ್ಥ್ಯವು ಮೇಲಿನಿಂದ ಅಥವಾ ಪರದೆಯ ಹಿಂದಿನಿಂದ ಮಾತ್ರವಲ್ಲ. ಆದರೆ ಸ್ವತಃ ಆಧಾರದಲ್ಲೇ ಜಾಗೃತವಾಗಿ ಕಾರ್ಯನಿರತವಾಗುವರು. ಜೊತೆಗೆ ಅದರ ಕಷ್ಟಗಳು ಮತ್ತು ಸಾಧ್ಯತೆಗಳಿಗೆ ಪರಿಹಾರ ನೀಡಿ ಯೋಗವನ್ನು ಮುಂದುವರಿಸುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 30/216–217**

ನಾವು ಅಭೀಪ್ಸೆಯನ್ನು ಹೊಂದಿರುವ ಪರಿವರ್ತನೆಯು ಒಮ್ಮೆಲೇ ಆಗಮಿಸಲು ಅಸಾಧ್ಯ. ಏಕೆಂದರೆ ಅದು ಬಹಳ ಸಂಕೀರ್ಣವಾಗಿದೆ ಮತ್ತು ಅತ್ಯಧಿಕ ವಿಸ್ತಾರವಾಗಿದೆ. ಅದು ಹಂತ ಹಂತವಾಗಿ ಬರಲು ಅವಕಾಶ ನೀಡಬೇಕು. ಭೌತಿಕ ಬದಲಾವಣೆಯು ಕೊನೆಯ ಹಂತವಾಗಿರುವದಲ್ಲದೆ ಅದೇ ಒಂದು ಪ್ರಗತಿಪರ ಪ್ರಕ್ರಿಯೆಯಾಗಿದೆ.

ಭೌತಿಕ ಸಾಧನಗಳಾದ ಸಕಾರಾತ್ಮಕ ಅಥವಾ ನಕಾರಾತ್ಮಕ ಸ್ವಭಾವಗಳಿಂದ ಆಂತರಿಕ ಪರಿವರ್ತನೆಯನ್ನು ತರಲು ಸಾಧ್ಯವಿಲ್ಲ. ಅದಕ್ಕೆ ಬದಲಾಗಿ, ದೇಹದ ಕಣಗಳ ಒಳಗೆ ಉನ್ನತ ಸುಪ್ರಮಾನಸ ಚೇತನದ ಅವರೋಹಣದಿಂದ ಭೌತಿಕ ಬದಲಾವಣೆಯು ಉಂಟಾಗುವಂತೆ ಮಾಡಬಹುದು. ಕೊನೆಯ ಪಕ್ಷ, ಅಲ್ಲಿಯವರೆಗೂ ಆಹಾರ, ನಿದ್ದೆ ... ಮುಂತಾದ ಸಾಮಾನ್ಯ ಸಾಧನಗಳ ಮೂಲಕ ದೇಹ ಮತ್ತು ಅದನ್ನು ಸಂರಕ್ಷಿಸುವ ಶಕ್ತಿಗಳನ್ನು ನಿರ್ವಹಿಸಬೇಕು. ಸಮರ್ಪಕವಾದ ಚೇತನದಿಂದ ಮತ್ತು ಸಮರ್ಪಕವಾದ ಸ್ಫೂರ್ತಿಯೊಂದಿಗೆ ಆಹಾರವನ್ನು ಸೇವಿಸಬೇಕು; ನಿಧಾನವಾಗಿ ನಿದ್ದೆಯನ್ನು ಯೌಗಿಕ ವಿರಾಮವಾಗಿ ಮಾರ್ಪಡಿಸಬೇಕು. ಅಕಾಲಿಕ ಮತ್ತು ಅತಿ ಹೆಚ್ಚಾದ ಭೌತಿಕ ತಪಸ್ಸಿನಿಂದ ಶರೀರದ ವಿವಿಧ ಭಾಗದಲ್ಲಿರುವ ಶಕ್ತಿಗಳಲ್ಲಿ ಕ್ಷೋಭೆ ಮತ್ತು ಅಸಮತೋಲನ ಉಂಟಾಗಿ ಸಾಧನೆಯ ಪ್ರಕ್ರಿಯೆಗೆ ಅಡಚಣೆಯಾಗಬಹುದು. ಒಂದು ಶ್ರೇಷ್ಠ ಚೈತನ್ಯವು ಮಾನಸಿಕ ಮತ್ತು ಭಾವನಾತ್ಮಕ ಭಾಗಗಳಲ್ಲಿ ಪ್ರವಹಿಸಬಹುದು. ಆದರೆ ನರಗಳು ಮತ್ತು ದೇಹಕ್ಕೆ ಅದರಿಂದ ಪ್ರಯಾಸವಾಗಿ ಈ ಉನ್ನತ ಶಕ್ತಿಗಳು ಕ್ರೀಡೆಯೊಂದಿಗೆ ಸಹಕರಿಸದಿರಬಹುದು. ಸಾಧನೆಯ ಗಣನೀಯ ಭಾಗವಾಗಿ ತೀವ್ರವಾದ ಭೌತಿಕ ತಪಸ್ಸನ್ನು ಸೇರಿಸದಿರಲು ಅದೇ ಕಾರಣ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 31/432–433**

ಶಾಂತಿಯ ಅವರೋಹಣ, ಶಕ್ತಿ ಅಥವಾ ಸಾಮರ್ಥ್ಯದ ಅವರೋಹಣ, ಬೆಳಕಿನ ಅವರೋಹಣ, ಆನಂದದ ಅವರೋಹಣ – ಈ ನಾಲ್ಕು ಅಂಶಗಳಿಂದಲೇ ಸ್ವಭಾವವು ಪರಿವರ್ತನೆಯಾಗುವದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 30/449**

## ಅಧಿ–ಚೇತನದ ನೆಲೆಗೆ ತೆರೆದುಕೊಳ್ಳುವಿಕೆ

**– ಅನು: ನಾಗಜ್ಯೋತಿ ಮಾನ್ವಿ**

ಉನ್ನತ ಪ್ರಜ್ಞೆಯು ಒಂದು ಪರಿಶುದ್ಧ ಪ್ರೀತಿಯ ಸ್ಥಿತಿಯಾಗಿದೆ. ಆದರೆ, ಇದು ದೈವಿ ಜ್ಞಾನಕ್ಕೆ ಪರಿಶುದ್ಧವಾಗಿ ತೆರೆದುಕೊಳ್ಳುವ ಸ್ಥಿತಿಯೂ ಸಹ ಆಗಿದೆ. ಈ ಎರಡು ನಂಟಿನ ವಿಷಯಗಳ ಮಧ್ಯೆ ಯಾವುದೇ ವಿರೋಧಾಭಾಸವಿರುವದಿಲ್ಲ; ಅಲ್ಲದೇ ಇದು ಇವುಗಳನ್ನು ಭಿನ್ನವಾಗಿಸುತ್ತದೆ.

ಇವುಗಳನ್ನು ಪಡೆಯಲು ಅತ್ಯುತ್ತಮ ಮಾರ್ಗವೆಂದರೆ, ಅವು ಬಂದಾಗ ಎಲ್ಲಾ ಮಾನಸಿಕ ತಳಮಳಗಳನ್ನು, ಹಾಗೂ ಎಲ್ಲಾ ಪ್ರಾಣಿಕ ಆಸೆಗಳು ಮತ್ತು ಹೃದಯ ದೈವನೆಡೆಗೆ ಎಷ್ಟು ಸಾಧ್ಯವೋ ಅಷ್ಟು ಸತತ ಪ್ರೀತಿಯ ಅತ್ಯಂತ ಬಲವಾದ ಶಕ್ತಿಯಾಗಿದೆ.

ನನ್ನ ಪ್ರೀತಿಯ ಆಶೀರ್ವಾದಗಳೊಂದಿಗೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 16/213**

*ಬದುಕುವ ಕಲೆಯು ತಮ್ಮ ಪ್ರಜ್ಞೆಯು ಅತ್ಯುನ್ನತ ಸ್ಥಿತಿಯಲ್ಲಿರುವಂತೆ ಕಾಪಾಡಿಕೊಳ್ಳುವದನ್ನು ಒಳಗೊಂಡಿದೆ. ಮತ್ತು ತನ್ನ ಅತ್ಯುನ್ನತ ವಿಧಿಯು ಜೀವನ ಮತ್ತು ಕ್ರಿಯೆಯನ್ನು ಪ್ರಾಬಲ್ಯಗೊಳಿಸಲು ಒಪ್ಪಿಗೆ ಕೊಡಬೇಕು. ಹಾಗಾದರೆ ನೀವು ತಪ್ಪು ಮಾಡುವ ಯಾವುದೇ ಭಯವಿಲ್ಲದೆ ಹೀಗೆ ಹೇಳಬಹುದು: ನೀವು ಯಾವಾಗಲೂ ನಿಮ್ಮ ಪ್ರಜ್ಞೆಯ ಅತ್ಯುನ್ನತ ಶೃಂಗದಲ್ಲಿರಿ. ಮತ್ತು ಯಾವಾಗಲೂ ನಿಮಗೆ ಅತ್ಯುತ್ತಮವಾದುದೇ ಆಗುತ್ತದೆ. ಆದರೆ, ಅದು ಗರಿಷ್ಠವಾದುದಾಗಿದೆ. ಅದನ್ನು ತಲುಪುವುದು ಅಷ್ಟು ಸುಲಭವಲ್ಲ. ಈ ಆದರ್ಶ ಸ್ಥಿತಿಯನ್ನು ಸಾಕ್ಷಾತ್ಕರಿಸಿಕೊಳ್ಳಲಾಗದಿದ್ದರೆ, ವ್ಯಕ್ತಿಯು ಕನಿಷ್ಠ ಪಕ್ಷ ಒಂದು ಅಪಾಯವನ್ನು ಅಥವಾ ಆಪತ್ತಿನ ಪರಿಸ್ಥಿತಿಯನ್ನು ಎದುರಿಸಿದಾಗ, ಅಭೀಪ್ಸೆ ಮತ್ತು ಪ್ರಾರ್ಥನೆಯಿಂದ ಅತ್ಯುನ್ನತ ವಿಧಿಯನ್ನು ಕರೆದು ದೈವಿ ಸಂಕಲ್ಪಕ್ಕೆ ನಂಬಿಕೆಯುಕ್ತ ಸಮರ್ಪಣೆ ಮಾಡಬೇಕು. ಆಗ ಆತನ ಕರೆಗೆ ತಕ್ಕಷ್ಟು ಈ ಉನ್ನತ ವಿಧಿಯ ಸತ್ತೆಯ*

*ಸಾಮಾನ್ಯ ವಿಧಿಯಲ್ಲಿ ಕೃಪೆಯಿಂದ ಮಧ್ಯ ಪ್ರವೇಶಿಸುತ್ತದೆ. ಮತ್ತು ನಿಮಗೆ ಇಲ್ಲಿಯವರೆಗೆ ಸಂಬಂಧಿಸಿದ ಘಟನೆಗಳ ಸರಣಿಗಳನ್ನು ಬದಲಾಯಿಸುತ್ತದೆ. ಈ ರೀತಿಯ ಘಟನೆಗಳು ಬಹಿರಂಗದ ಪ್ರಜ್ಞೆಗೆ ಪವಾಡದ ರೀತಿಯಲ್ಲಿ ಪರಮಾತ್ಮನ ಹಸ್ತಕ್ಷೇಪದ ರೀತಿಯಲ್ಲಿ ಕಾಣುತ್ತದೆ.*

ಪ್ರಜ್ಞೆ, ಒಂದು ಉನ್ನತ ಪ್ರಜ್ಞೆ, ಹೇಗೆ ಹಸ್ತಕ್ಷೇಪ ಮಾಡುತ್ತಿದೆ ಎಂಬುದರ ಒಂದು ಉದಾಹರಣೆ ಕೊಡುವೆನು.

ಒಬ್ಬ ವ್ಯಕ್ತಿ ಆಫೀಸಿಗೆ ಹೋಗಲೆಂದು ಮನೆಯಿಂದ ಹೊರ ನಡೆಯುತ್ತಾನೆ. ಕೆಲ ದೂರಕ್ಕೆ ಹೋಗುತ್ತಾನೆ. ತಟ್ಟನೆ ಹಿಂದೆ ಏನೋ ಬಿಟ್ಟುಹೋಗಿರುವುದು ನೆನಪಾಗುತ್ತದೆ. ಅದನ್ನು ತರಲು ಆತ ಹಿಂದಕ್ಕೆ ಹೆಜ್ಜೆ ಇಡುತ್ತಾನೆ. ಮತ್ತು ತೆಗೆದುಕೊಂಡ ತಕ್ಷಣವೇ, ಆತ ಮುಂದಕ್ಕೆ ಹೋಗಿದ್ದರೆ ಎಲ್ಲಿರುತ್ತಿದ್ದನೋ ಆ ಸ್ಥಳದಲ್ಲಿ ಒಂದು ಬೀಡುಕಬ್ಬಿಣದ ಪೈಪ್ ಬೀಳುತ್ತದೆ. ಏನೋ ಒಂದು ಈ ವ್ಯಕ್ತಿಯ ಪ್ರಜ್ಞೆಯಲ್ಲಿ, ಹಿಂದಕ್ಕೆ ಹೋಗು ಎಂದು ಹೇಳುತ್ತಿತ್ತು. ಮತ್ತು ಆತನ ಜೀವವನ್ನು ಉಳಿಸಿತು. ಪ್ರಜ್ಞೆಯ ಹಸ್ತಕ್ಷೇಪವು ವಿಧಿಯನ್ನು ಬದಲಾಯಿಸುತ್ತದೆ. ಎಂದು ನಾವು ಹೇಳುವದರ ಅರ್ಥವು ಇದೇ ಆಗಿದೆ. ಈ ವ್ಯಕ್ತಿಯಲ್ಲಿ ಎರಡು ವಿಧಿಗಳಿದ್ದವು. ಕೆಲವರಲ್ಲಿ ಬಹುಶಃ ಒಂದು ಆತ ಸಾಯಬೇಕೆಂದು ಬಯಸಿತ್ತು. ಮತ್ತು ಇನ್ನೊಂದು ಆತ ಜೀವಿಸಬೇಕೆಂದು ಬಯಸಿತ್ತು.

*ಇದನ್ನು "ಆಕಸ್ಮಿಕ" ಎಂದು ಕರೆಯಬಹುದೇ?*

ಇಲ್ಲ, ಏಕೆಂದರೆ, ಆಕಸ್ಮಿಕ ಎಂದರೆ, ಅದು ಏನೋ ಒಂದು ಅಸಂಬದ್ಧವಾಗಿ ಕಾರಣವಿಲ್ಲದೆ ಸಂಭವಿಸುತ್ತದೆ. ಮತ್ತು ಒಂದು ವೇಳೆ ನೀವು ಜೀವನ ಒಂದು ಅಸಂಭದ್ಧ ಎಂದು ನಂಬಿದರೆ, ನೀವು ಕಲಿಯುವುದು ಬಹಳಕಷ್ಟಿದೆ. ತದ್ವಿರುದ್ಧವಾಗಿ ಅದು ಬಹಳ ಸುಸಂಬದ್ಧ, ಪ್ರತಿಯೊಂದು ವಿಷಯವು ನಿಖರವಾಗಿ ನಿರ್ಧರಿಸಲ್ಪಡುತ್ತದೆ. ಮತ್ತು ಯಾವುದೋ ಒಂದು ನಿಮಗೆ ಇದು "ಆಕಸ್ಮಿಕ" ಎಂದು ಭಾವಿಸುವಂತೆ ಮಾಡುತ್ತದೆ. ಏಕೆಂದರೆ, ನಿಮಗೆ ನಿರ್ಣಾಯಕತೆಯ ಬಗ್ಗೆ ಏನೂ ಗೊತ್ತಿಲ್ಲ. ಅವು ಸಂಪೂರ್ಣವಾಗಿ ನಿಮ್ಮಿಂದ ಆಚೆಗಿವೆ. ಏಕೆಂದರೆ, ಅಸಂಖ್ಯಾತ ಒಂದರೊಳಗೊಂದು ಹೆಣೆಯಲ್ಪಟ್ಟ ನಿಯಮಗಳಿವೆ ಮತ್ತು ನಿಮಗೆ ಅವುಗಳ ಬಗ್ಗೆ ಏನೂ ಗೊತ್ತಿಲ್ಲ. ಹಾಗಾಗಿ ನಿಯಮಗಳ ಪ್ರಕಾರ ಏನೋ ಒಂದು

ಸಂಭವಿಸಿದರೆ ಅದನ್ನು ನೀವು ಇದೊಂದು 'ಪವಾಡ' ಅಥವಾ 'ಆಕಸ್ಮಿಕ' ಎಂದು ಕರೆಯುತ್ತೀರಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 15/288–89 – ಶ್ರೀಮಾತೆ**

ಸತ್ಯವೆಂದರೆ, ಮಾನವತೆಗೆ ಉತ್ಕಟವಾದ ಬದಲಾವಣೆ ಅವಶ್ಯಕತೆ ಇರುವಷ್ಟು ಯಾವ ವ್ಯವಸ್ಥೆಯು ತನ್ನದೆ ಸ್ವಂತ ಪ್ರಭಾವದಿಂದ ಬದಲಾಯಿಸಲಾರದು; ಈ ಬದಲಾವಣೆಯೂ ಕೇವಲ ತನ್ನ ಉನ್ನತ ಪ್ರಕೃತಿಯ ಅತ್ಯುನ್ನತ ಸಾಧ್ಯತೆಗಳ ಅಭಿವೃದ್ಧಿಯಿಂದ ಮಾತ್ರ ಸಾಧ್ಯವಾಗುತ್ತದೆ. ಮತ್ತು ಈ ಅಭಿವೃದ್ಧಿಯೂ ಅಂತರಂಗದ ಬೆಳವಣಿಗೆಯ ಮೇಲೆ ಅವಲಂಬಿತವಾಗಿದೆ. ಹೊರತು ಬಹಿರಂಗದ ಮೇಲೆ ಅಲ್ಲ.

ಬಾಹ್ಯ ಬದಲಾವಣೆಗಳು ಆ ನಿಜವಾದ ಸುಧಾರಣೆಗೆ ಅನುಕೂಲಕರ ಸ್ಥಿತಿಗಳನ್ನಾದರೂ ಸಿದ್ಧಪಡಿಸುತ್ತದೆ; ಅಥವಾ ತದ್ವಿರುದ್ಧವಾಗಿ ಅವು ಮೊಂಡುತನದ ಅಸುರೀ ಮಾನವತೆಯ ಭಾರ ಹೊತ್ತಿರುವ ಪೃಥ್ವಿಯನ್ನು ಶುದ್ಧಗೊಳಿಸಲು ಕೇವಲ 'ಕಲ್ಕಿ'ಯ ಕತ್ತಿಯಿಂದ ಮಾತ್ರ ಸಾಧ್ಯವಾಗುವ ಸ್ಥಿತಿಗೂ ಕರೆದೊಯ್ಯಬಹುದು. ಈ ಆಯ್ಕೆಯು ಪ್ರಭೇದಗಳ ಮೇಲೆ ಅವಲಂಬಿತವಾಗಿದೆ; ಏನು ಬಿತ್ತುತ್ತೇವೆಯೋ ಅದರ ಕರ್ಮದ ಫಲವನ್ನೇ ಪಡೆಯುತ್ತೇವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 25/661–62 – ಶ್ರೀ ಅರವಿಂದರು**

*ಜಗತ್ತು ಗೊಂದಲದಲ್ಲಿದೆ ಎಂದು ನಿಮಗೆ ನಿಜವಾಗಿಯೂ ಅನಿಸುತ್ತದೆ.*

ಹೌದು, ಓಹ್ ಹೌದು !

*ಮತ್ತು ವ್ಯಕ್ತಿಗಳು.*

ಮುಂಜಾವಿನಿಂದಲೂ, ಮುಷ್ಕರಗಳು, ಜಗಳಗಳು ಅವ್ಯವಸ್ಥೆಗಳಂತೆ ಇವೆ... ಮತ್ತು ಯಾರು ಅವ್ಯವಸ್ಥೆಯನ್ನು ಸೃಷ್ಟಿಸಿದ್ದಾರೆಯೋ ಅವರ ಸಹಾಯದಿಂದಲೇ ವ್ಯವಸ್ಥೆಯು ಮರು–ಸ್ಥಾಪಿಸಲ್ಪಡಬೇಕು ಎಂದು ಅನಿಸುತ್ತದೆ. ಮಾಡಬೇಕಾದ ವಿಷಯ ಇದಾಗಿದೆ. ಸಾಮಾನ್ಯ ಸದ್ಭಾವ ಮತ್ತು ಎಲ್ಲಾ ನೈತಿಕ ಮತ್ತು ಸಾಮಾಜಿಕ ನಿಯಮಗಳ ಬದಲಾಗಿ ಅವೆಲ್ಲವೂ ನೆಲಕ್ಕೆ ಅಪ್ಪಳಿಸಿವೆ, ನೀವು ಅವುಗಳಿಂದ

ಮೇಲೇರಬೇಕಾಗಿದೆ. ದೈವಿ ಸಂಕಲ್ಪ ಮತ್ತು ದೈವೀ ಸಾಮರಸ್ಯ ಇರಲೇಬೇಕಾಗಿದೆ, ನಮಗೆ ಬೇಕಾದುದು ಇದೇ ಆಗಿದೆ; ಮತ್ತು ಯಾರು ವಿಷಯಗಳ ಸಾಮಾನ್ಯ ನಿಯಮಗಳ ಮತ್ತು ಸಾಮಾಜಿಕ ಸಾಂಪ್ರದಾಯಗಳ ವಿರುದ್ಧ ಪ್ರತಿರೋಧಿಸುತ್ತಾರೋ ಅವರು ಉನ್ನತ ಪ್ರಜ್ಞೆಯ ಮತ್ತು ನಿಜವಾದ ಸತ್ಯದ ಜೊತೆಗೆ ಸಂಬಂಧ ಹೊಂದಿದ್ದಾನೆ ಎಂದು ಸಾಬೀತುಪಡಿಸುತ್ತದೆ.

ಅದನ್ನು ಮಾಡುವ ಸಮಯ ಇದಾಗಿದೆ. *(ಮೇಲಕ್ಕೆ ಹಾರುವ ಹಾವಭಾವ)*

ಮತ್ತು ಸಂಘಟಿಸುವ ಶಕ್ತಿಯ ದೃಷ್ಟಿಕೋನದಿಂದ, ಇದೊಂದು ಶಕ್ತಿ... ಅತ್ಯಂತ ಶಕ್ತಿಶಾಲಿ ಇದೊಂದು ಆಶ್ಚರ್ಯ ಮತ್ತು ಆಗ, ಈ ಶಕ್ತಿಯು ಉನ್ನತ ವ್ಯವಸ್ಥೆಯ ವಿಲೇವಾರಿಯ ಸ್ಥಾನದಲ್ಲಿ ನಿಜವಾದ ಪ್ರಜ್ಞೆಯನ್ನು ಇರಿಸಿದರೆ, ಏನೋ ಒಂದನ್ನು ಮಾಡಬಹುದು.

ನೀವು... ಮೇಲಕ್ಕೆ ಹಾರಲೇಬೇಕು.

ವ್ಯವಸ್ಥೆಯನ್ನು ಮರುಸ್ಥಾಪಿಸಲು ಬಯಸುವ ಎಲ್ಲಾ ಜನರು ಎಲ್ಲಾ ಹಳೆಯ ವಿಚಾರಗಳ ಕಡೆಗೆ ಸೆಳೆಯಲ್ಪಡುತ್ತಾರೆ. ಹಾಗಾಗಿ ಅವರು ಎಂದಿಗೂ ಯಶಸ್ವಿಯಾಗಲಾರರು. ಇದು ಮುಗಿದಿದೆ. ಒಳ್ಳೆಯದಕ್ಕಾಗಿಯೇ ಮುಗಿದಿದೆ. ನಾವು ಮೇಲಕ್ಕೆ ಹೋಗೋಣ. ಮೇಲಕ್ಕೆ ಏರಿದವರು ಮಾತ್ರ ಕಾರ್ಯಗೈಯಬಹುದು.

*(ದೀರ್ಘ ನಿಶ್ಚಲ ನೀರವತೆ)*

*ನೀವು ಕೇಳುವುದು ಏನೂ ಇಲ್ಲವೇ?*
*ಯಾವ ಮಾರ್ಗದೆಡೆಗೆ ನಾನು ಹೋಗುತ್ತಿದ್ದೇನೆ ಎಂಬುದು ನನಗೆ ಸರಿಯಾಗಿ ತಿಳಿದಿಲ್ಲ.*

ಇಲ್ಲಿ ಕೇವಲ ಒಂದು ಮಾರ್ಗವಿದೆ. ದೈವನ ಕಡೆಗೆ ಮತ್ತು ನಿಮಗೆ ತಿಳಿದಿರುವ ಹಾಗೆ ಎಷ್ಟು ಬಹಿರ್ಮುಖವಾಗಿದೆಯೋ ಅಷ್ಟೇ ಅಂತರ್ಮುಖವೂ ಆಗಿದೆ, ಎಷ್ಟು ಕೆಳಮುಖವಾಗಿದೆಯೋ ಅಷ್ಟೇ ಮೇಲ್ಮುಖವಾಗಿದೆ. ಇದು ಎಲ್ಲಾ ಕಡೆಯೂ ಇದೆ. ಈ ಜಗತ್ತು ಹೇಗಿದೆಯೋ ಅದರಲ್ಲಿಯೇ ದೈವನನ್ನು ಹುಡುಕಬೇಕಾಗಿದೆ. ಮತ್ತು 'ಆತ'ನೊಂದಿಗೆ, 'ಆತ'ನಿಗೆ ಮಾತ್ರ ಅಂಟಿಕೊಳ್ಳಬೇಕಾಗಿದೆ; ಮತ್ತು ಬೇರಾವ ಮಾರ್ಗವೂ ಇಲ್ಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 11/253–54**

# ಇತರರಿಗೆ ಸಹಾಯ ಮತ್ತು ಈ ಜಗತ್ತು

**– ಅನು: ಶ್ರೀ ಕಿಶೋರಕುಮಾರ ಕಾಸಾರ, ಕಲಬುರ್ಗಿ**

ನಾವು ಜನ ಸಮೂಹದ ಮೇಲೆ ದುಃಖವನ್ನು ಹೇರಿ ಆಧ್ಯಾತ್ಮಿಕ ಸಾಕ್ಷಾತ್ಕಾರವನ್ನು ಪ್ರಾಪ್ತ ಮಾಡಿಕೊಳ್ಳಲು ಸಾಧ್ಯವಿಲ್ಲ.

ಸಾಧನೆಯ ಮಾರ್ಗದಲ್ಲಿ ತಾನೊಬ್ಬನೇ ಏಕಾಂಗಿಯಾಗಿ ನಡೆದು ನಿರ್ಮಾಯಘನದೆಡೆಗೆ ಚರಿಸುವೆನೆಂದು ತಿಳಿದುಕೊಂಡರೆ, ಅದು ನಿಮ್ಮ ಅಹಮಿಕೆಯ ಭಾವನೆಯನ್ನು ತೋರಿಸುತ್ತದೆ. ನೀವು ಒಬ್ಬರೇ ಊರ್ಧ್ವಮುಖಿಯಾಗಿ ಚಲಿಸುವದಲ್ಲ. ಬದಲಾಗಿ ಇತರರನ್ನೂ ನಿಮ್ಮೊಡನೆ ಔನ್ನತ್ಯದ ಆಯಾಮದೆಡೆಗೆ ಕೊಂಡೊಯ್ಯಬೇಕು. ಇದುವೇ ಸಾಕ್ಷಾತ್ಕಾರದ ಮೂಲ ನಿಯಮವಾಗಿದೆ. ಒಂದು ವೇಳೆ ಇತರರು ನಿಮ್ಮೊಡನೆ ಜೊತೆಯಾಗಿ ಹೆಜ್ಜೆ ಹಾಕಲು ಸಿದ್ಧವಿಲ್ಲದೇ ಹೋದರೆ, ಅವರನ್ನು ಆ ದರ್ಶನ ಮಾಲೆಯೆಡೆಗೆ ಮುಖ ಮಾಡುವಂತೆ ಪ್ರೇರೇಪಿಸಬೇಕು. ಕೊನೆಗೂ ಅವರು ಒಪ್ಪದಿದ್ದಾಗ ಮಾತ್ರ ನೀವು ಒಬ್ಬೊಂಟಿಗರಾಗಿ ನಿಮ್ಮ ಪಥದೆಡೆಗೆ ಮುನ್ನಡೆಯಬಹುದು. ಹೀಗೆ ಇನ್ನೊಬ್ಬರನ್ನೂ ಉತ್ತುಂಗದೆಡೆ ಕೊಂಡೊಯ್ದು ಅವರನ್ನೂ ಪ್ರಗತಿಪರರನ್ನಾಗಿ ಮಾಡುವುದು ನಿಮ್ಮ ಪ್ರಕಾರ ಹೊರೆಯೆನಿಸಿದರೆ. ಆ ಹೊರೆಯನ್ನು ಆ ದೈವವಿತ್ತ ಪರೀಕ್ಷೆಯೆಂದು, ನಿಮಗಾಗಿಯೇ ರೂಪಿಸಲಾದ ದಿವ್ಯತೆಯ ಅನುಗ್ರಹದ ಪರಿಣಾಮವೆಂದು ಭಾವಿಸಬೇಕು. ಹಾಗೂ ಸರ್ವರನ್ನು ಅಭಿವೃದ್ಧಿ ಪಥದಿ ಕೊಂಡೊಯ್ಯುವ ಕಾರ್ಯದಲ್ಲಿ ಆ ದಿವ್ಯತೆಯ ಸಹಾಯವನ್ನು ಪಡೆದು ಸಾಕ್ಷಾತ್ಕಾರವನ್ನು ಸಂಪನ್ನಗೊಳಿಸಿಕೊಳ್ಳಬೇಕು.

*

ಇತರರಿಗೆ ಸಹಾಯ ಮಾಡುವುದೆಂದರೆ ಅದು ನಿಮಗೆ ನೀವೇ ಸಹಾಯ ಮಾಡಿಕೊಂಡಂತೆ. ಹೇಗೆಂದರೆ, ನೀವು ಇತರರಲ್ಲಿರುವ ಕೊರತೆಗಳನ್ನು ತುಂಬುವ ಕಾರ್ಯದಲ್ಲಿ ನೀವು ನಿಮ್ಮೊಳಗಿರುವ ಕೊರತೆಗಳನ್ನೂ ಕಂಡುಕೊಳ್ಳುವಿರಿ. ಹಾಗೂ ಅವರನ್ನು ಪೂರ್ಣಗೊಳಿಸುವ ಜೊತೆಜೊತೆಗೆ ನೀವು ನಿಮ್ಮನ್ನೂ ಪೂರ್ಣಪದ ಸಂಪನ್ನಗೊಳಿಸಿಕೊಳ್ಳುವಿರಿ. ಹಾಗೂ ಈ ಹಂತದಲ್ಲಿ ಯಾರೂ ಸಹ ಸರ್ವ ಶ್ರೇಷ್ಠರಲ್ಲ ಬದಲಿಗೆ ಎಲ್ಲರಲ್ಲೂ ಒಂದಲ್ಲ ಒಂದು ಕೊರತೆ ಇದ್ದೇ ಇರುತ್ತದೆ ಎಂಬ ದಿವ್ಯ ಭಾವವು ಜಾಗೃತವಾಗಿ ನಮ್ಮೊಳಗಿನ ಅಹಮಿಕೆಯ ಅಳಿಯುವಿಕೆಗೆ ಸಹಕಾರಿಯಾಗುತ್ತದೆ.

*

ನಾವು ಇತರರನ್ನು ಕಂಡುಕೊಳ್ಳುವ ಕಾರ್ಯದಲ್ಲಿ ನಮ್ಮನ್ನು ನಾವೇ ಕಂಡುಕೊಳ್ಳುತ್ತೇವೆ. ಉದಾಹರಣೆಗೆ, ನಾವು ನಮ್ಮ ಸುತ್ತಲೂ ಹರಡಿರುವ ಮಣ್ಣನ್ನು ನೋಡಿದಾಗ, ಆ ಮಣ್ಣು ನಮ್ಮೊಳಗೂ ಸಹ ಅಸ್ತಿತ್ವವನ್ನು ಪಡೆದುಕೊಂಡಿದೆ ಎಂಬುದರ ಅರಿವಾಗುತ್ತದೆ. ಹಾಗೂ ನಾವು ಈ ಮಣ್ಣಿನಿಂದಲೇ ಮೂಡಿರುವ ಭಾವವು ಕುಡಿಯೊಡೆಯುತ್ತದೆ.

*

ಒಂದು ವೇಳೆ ನಾವು ಇತರರಲ್ಲಿರುವ ಅಹಂಕಾರ ಭಾವನೆಯನ್ನು ಕಂಡು ಆಘಾತಕ್ಕೊಳಗಾಗುತ್ತೇವೆ ಎಂದರೆ, ನಮ್ಮೊಳಗೂ ಸಹ ಆ ಅಹಂಕಾರವು ಮನೆ ಮಾಡಿಕೊಂಡಿದೆ ಎಂದರ್ಥ.

*

"ಜನ ಸೇವೆಯೇ ಜನಾರ್ಧನನ ಸೇವೆ" ಎಂಬ ನುಡಿಗಟ್ಟಿನಂತೆ ಮಾನವ ಜನಾಂಗಕ್ಕೆ ನಾವು ಮಾಡುವ ಸೇವೆಯು ಭಗವಂತನಿಗೆ ಮಾಡುವ ಸೇವೆಯೇ ಆಗಿದೆ ಎಂಬ ಭಾವನೆಯೇ ತಪ್ಪು ತಿಳುವಳಿಕೆಯಿಂದ ಕೂಡಿದೆ. ಏಕೆಂದರೆ, ಪ್ರತಿಯೊಬ್ಬ ಮಾನವನನ್ನು ಪ್ರತ್ಯೇಕತಾ ಭಾವನೆಯಿಂದ ನೋಡುವುದರಿಂದಲೇ ಈ ಭಾವನೆಯು ಹುಟ್ಟಿಕೊಳ್ಳುತ್ತದೆ. ಹಾಗಾಗಿ ನಾವು ನಮ್ಮಲ್ಲಿರುವ ಈ ಪ್ರತ್ಯೇಕತಾ ಮನೋಭಾವನೆಯನ್ನು ಪರಿತ್ಯಜಿಸಿ ಮುನ್ನಡೆಯಬೇಕಿದೆ.

*

ಇತರರಿಗೆ ಸಹಾಯ ಮಾಡುವ ಅತ್ಯುತ್ತಮ ಮಾರ್ಗವೆಂದರೆ, ನಿಮ್ಮನ್ನು ನೀವು ಪರಿವರ್ತಿಸಿಕೊಳ್ಳುವುದು. ಮೊದಲು ನೀವು ಪರಿಪೂರ್ಣರಾಗಿದ್ದರೆ ಮಾತ್ರ ಇತರರನ್ನೂ ನಿಮ್ಮಂತೆ ಪರಿಪೂರ್ಣರನ್ನಾಗಿಸಲು ಸಾಧ್ಯ

*

ನೀವು ಪ್ರಪಂಚವನ್ನು ಉಳಿಸಿ–ಬೆಳೆಸಬೇಕೆಂಬ ಕಾಳಜಿಯಲ್ಲಿದ್ದರೆ ಮೊದಲು ಆ ಉನ್ನತ ಪ್ರಜ್ಞೆಗೆ ನಿಮ್ಮನ್ನು ನೀವು ಅಧಿರೋಹಿಸಿಕೊಳ್ಳಿರಿ.

*

ನೀವು ಪ್ರಪಂಚವನ್ನು ಪರಿವರ್ತಿಸಲು ಬಯಸಿದರೆ, ಮೊದಲು ನಿಮ್ಮನ್ನು ನೀವು ಪರಿವರ್ತಿಸಿಕೊಳ್ಳಿರಿ. ನಿಮ್ಮ ಆಂತರ್ಯದ ರೂಪಾಂತರಣದ ಮೂಲಕ ನೀವು ದರ್ಶನ ಗೈದ ಸತ್ಯ ಪ್ರಜ್ಞೆಯನ್ನು ಇಳೆಗಿಳಿಸಿದ ನಂತರವೇ ಈ ಭೌತಿಕ ಪ್ರಪಂಚದಲ್ಲಿ ಆ ದಿವ್ಯತೆಯ ಅವತರಣವಾಗುತ್ತದೆ.

*

ಸಮೂಹಗಳು ಎಷ್ಟೇ ಪೂರ್ಣತೆಯಿಂದ ಕೂಡಿದ್ದರೂ, ಅದೆಷ್ಟೇ ವ್ಯಾಪ್ತಿ ವೈಶಾಲ್ಯತೆಯನ್ನು ಪಡೆದುಕೊಂಡಿದ್ದರೂ ನವ್ಯ ಶಕ್ತಿ, ದಿವ್ಯತೆಯ ಸರ್ವಶಕ್ತಿ ಮತ್ತು ಮಾನವನ ವೈಚಾರಿಕ ಶಕ್ತಿಯನ್ನು ಸದ್ಬಳಕೆ ಮಾಡದೇ ಹೋದರೆ ಅದಕ್ಕೆ ಯಾವ ಶಾಶ್ವತ ಸಾಧನೆಯನ್ನು ಮಾಡಲೂ ಸಾಧ್ಯವಿಲ್ಲ.

*

ಈ ಭೌತಿಕ ವಲಯದಲ್ಲಿ ನಿರ್ಮಾಣವಾದ ಸಂಘಟನೆಗಳು ಯಾವ ರೀತಿಯ ಪೂರ್ವ ಸಿದ್ಧತೆಗಳನ್ನು ಮಾಡಿಕೊಂಡು ಚಟುವಟಿಕೆಯನ್ನು ಆರಂಭಿಸಿದರೂ ಅದು ಮಾನವ ಜನಾಂಗದ ದುಃಖಗಳಿಗೆ ಶಾಶ್ವತ ಪರಿಹಾರವನ್ನು ನೀಡಲು ಸಮರ್ಥವಾಗಿಲ್ಲ.

ಮಾನವನು ತನ್ನ ದುಃಖವನ್ನು ತೊಡೆದು ಹಾಕಲು ತಾನೇ ಪ್ರಯತ್ನಿಸಬೇಕು. ಆ ಔನ್ನತ್ಯದ ಪ್ರಜ್ಞೆಯ ಮಟ್ಟಕ್ಕೆ ಬೆಳೆಯಬೇಕು. ಆ ಮೂಲಕ ತನ್ನಲ್ಲಿರುವ ಅಜ್ಞಾನ, ಮಿತಿ ಮತ್ತು ಸ್ವಾರ್ಥ ಭಾವನೆಯನ್ನು ತೊಡೆದುಹಾಕಬೇಕು.

*

ನಿಮಗೆ ಪ್ರಪಂಚವನ್ನು ಬದಲಾಯಿಸುವ ಶಕ್ತಿಯಿಲ್ಲದಿದ್ದರೆ, ಈ ಪ್ರಪಂಚದಲ್ಲಿರುವ ತಪ್ಪುಗಳನ್ನು ಎತ್ತಿ ತೋರಿಸುವ ನಿಮ್ಮ ಪ್ರಯತ್ನವೇ ನಿಷ್ಪ್ರಯೋಜಕವಾಗುತ್ತದೆ. ಪ್ರಪಂಚದಲ್ಲಿ ನಿಮಗೆ ತಪ್ಪೆಂದು ಕಂಡುಬರುವ ವಿಷಯಗಳು ನಿಮ್ಮೊಳಗೆ ಅಸ್ತಿತ್ವದಲ್ಲಿದ್ದರೆ ಮೊದಲು ಅದನ್ನು ನಿಮ್ಮಿಂದ ತೆಗೆದು ಹಾಕಬೇಕು. ಆಗ ಮಾತ್ರವೇ ನಿಮಗೆ ಈ ಪ್ರಪಂಚವು ದೋಷಮುಕ್ತವಾಗಿ ಕಾಣುತ್ತದೆ. ಏಕೆಂದರೆ, ನಿಮ್ಮೊಳಗೆ ಮನೆ ಮಾಡಿಕೊಂಡಿದ್ದ ಆ ದೋಷವೇ ನಿಮಗೆ ಎಲ್ಲೆಡೆಯೂ ಕಾಣಸಿಗುತ್ತದೆ. ಒಂದು ವೇಳೆ ಆ ದೋಷದಿಂದ ನೀವು ಮುಕ್ತರಾಗಿದ್ದೇ ಆದರೆ, ಇಡೀ ಪ್ರಪಂಚವೇ ದೋಷಮುಕ್ತವಾಗಿರುವಂತೆ ಕಾಣುತ್ತದೆ.

*

ನೀವು ಪರಿವರ್ತಿತವಾದ ನಂತರ, ನಿಮ್ಮ ಸುತ್ತಲಿನ ಜಗತ್ತೆಲ್ಲವೂ ತಾನೇತಾನಾಗಿಯೇ ಬದಲಾಗುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/275–78**

ನಿಮ್ಮೆಡೆಗೆ ಬರುವ ಪ್ರತಿಯೊಂದು ಆಸೆಗಳನ್ನು ಪೂರೈಸಿದ ತಕ್ಷಣವೇ ಇನ್ನೊಂದು ಆಸೆಯು ತೆರವಾದ ಆ ಸ್ಥಾನವನ್ನು ತುಂಬಿಸುತ್ತದೆ. ಈ ಆಸೆಯ ಸರಣಿಗೆ ಅಂತ್ಯವೇ

ಇಲ್ಲ. ನೀವು ಅವುಗಳನ್ನು ತುಂಬಿಸುತ್ತಾ ಹೋದಂತೆ, ಬೇರೊಂದು ಆಸೆಯು ಬಾಯ್ದೆರೆದು ನಿಲ್ಲುತ್ತದೆ.

ಆ ಆಸೆಗಳನ್ನು ಜಯಿಸಿದರೆ ಮಾತ್ರ ನಿಮಗೆ ಅದರಿಂದ ಮುಕ್ತಿಯು ದೊರೆಯುತ್ತದೆ. ಆಸೆಗಳನ್ನು ಗೆಲ್ಲುವ ಶಕ್ತಿಯನ್ನು ಸಂಪಾದಿಸಲು ಈ ಕೆಳಮಟ್ಟದ ಪ್ರಜ್ಞೆಯಿಂದ ಉನ್ನತ ಮಟ್ಟದ ಪ್ರಜ್ಞೆಯಡೆಗೆ ಅಧಿರೋಹಿಸುವ ಅವಶ್ಯಕತೆಯಿದೆ.

*

ಆಸೆಗಳನ್ನು ತ್ಯಜಿಸುವುದೇ ಸಾಕ್ಷಾತ್ಕಾರದ ಮೊದಲ ಮೆಟ್ಟಿಲಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/253**

ಈ ಕೆಳಗೆ ಶ್ರೀ ಅರವಿಂದರು ಶ್ರೀಮಾತೆಯವರಿಗಾಗಿ ಬರೆದ ಪತ್ರವೊಂದನ್ನು ನೀಡಲಾಗಿದ್ದು, ಅವರು ಈ ಮರ್ತ್ಯಮಯ ಲೋಕಕ್ಕೆ ನವೀನ ಪ್ರಜ್ಞೆಯೊಂದನ್ನು ಇಳಿಸುವ ತಮ್ಮ ವಿಶೇಷ ಕಾರ್ಯದ ಪೂರ್ವಭಾವಿಯಾಗಿ ತಮ್ಮನ್ನು ತಾವು ಹೊರಗಿನ ಪ್ರಪಂಚದೊಂದಿಗಿನ ಸಂಪರ್ಕಗಳನ್ನು ನಿರ್ಬಂಧಿಸಿ, ಸಾಮಾನ್ಯ ಜೀವನದಿಂದ ಬೇರಾಗಿ ಬದುಕುವ ಅಗತ್ಯವನ್ನು ತಿಳಿಸಿದ್ದಾರೆ.

ಈ ಪತ್ರವನ್ನು ಸುಮಾರು 1933 ರಲ್ಲಿ ಬರೆಯಲಾಗಿದ್ದು, ಈ ಪತ್ರಕ್ಕೆ ವ್ಯತಿರಿಕ್ತವೆಂಬಂತೆ ಈಗ ಹೊರಗಿನ ಪ್ರಪಂಚದ ಎಲ್ಲಾ ರೀತಿಯ ಜನರು ಆಶ್ರಮಕ್ಕೆ ಮುಕ್ತವಾಗಿ ಭೇಟಿ ನೀಡುತ್ತಾರೆ. ಮತ್ತು ಆಶ್ರಮದ ಅನೇಕ ಸಾಧಕರು ಅವರೊಂದಿಗೆ ಸಹಜವಾಗಿಯೇ ಬೆರೆಯುತ್ತಾರೆ. ಅಂದು ಈ ಪತ್ರವನ್ನು ಬರೆದ ಸಂದರ್ಭದಲ್ಲಿ ಹೊರಗಿನ ಜನಾಂಗದೊಂದಿಗೆ ಬೇರ್ಪಡಿಸಿದ್ದ ಆಶ್ರಮದ ನಿಬಂಧನೆಗಳು ಇನ್ನು ಮುಂದೆ ಅಗತ್ಯವಿಲ್ಲವೆಂಬ ಹೊಸ ಹಂತವನ್ನು ತಲುಪಿರುವ ಮಾಹಿತಿಯನ್ನು ಇಲ್ಲಿ ಪ್ರಸ್ತುತಪಡಿಸಲಾಗುತ್ತದೆ.

*(ಶ್ರೀ ಅರವಿಂದರಿಗೆ ಕೇಳಲಾದ ಪ್ರಶ್ನೆ)*

"ವಿಶ್ವದ ಎಲ್ಲಾ ಜೀವ ಸಂಕುಲಗಳಲ್ಲಿ ಆ ದಿವ್ಯ ಪ್ರೇಮದ ಅಸ್ತಿತ್ವವಿದ್ದು, ಅದು ಪರಸ್ಪರ ಒಂದಕ್ಕೊಂದು ನಿಕಟ ಸಂಬಂಧವನ್ನು ಹೊಂದಿ ಕೊಡುಕೊಳ್ಳುವಿಕೆಯ ಕಾರ್ಯದಲ್ಲಿ ನಿರತವಾಗಿರುತ್ತದೆ." ಎಂಬ ವಾಣಿಯಂತೆ ಆ ದಿವ್ಯತೆಯನ್ನು ಅರಿತುಕೊಳ್ಳಲು ನಮಗಿರುವ ಸುಲಭ ಮಾರ್ಗವೆಂದರೆ ಪ್ರತಿಯೋರ್ವ

ಜೀವಿಯೊಡನೆ ಸಂಪರ್ಕವನ್ನು ಸಾಧಿಸಿ ಆ ಜೀವಿಯೊಳಗಿರುವ ದಿವ್ಯತೆಯನ್ನು ಅರಿತುಕೊಳ್ಳುವುದಾಗಿದೆ. ಆದರೆ, ಈ ಹಂತದಲ್ಲಿ ನಾವು ಹೊರಗಿನ ಪ್ರಪಂಚದ ಜನರೊಂದಿಗಿನ ನಮ್ಮ ಸಂಪರ್ಕವನ್ನು ಏಕೆ ನಿರ್ಬಂಧಿಸಬೇಕು? ಮತ್ತು ಎಲ್ಲಾ ಜನರಿಗೆ ನಮ್ಮ ಪ್ರೇಮವನ್ನು ನೀಡಲು ಏಕೆ ಸಾಧ್ಯವಿಲ್ಲ?

*(ಶ್ರೀ ಅರವಿಂದರಿಂದ ಬಂದ ಉತ್ತರ)*

ಸಾಮಾನ್ಯ ಕರ್ಮ ಯೋಗದಲಿ ಈ ವಾದವು ಸರಿಯಾಗಿದೆ. ಅಧಿಮಾನಸದೊರೆಗಿನ ಈ ಏರಿಳಿತದಲ್ಲಿ ವಿಶ್ವಚೈತನ್ಯದೊಡನೆ ನಮ್ಮನ್ನು ನಾವು ಐಕ್ಯಗೊಳಿಸುವ ಹಂತದವರೆಗೆ ಮಾತ್ರ ಇದರ ಅವಶ್ಯಕತೆಯಿದೆ. ಆದರೆ, ಈಗ ಭೂಮಿಗೆ ಹೊಸ ಪ್ರಜ್ಞೆಯೊಂದರ ಅವತರಣವಾಗಬೇಕಿದೆ. ಅದು ಕೇವಲ ನಮಗಾಗಿ ಅಲ್ಲ ಬದಲಿಗೆ ಭೂಮಿಯ ಸಕಲ ಸಂಕುಲಗಳ ಏಳಿಗೆಗಾಗಿದೆ. ಆ ಪ್ರಜ್ಞೆಯನ್ನು ಇಳೆಗೆ ಇಳಿಸುವ ಮಹತ್ತರ ಕಾರ್ಯದಲ್ಲಿ ನಮ್ಮನ್ನು ನಾವು ತೊಡಗಿಸಿಕೊಳ್ಳುವ ಹಂತದಲ್ಲಿ ನಮ್ಮನ್ನು ನಾವು ಹೊರಗಿನ ಪ್ರಪಂಚದಿಂದ ಪ್ರತ್ಯೇಕತೆಯನ್ನು ಕಾಯ್ದುಕೊಳ್ಳುವ ಅವಶ್ಯಕತೆಯಿದೆ.

ಎಲ್ಲರೊಂದಿಗೆ ಪ್ರೇಮ ಸಾಮರಸ್ಯದಿಂದ ಬದುಕುವುದು ಸಾಧನೆಯ ಅಂಗವಲ್ಲ ಎಂದರ್ಥವಲ್ಲ. ಆದರೆ, ಎಲ್ಲರೊಂದಿಗೆ ತತ್‌ಕ್ಷಣವೇ ಬೆರೆಯಬಾರದು. ಅದು ಸಮಯಕ್ಕೆ ಸಂಬಂಧಿಸಿದಂತೆ ಅಗತ್ಯಕ್ಕೆ ತಕ್ಕಂತೆ ಆ ಪ್ರೇಮ ಭಾವನೆಯು ತಾನೇ ತಾನಾಗಿ ವ್ಯಕ್ತವಾಗಬೇಕು. ಆದರೆ, ಆ ಉನ್ನತ ಪ್ರಜ್ಞೆಯನ್ನು ಕೆಳಗಿಸಿ ತರುವ ಕಾರ್ಯದಲ್ಲಿ ಆ ಪ್ರೇಮ ತತ್ತ್ವವು ತೊಡಕಾಗದಂತೆ ನೋಡಿಕೊಳ್ಳಬೇಕು. ಈ ಹೋರಾಟದಲ್ಲಿ ನಮಗೆ ಸಹಾಯವನ್ನು ನೀಡುವ ದಿವ್ಯತೆಯ ಹಸ್ತವನ್ನು ಸ್ವೀಕರಿಸಿ ಮುನ್ನಡೆದು ನಮ್ಮ ಕಾರ್ಯವನ್ನು ಸಂಪನ್ನಗೊಳಿಸಿಕೊಳ್ಳಬೇಕು. ಹಾಗೂ ಈ ಕಾರ್ಯವನು ಸಾಧಿಸಿದ ನಂತರ ಈ ಜನಾಂಗ ಮತ್ತು ವಿಶ್ವವನ್ನು ನೋಡುವ ನಮ್ಮ ದೃಷ್ಟಿಕೋನವು ಬದಲಾಗುತ್ತದೆ ಅದಕ್ಕೆ ಕಾರಣ ಪ್ರಪಂಚದ ಅಭಿವ್ಯಕ್ತಿಯಲ್ಲಾದ ಮಹತ್ತರ ಬದಲಾವಣೆಯೇ ಆಗಿರುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/146–47 – ಶ್ರೀಮಾತೆ**

ಶ್ರೀ ಅರವಿಂದರ ಈ ನುಡಿಗಳು ಸಂಪೂರ್ಣವಾಗಿ ಸತ್ಯವಾಗಿದ್ದು, ಅದನ್ನು ನಾವೆಲ್ಲರು ಅನುಸರಿಸಬೇಕಿದೆ.

ಒಂದು ಹೊಸ ಸಂಗತಿಯು ಜರುಗಿದೆ – ಈ ವರ್ಷದ ಆರಂಭದಲ್ಲೇ ಆ ಹೊಸ ಪ್ರಜ್ಞೆಯು ಪ್ರಕಟಗೊಂಡು, ಭೂಮಿಯಲ್ಲಿ ನವ್ಯ ಸೃಷ್ಟಿಯ ಕಾರ್ಯವನ್ನು ಆರಂಭಿಸಿದೆ.

*

**ಉನ್ನತ ಸ್ಥಿತಿಗೆ ಅಧಿರೋಹಿಸುವುದು**

ಮರ್ತ್ಯದ ಜೀವ ಸಂಕುಲಗಳಲ್ಲಿ ಮನುಷ್ಯನು ವಿಶೇಷ ಪ್ರಬೇಧವಾಗಿದ್ದಾನೆ. ಅದಕ್ಕೆ ಕಾರಣವೆಂದರೆ, ಮನುಷ್ಯನು ತನ್ನ ಮಾನಸಿಕ ಸಾಮರ್ಥ್ಯದ ಮೂಲಕ ತನ್ನ ಭೂತ–ಭವಿಷ್ಯಗಳನ್ನು ನೆನೆದು ಮುನ್ನಡೆಯುತ್ತಾನೆ. ಆದರೆ ಇತರ ಪ್ರಾಣಿಗಳು ಭವಿಷ್ಯವನ್ನು ಗಮನದಲ್ಲಿಟ್ಟುಕೊಳ್ಳದೇ ಕೇವಲ ಆ ಕ್ಷಣದ ಪರಿಣಾಮವನ್ನು ಮಾತ್ರ ಲಕ್ಷ್ಯದಲ್ಲಿಟ್ಟುಕೊಂಡು ಬದುಕುತ್ತಿರುತ್ತವೆ. ಒಂದು ವೇಳೆ ಪ್ರಾಣಿಗಳು ತಮ್ಮ ಮಾನಸಿಕ ಸಾಮರ್ಥ್ಯದಿಂದ ಯೋಜಿಸುವ ಹಂತವನ್ನು ತಲುಪಬೇಕಾದರೆ ಅದು ಬಹು ಸೂಕ್ಷ್ಮಮಟ್ಟದ ಪ್ರಜ್ಞೆಗೆ ತನ್ನನ್ನು ತಾನು ಹೊಂದಿಸಿಕೊಳ್ಳಬೇಕಾಗುತ್ತದೆ. ಅಥವಾ ಬಹು ಶಾಂತಿಯುತವಾಗಿ ಯೋಚಿಸಬೇಕಾಗುತ್ತದೆ. ಆದರೆ, ಪ್ರಾಣಿಮಾತ್ರಗಳಿಗೆ ಆ ಸಾಮರ್ಥ್ಯವು ಸುಲಭದಲ್ಲಿ ದಕ್ಕುವದಿಲ್ಲ. ಪ್ರಾಣಿಗಳು ಅನಾರೋಗ್ಯದಿಂದ ಬಳಲುತ್ತಿದ್ದರೂ ಸಹ, ಅದು ತನ್ನ ಸ್ಥಿತಿಗಾಗಿ ಮರುಗುವದಿಲ್ಲ. ಅದು ತನ್ನ ದೈನಂದಿನದ ಚಟುಕಟಿಕೆಯಂತೆಯೇ ಅದನ್ನು ಪೂರೈಸಿಕೊಳ್ಳಲು ಹೆಣಗುತ್ತದೆ. ಏಕೆಂದರೆ, ಅದರ ಪ್ರಜ್ಞೆಯಲ್ಲಿ ಅನಾರೋಗ್ಯ ಅಥವಾ ಅಪಘಾತಗಳ ಕುರಿತಾದ ಪರಿಕಲ್ಪನೆಗಳೇ ಇರುವದಿಲ್ಲ. ಹಾಗಾಗಿ ಅದು ಆ ವಿಷಯಗಳ ಕುರಿತು ಹೆಚ್ಚಾಗಿ ಚಿಂತಿಸಿ ದುಃಖಪಡುವ ಗೋಜಿಗೆ ಹೋಗುವದಿಲ್ಲ.

ಮನುಷ್ಯನು ಸದಾ ತನ್ನ ಭವಿಷ್ಯದ ಕುರಿತು ಚಿಂತೆಯಲ್ಲಿರುತ್ತಾನೆ. ಈ ಯೋಚನೆಯೇ ಅವನ ದುಃಖಕ್ಕೆ ಕಾರಣವಲ್ಲದಿದ್ದರೂ, ಆ ಚಿಂತನೆಂಯು ಅವನಲ್ಲಿ ಆತಂಕ, ನೋವು ಮತ್ತು ಸಂಕಟಗಳನ್ನು ಸೃಷ್ಟಿಸುತ್ತದೆ. ಭವಿಷ್ಯದಲ್ಲಿ ತಾನು ಕಲ್ಪಿಸಿಕೊಂಡ ನಿರೀಕ್ಷೆಗಳನ್ನು ಜಾರಿ ರೂಪಕ್ಕೆ ತರಲು ಈ ಚಿಂತನೆಗಳು ತೊಡಕಾಗುತ್ತವೆ. ಇದರಿಂದಾಗಿ ಕನಿಷ್ಟ ಮತ್ತು ಉನ್ನತ ಪ್ರಜ್ಞೆಯುಳ್ಳ ಮನುಷ್ಯರು ಶಾಶ್ವತವಾದ ಹಿಂಸೆಯೊಳಗೆ ಸಿಲುಕಿ ಬದುಕ ದೂಡಲಾರಂಭಿಸುತ್ತಾರೆ. ಆದರೆ, ತಾನು ಮಾತ್ರ ಈ ಜೀವ ಸಂಕುಲದಲ್ಲೇ ಅತಿ ಹೆಚ್ಚು ಸಂತೋಷವಾಗಿರುವ ಪ್ರಾಣಿಯೆಂಬ ಭಾವನೆಯನ್ನು ತಳೆಯುತ್ತಾನೆ. ಆದರೆ, ವಾಸ್ತವವು ಹಾಗಿಲ್ಲ. ಸರ್ವ

ಸಂಕುಲಗಳಿಂಗಿಂತಲೂ ಮನುಷ್ಯನೇ ಅತಿ ಹೆಚ್ಚು ದುಃಖಿತನಾಗಿದ್ದರೂ ತನ್ನನ್ನು ತಾನು ಸಂತೋಷಿ ಎಂಬ ಭಾವಕ್ಕೆ ಜೋತುಬಿದ್ದಿರುತ್ತಾನೆ. ಇದಕ್ಕೆ ಮನುಷ್ಯನ ವಂಶ ವಾಹಿನಿಯಲ್ಲಿ ಹರಿದುಬಂದ 'ಅಟಾವಿಸ್ಟಿಕ್' ಸ್ಥಿತಿಯೇ ಕಾರಣವಾಗಿದೆ. ಈ ಸ್ಥಿತಿಯು ತನ್ನನ್ನು ತಾನು ಈ ಭೂಮಿಯಲ್ಲೇ ಹೆಚ್ಚು ದುಃಖಿತ ಸಂಕುಲ ಎಂದು ಹೇಳಿಕೊಳ್ಳುವ ಕೀಳು ಪ್ರವೃತ್ತಿಯಿಂದ ಅವನನ್ನು ಹಿಂಸರಿಯುವಂತೆ ಪ್ರೇರೆಪಿಸುತ್ತಿರುತ್ತದೆ. ಇದು ನಿಜವಾಗಿಯೂ ಒಂದು ವಿಶಾದನೀಯ ಸ್ಥಿತಿಯಾಗಿದೆ. ಇದರಿಂದ ಮನುಷ್ಯನು ಅನ್ನಮಯಕ್ಕೆ ಮಾತ್ರ ಗಂಟುಬೀಳುತ್ತಾನೆ. ಇದು ಉನ್ನತ ಸ್ಥಿತಿಗೆ ಏರುವ ಸಾಧನೆಯನ್ನು ಕುಂಠಿತಗೊಳಿಸುತ್ತದೆ. ಆದರೆ, ಒಂದೊಮ್ಮೆ ಮನುಷ್ಯನು ಈ ಸೀಮೆಯೊಳಗಿಂದ ಹೊರಬಂದು ವಿಶಾಲ ದೃಷ್ಟಿಕೋನವನ್ನು ಪ್ರಾಪ್ತಮಾಡಿ–ಕೊಂಡಿದ್ದೇ ಆದಲ್ಲಿ ಅವನ ಅಪ್ರಕೇತದ ಪ್ರಜ್ಞೆಯು ಸುಪ್ರಮಾನಸದ ಪ್ರಜ್ಞೆಯೆಡೆಗೆ ಅಧಿರೋಹಿಸುತ್ತದೆ. ಆ ದಿವ್ಯತೆಯನ್ನು ಶರಣಾಗತಿಯನ್ನು ಹೊಂದುವ ಮೂಲಕ ಸಾಧಿಸಬಹುದು. ಇದರಿಂದ ಮನುಷ್ಯನ ಭವಿಷ್ಯವು ಅವನ ನಿರೀಕ್ಷೆಯಂತೆಯೇ ರೂಪುಗೊಳ್ಳುತ್ತಾ ಸಾಗುತ್ತದೆ. ಹಾಗಾಗಿ ನಾವು ಎಲ್ಲ ರೀತಿಯ ಚಿಂತೆಯನ್ನು ಬಿಟ್ಟು ಪ್ರಜ್ಞೆಯ ಉನ್ನತಿಯೆಡೆಗೆ ಮುಖಮಾಡಬೇಕಿದೆ.

ಈ ರೀತಿಯ ಪ್ರಜ್ಞೆಯನ್ನು ಸಾಧಿಸಲು ಮನುಷ್ಯನು ಪ್ರಾಣಿಗಳ ಕಿಂಚಿತ್ ಪ್ರಜ್ಞೆಯೆಡೆಗೆ ಮರಳಬೇಕು. ಆದರೆ, ಪ್ರಸ್ತುತ ಕಾಲದಲ್ಲಿ ಮನುಷ್ಯನು ಮರಳಿ ಪ್ರಾಣಿಗಳ ಸ್ಥಿತಿಗಿಳಿಯುವುದು ಅಸಾಧ್ಯದ ಮಾತಾಗಿರುವದರಿಂದ ಈಗ ಮನುಷ್ಯನಿಗುಳಿದಿರುವ ಏಕಮಾತ್ರ ಮಾರ್ಗವೆಂದರೆ ಶರಣಾಗತಿ. ಅಥವಾ ನಮ್ಮ ಕತ್ತಲಮಯದ ಬದುಕನ್ನು ಪ್ರಕಾಶಮಾನವಾದ ಪರಾಕಾಷ್ಠೆಗೆ ಕೊಂಡೊಯ್ಯಲು ಅವನು ತನ್ನ ಪಜ್ಞೆಯನ್ನು ಪರಿವರ್ತಿಸಿಕೊಳ್ಳುವ ಅವಶ್ಯಕತೆಯಿದೆ.

*

**ದಿವ್ಯತೆಯಲ್ಲಿ ಶರಣಾಗತಿಯನ್ನು ಸಾಧಿಸುವುದು.**

ಜ್ಞಾನವಿಲ್ಲದ ಮನುಷ್ಯನು ಸಮಸ್ಯೆಯನ್ನು ಹೇಗೆ ಬಗೆಹರಿಸಬಹುದು? ಎಂಬ ಪ್ರಶೆಯನ್ನು ನೋಡಹೊರಟರೆ, ಮನುಷ್ಯನು ತನ್ನ ಜೀವನದಲ್ಲಿ ಬರುವ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಲೆಂದು ಪ್ರಯತ್ನಿಸುತ್ತಾನೆ. ಆದರೆ, ಅದಕ್ಕೆ ಬೇಕಿರುವಷ್ಟು ಜ್ಞಾನದ ಅಭಾವದಿಂದಾಗಿ ಅವನು ತನ್ನ ಕಾರ್ಯದಲ್ಲಿ ಯಶಸ್ಸನ್ನು ಗಳಿಸಲು ಸಾಧ್ಯವಾಗುವದಿಲ್ಲ. ಅವನ ಎಲ್ಲಾ ಸಮಸ್ಯೆಗಳಿಗೆ ಮೂಲಕಾರಣವೆಂದರೆ,

ಅವನಲ್ಲಿರುವ "ನಾನು ಏನು ಮಾಡಬೇಕು?" ಎಂಬ ಪ್ರಶ್ನಾರ್ಥಕ ಭಾವನೆಯೇ ಆಗಿದೆ. ಒಂದು ವೇಳೆ ಅವನಿಗೆ ಆ ಪ್ರಶ್ನೆಗೆ ಉತ್ತರ ಸಿಕ್ಕಿದ್ದೇ ಆದಲ್ಲಿ ಇನ್ನೊಂದು ತೀವ್ರತರವಾದ ಪ್ರಶ್ನೆಯು ಉದ್ಭವಿಸುತ್ತದೆ. ಅದುವೇ "ಇದರಿಂದ ಏನಾಗಲಿದೆ?" ಈ ಪ್ರಶ್ನೆಗಳ ಸರಣಿ ಮಾಲೆಯನು ಉತ್ತರಿಸುವದರಲ್ಲೇ ಅವನ ಇಡೀ ಜೀವನವು ಕಳೆದುಹೋಗುತ್ತದೆ.

ಹಾಗಾಗಿಯೇ ಆಧ್ಯಾತ್ಮಿಕತೆಯೆಡೆಗೆ ಮೊಗಮಾಡಿರುವ ಸಾಧಕರು ತಮ್ಮೆಲ್ಲಾ ಜವಾಬ್ದಾರಿಗಳನ್ನು ಬಿಟ್ಟುಕೊಟ್ಟು, ಆ ಉನ್ನತ ತತ್ತ್ವದೆಡೆಗೆ ಚಲಿಸುತ್ತಾರೆ. ಇಲ್ಲದಿದ್ದರೆ ಆ ಸಾಧಕನಲ್ಲಿ ಶಾಂತಿಯು ನೆಲೆಸುವದಿಲ್ಲ.

ಆ ದಿವ್ಯತೆಯು ಮನುಷ್ಯನಲ್ಲಿ ಪ್ರಜ್ಞೆಯನ್ನು ತುಂಬಿದೆ. ಆ ಪ್ರಜ್ಞೆಯನ್ನು ಸಮರ್ಥವಾಗಿ ಬಳಸಿಕೊಂಡು ಅವನು ಸ್ವಯಂ ಪ್ರಗತಿಯನ್ನು ಹೊಂದಬಹುದು. ಅಥವಾ ಅವನಿಗೆ ತಿಳಿಯದೇ ಇರುವ ರಹಸ್ಯಗಳನ್ನು ದರ್ಶನ ಮಾಡಿಕೊಳ್ಳಬಹುದು. ಇಲ್ಲವೇ ಅವನು ತಾನಿರುವ ಕೀಳರಿಮೆಯ ಜೀವನದಿಂದ ಕೊಡವಿಕೊಂಡೆದ್ದು ಉನ್ನತ ಸ್ಥಿತಿಗೆ ತಲುಪಿ ದಿವ್ಯ ಜೀವನವನ್ನು ಪಡೆದುಕೊಳ್ಳಬಹುದು. ಇದರಿಂದ ಅವನಿಗೆ ಈ ತಟಸ್ಥವಾದ ಸ್ಥಿತಿಗಿಂತಲೂ ಉಚ್ಚತಮವಾದ ಬೇರೊಂದು ಬದುಕಿದೆ ಎಂಬ ಸತ್ಯದ ಅರಿವಾಗುತ್ತದೆ, ತನ್ನ ಮಾರ್ಗದಲ್ಲಿ ಕಂಟಕವಾಗಿ ಒರಗಿದ ಎಲ್ಲಾ ಅಡ್ಡಿ–ಆತಂಕಗಳನ್ನು ಸರಿಸಿ ಪ್ರಗತಿಯ ಪಥದಲ್ಲಿ ನಡೆದು ಉತ್ತಮ ಫಲಿತಾಂಶವನ್ನು ಹೊಂದಬಹುದು, ಕೇವಲ ಮೌನವಾಗಿರುವದರಿಂದ ಇದು ಸಾಧ್ಯವಿಲ್ಲ. ಬದಲಿಗೆ ಎಲ್ಲ ರೀತಿಯ ಭೌತಿಕ ಚಟುವಟಿಕೆಗಳಿಂದ ಮುಕ್ತವಾಗಿ, ಜಂಜಡ ಬದುಕಿನಿಂದ ದೂರವಾಗಿ ಆಂತರ್ಯದಾಳದಲ್ಲಿರುವ ನಿರ್ಮಾಯಘನದ ನೀರವತೆಯೆಡೆ ಇಳಿಯಬೇಕು. ಏಕೆಂದರೆ, ಶಾಂತಿಯಿಲ್ಲದಿದ್ದರೆ ಸಾಧಕನಲ್ಲಿ ಆಂತರಿಕ ಸಾಕ್ಷಾತ್ಕಾರವು ಸಾಧ್ಯವಿಲ್ಲವೆಂಬುದು ಒಂದು ವಾದವಾದರೆ, ಬಾಹ್ಯ ಬದುಕಿನಲ್ಲಿ ಬಗೆಹರಿಸಲಾಗದಷ್ಟು ಜಟಿಲ ಸಮಸ್ಯೆಗಳನ್ನಿಟ್ಟುಕೊಂಡು ಆಂತರ್ಯದಲ್ಲಿ ಶಾಂತಿಯನ್ನು ಅರಸುವ ಸಾಧಕನು ತನ್ನ ಗುರಿಯನ್ನು ಮುಟ್ಟಲು ಸಾಧ್ಯವಿಲ್ಲ ಎಂಬುದು ಇನ್ನೊಂದು ವಾದವಾಗಿದೆ.

ಆನಂತರ ಸದಾ ನಿಮ್ಮ ಬೆಂಗಾವಲಿಗಿರುವ ಆ ದಿವ್ಯತೆಯ ಸಹಾಯವನ್ನು ಪಡೆದು ಆ ಸರ್ವೋಚ್ಚ ಶಕ್ತಿಯ ಮೇಲೆ ಸಂಪೂರ್ಣ ನಂಬುಗೆಯನಿಟ್ಟು ಅದರಡಿಯ ಶಾಂತ ನೀರವತೆಯಲ್ಲಿ ಸಾಧನೆ ಗೈದು ಬರಲಿರುವ ಸಮಸ್ಯೆಗಳನ್ನು ಎದುರಿಸಲು

ಸಮರ್ಥರಾಗಬೇಕು. ಅಲ್ಲದೆ ಒಂದು ಕಾರ್ಯದಿಂದ ಹಿಂತೆಗೆದು ಓಡುವದಕ್ಕಿಂತ ಉನ್ನತ ಶಾಂತಿಯ ವಲಯದಲ್ಲಿ ಆ ಕಾರ್ಯವನ್ನು ಕ್ರಿಯಾತ್ಮಕ ರೀತಿಯಲ್ಲಿ ಬಗೆಹರಿಸುವ ಸಾಮರ್ಥ್ಯವನ್ನು ಪಡೆಯಬೇಕು.

ಮರ್ತ್ಯರ ಜೀವನದಲ್ಲಿ ಸದಾ ಸಹಾಯ ಹಸ್ತವಾಗಿ ನಿಲ್ಲುವ ಆ ದಿವ್ಯತೆಯು, ಕಾಲಕಾಲಕ್ಕೆ ಹೊಸ ರೂಪ ಪರಿವರ್ತನೆ ಮಾಡಿಕೊಂಡು ನಮ್ಮನ್ನು ಆಧ್ಯಾತ್ಮಿಕ ಸಾಕ್ಷಾತ್ಕಾರದೆಡೆಗೆ ಕರೆದೊಯ್ಯುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 9/303–04**

**ಶರಣಾಗತಿ ಮತ್ತು ಪ್ರದೀಪ್ತ ಚಿಂತನೆ**

ವಿಶ್ವದ ಪ್ರೇಮ ತತ್ತ್ವವು ಸೃಷ್ಠಿಯಾದ ಮೂಲದಿಂದಲೇ ದಿವ್ಯತೆಯ ಅನುಗ್ರಹದ ಹಸ್ತಕ್ಷೇಪವನ್ನು ಮಾಡುವ ಅದಾವುದೋ ಅವ್ಯಕ್ತ ಶಕ್ತಿ, ಮಾಧುರ್ಯ ಅಥವಾ ಕರುಣೆಯ ಕಂಪನವನ್ನು ಹರಡುವ ದ್ರವ್ಯವನ್ನು ತನ್ನೊಳಗೆ ಹೊತ್ತುಕೊಂಡೇ ಅವತರಿಸಿದೆ. ಮಾನವನ ಜನ್ಮದೊಂದಿಗೆ ಬಂದ ಪ್ರಕಾಶಿಯ ಪ್ರಜ್ಞೆಯು ತನ್ನ ಕಿರಣಗಳನ್ನು ಪ್ರಕ್ಷೇಪಿಸಿ ಅವನ ಬದುಕಿನಲ್ಲಿ ಬಂದುಹೋಗುವ ಸಮಸ್ಯೆಗಳನ್ನು ಬಗೆಹರಿಸುವ ಕಾರ್ಯದಲ್ಲಿ ನಿರತವಾಗಿರುತ್ತದೆ. ಆದರೆ ಆ ಕಿರಣಗಳನ್ನು ಬರಿ ಸಮಸ್ಯೆಗಳನ್ನು ಬಗೆಹರಿಸಲಿಕ್ಕಾಗಿ ಮಾತ್ರವಲ್ಲದೆ, ಅವನ ಬದುಕಿನ ಇತರ ಪ್ರಗತಿಯ ಕಾರ್ಯದಲ್ಲೂ ಅದನ್ನು ಸೂಕ್ತವಾಗಿ ಬಳಸಿಕೊಳ್ಳಬೇಕಿದೆ. ಅದಕ್ಕಾಗಿ ಆ ಕಿರಣಗಳನ್ನು ಅವನ ಸರ್ವಾಂಗೀಣ ಬದುಕಿನ ಇನ್ನಿತರ ಮಗ್ಗುಲುಗಳೆಡೆ ಪ್ರಕ್ಷೇಪಿಸುವಂತೆ ಮಾಡುವ ಒಂದು ಮಾಧ್ಯಮದ ರೀತಿಯಲ್ಲಿ ಆ ದಿವ್ಯತೆಯು ಸಹಕಾರಿಯಾಗಿದೆ. ಈ ಅವ್ಯಕ್ತ ಶಕ್ತಿ–ಮಾಧುರ್ಯವು ತನ್ನ ಕಂಪನವನ್ನು ಪ್ರಪಂಚದ ಮೇಲೆ ಸ್ಥಿರವಾಗಿ ಕೇಂದ್ರೀಕರಿಸಿ ಅದರ ಅವಶ್ಯಕತೆಯಿರುವ ಸರ್ವ ಜಂತುಗಳಿಗೆ ಮುಕ್ತವಾಗಿ ಸ್ವೀಕರಿಸುವ ಅವಕಾಶವನ್ನು ಕೊಟ್ಟಿರುತ್ತದೆ. ಆದರೆ, ಅದರ ಈ ನಿಲುವು ಸ್ಥಿರ–ನಿರಾಕಾರದ ವಾದದಂತೆ ಕಂಡುಬರುತ್ತದೆ. ಏಕೆಂದರೆ, ಮೌನವಾಗಿರುವ ನಿಯಮವನ್ನು ಪಾಲಿಸಲು ಮರ್ತ್ಯವು ಹಿಂದೇಟು ಹಾಕುತ್ತದೆ. ಚಿಂತನೆಯ ತ್ರಿವಿಧ ರೂಪಗಳಾದ ಪ್ರದೀಪ್ತ ಚಿಂತನೆ, ಶರಣಾಗತಿಯ ಚಿಂತನೆ ಮತ್ತು ಭೌತಿಕ ವಲಯವನ್ನು ರೂಪಿಸುವ ಚಿಂತನೆ.., ಇವುಗಳು ಹೊಸದನ್ನು ರೂಪಿಸಲು ಬೇಕಿರುವ ಪ್ರಯತ್ನವನ್ನು ಮಾಡುವದಿಲ್ಲ. ಬದಲಿಗೆ ಆ ಉನ್ನತ ಪ್ರಜ್ಞೆಯು

ಇಳೆಗಿಳಿದು ತನ್ನನ್ನು ಮುನ್ನಡೆಸುವ ಕಾಲಕ್ಕಾಗಿ ಕಾಯುತ್ತಿರುತ್ತದೆ. ಹಾಗಾಗಿ ಆ ಕಿರಣಗಳನ್ನು ನಮಗೆ ಬೇಕಿರುವ ಮಗ್ಗುಲುಗಳೆಡೆ ಹರಿಸಿ ಕೇಂದ್ರೀಕರಿಸಲು ಸಹಕಾರಿಯಾದ ದಿವ್ಯತೆಯಲ್ಲಿ ಶರಣು ಹೊಂದಬೇಕಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 11/42–43**

**ಔನ್ನತ್ಯದೊಡನೆಯ ಪ್ರಥಮಾನುಸಂಧಾನ**

ನೀವು ನಿಮ್ಮ ಆಂತರ್ಯದ ಕವಾಟ ಪುಟವನ್ನು ಭೇದನ ಮಾಡದೆಯೇ ಒಂದು ವೇಳೆ ಔನ್ನತ್ಯದ ಆಯಾಮದ ಸಾನೀಧ್ಯಕ್ಕೆ ಒಳಗಾಗಿದ್ದೇ ಅದರೆ, ಅದು ಒಂದು ಅತೀಂದ್ರಿಯ ಅನುಭವವೇ ಹೌದು. ಏಕೆಂದರೆ, ಆಂತರ್ಯದ ಪಟಲವು ತೆರೆಯದೆ ಯಾವುದೇ ಸಾಕ್ಷಾತ್ಕಾರಗಳೂ ಸಾಧ್ಯವಾಗುವದಿಲ್ಲ. ಆದರೆ, ಈ ವಾದಕ್ಕೆ ಅಪವಾದವೆಂಬಂತೆ ಕೆಲವು ವಿಶೇಷ ಸಂದರ್ಭಗಳಲ್ಲಿ ಆ ದಿವ್ಯತೆಯ ಅನುಗ್ರಹದಿಂದ ಇಂತಹ ಸಾಧನೆಗಳು ಸಿದ್ಧಿಸಿಬಿಡುತ್ತವೆ. ಆದರೆ, ಯಾವಾಗಲೂ ಇಂತಹ ಅನುಸಂಧಾನವು ವೈಶ್ವಿಕ ಪ್ರಜ್ಞೆಯ ಮೂಲಕವೇ ಜಾಗೃತವಾಗುತ್ತವೆ. ಏಕೆಂದರೆ, ಈ ವೈಶ್ವಿಕಪ್ರಜ್ಞೆಯು ಸದಾ ಆ ದಿವ್ಯತೆಯೊಡನೆ ನಿರಂತರದ ಸಂಪರ್ಕದಲ್ಲಿರುತ್ತದೆ.

ನಂತರ, ಓರ್ವ ಸಾಧಕನು ಮಾನಸವನ್ನೂ ದಾಟಿ, ಉನ್ನತ ಮಾನಸವನ್ನೂ ಮೀಟಿ, ಪ್ರದೀಪ್ತ ಮಾನಸ ಮತ್ತು ಅಂತಸ್ಫುರಿತ ಮಾನಸಕ್ಕೂ ಊರ್ಧ್ವದಲ್ಲಿರುವ ಅಧಿಮಾನಸವನ್ನು ಮುಟ್ಟಿ ಅದಕ್ಕೂ ಔನ್ನತ್ಯದಲ್ಲಿರುವ ಅತಿಮಾನಸದ ಸ್ತರವನ್ನು ಪ್ರವೇಶಿಸಿದ್ದೇ ಆದಲ್ಲಿ ಆ ಸಾಧಕನಲ್ಲಿ ಸ್ಫೂರ್ತಿಯ ಸೆಲೆಯೊಡೆಯುತ್ತದೆ. ಆಗ ಸಾಧಕನು ಮರ್ತ್ಯದ ಸಾಮಾನ್ಯ ಪುರುಷನಾಗಿರದೆ ಅವನಲ್ಲಿ ಸುಪ್ರಮಾನಸದ ಶಕ್ತಿಯ ಸಂಚಲನವಾಗುತ್ತದೆ. ಆದರೆ, ಆ ಸ್ತರವನ್ನು ಮುಟ್ಟಲು ಸಾಧಕನು ತನ್ನ ಆಂತರ್ಯವನ್ನು ಮತ್ತಷ್ಟೂ ತೀಕ್ಷ್ಣಗೊಳಿಸಿಕೊಳ್ಳುವ ಅವಶ್ಯಕತೆಯಿರುತ್ತದೆ.

ಇಲ್ಲಿಯವರೆಗೂ ನೋಡಿದಂತೆ ಮಾನಸಕ್ಕೂ ಮೀರಿದ ಉನ್ನತ ಸ್ತರಗಳಿಂದ ಬರುವ ಸ್ಫೂರ್ತಿಯು ಸಾಧಕನಲ್ಲಿ ಅತ್ಯುನ್ನತ ಗುಣಮಟ್ಟದ ಸಾಧನೆಗಳನ್ನು ಮಾಡಲು ಪ್ರೇರೇಪಣೆಯನ್ನು ನೀಡುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 10/5–6**

**ಸಂಪರ್ಕ ಸಾಧನೆಗಾಗಿ ಗಮನಹರಿಸಬೇಕಾದ ಅಂಶಗಳು**

*ಆ ಔನ್ನತ್ಯದ ಅನುಭೂತಿಯನ್ನು ಸಾಧಿಸಲು ಪ್ರತಿಬಾರಿಯೂ ಏಕಾಗ್ರತೆಯನ್ನು ವಹಿಸಲೇಬೇಕೇ?*

ಹೌದು, ಸಾಧನೆಯ ಹಂತದಲ್ಲಿ ನೀವು ಗಳಿಸಿಕೊಂಡ ತಪಶ್ಶಕ್ತಿಯನ್ನು ಉಳಿಸಿಕೊಳ್ಳುವ ಸಾಮರ್ಥ್ಯವಿಲ್ಲದಿದ್ದಾಗ, ನೀವು ನಿಮ್ಮ ಏಕಾಗ್ರತೆಯನ್ನು ಉನ್ನತ ಮಟ್ಟಕ್ಕೆ ಏರಿಸಲು ಸಾಧ್ಯವಾಗುವದಿಲ್ಲ. ಇದರಿಂದ ನೀವು ಕೂಡಲೇ ನಿಮ್ಮ ಸಾಧನೆಯ ಶಿಖರದಿಂದ ಸರ್ರನೆ ಕೆಳಗಿಳಿದು ಬರುತ್ತೀರಿ. ಹಾಗೂ ನೀವೇರಿದ ಸ್ತರದಲ್ಲಿ ನೀವು ಅನುಭವಿಸಿದ ದರ್ಶನಗಳ ಸ್ಮೃತಿಯನ್ನೂ ಸಹ ಕಳೆದುಕೊಳ್ಳುತ್ತೀರಿ. ಹಾಗಾಗಿ ನೀವು ಪ್ರತಿಬಾರಿ ಸಾಧನೆಯಲ್ಲಿ ತೊಡಗಿದಾಗ ಒಂದು ವ್ಯವಸ್ಥಿತ ನಿಃಶ್ರೇಣಿಯ ಮಾರ್ಗವನ್ನು ಅನುಸರಿಸಬೇಕು. ಇದರಿಂದ ನೀವು ಒಮ್ಮೆ ಏರಿದ ಶ್ರೇಣೀಯ ಮಾರ್ಗದಲ್ಲೇ ಮತ್ತೊಮ್ಮೆ ಮುಂಬರಿಯಲು ಸುಲಭ ಸಾಧ್ಯವಾಗುತ್ತದೆ. ಒಮ್ಮೆ ನೀವು ಔನ್ನತ್ಯದ ಆಯಾಮದೊಡನೆ ಅನುಸಂಧಾನಗೈದಿದ್ದೇ ಆದಲ್ಲಿ, ನೀವು ಇನ್ನೆಂದಿಗೂ ಆ ಏಕಾಗ್ರತೆಯನ್ನು ಕಳೆದುಕೊಳ್ಳುವದಿಲ್ಲ. ಹಾಗಾಗಿಯೇ ಸಾಧನೆಯ ಹಂತದಲ್ಲಿ ನೀವು ಆ ಔನ್ನತ್ಯವನ್ನು ಮುಟ್ಟುವವರೆಗೂ ಈ ಏಕಾಗ್ರತೆಯನ್ನು ಕಾಪಾಡಿಕೊಳ್ಳುವುದು ಅತ್ಯವಶ್ಯಕವಾಗಿರುತ್ತದೆ.

ಒಮ್ಮೆ ನೀವು ಆ ಔನ್ನತ್ಯವನ್ನು ಸೇರಿ ಸ್ಥಾಯಿಯಾದರೆ, ನಿಮ್ಮ ಶರೀರರಹಿತವಾದ ಚೈತನ್ಯವು ಆ ಅಲೋಕಾಕಾಶದಲ್ಲಿದ್ದು, ನಿಮ್ಮ ಭೌತಿಕ ಶರೀರವು ಇಲ್ಲಿ ಕೆಳಗೆ ಉಳಿದಿದ್ದರೂ, ನಿಮ್ಮ ಪ್ರಜ್ಞೆಯು ಆ ಎರಡೂ ಕಡೆ ಜಾಗೃತಾವಸ್ಥೆಯಲ್ಲಿರುತ್ತದೆ. ಇಲ್ಲಿ ನಿಮ್ಮ ದೇಹದ ಸ್ಥಿತಿಯನ್ನೂ ವ್ಯವಸ್ಥಿತವಾಗಿ ಕಾಪಾಡಿಕೊಂಡಿರುತ್ತೀರಿ. ಅತ್ತ ಅವಕಾಶದಲ್ಲೂ ನಿಮ್ಮ ಚೈತನ್ಯದ ಸಂಚಲನೆಯನ್ನು ಸಾಧಿಸಿರುತ್ತೀರಿ. ಒಟ್ಟಿಗೆ ನೀವು ಭೌತಿಕ ಮತ್ತು ಅತೀತ ಲೋಕಗಳೆರಡನ್ನೂ ನೋಡುವ ಸಾಮರ್ಥ್ಯವನ್ನು ಪಡೆದುಕೊಂಡಿರುತ್ತೀರಿ.

ಇದು ಏಕಾಗ್ರತೆಯ ಪ್ರಥಮ ಹಂತವೇ ಹೊರತು ಅಂತಿಮವಲ್ಲ. ಇದರ ನಂತರವೂ ನೀವು ಇನ್ನಷ್ಟು ಸಾಧನೆಯನ್ನು ಸಿದ್ಧಿಸಿಕೊಳ್ಳಬೇಕಿರುತ್ತದೆ.

ಈ ರೀತಿಯ ಏಕಾಗ್ರತೆಯನ್ನು ಸಾಧಿಸಲು ಹೆಚ್ಚಿನ ಪರಿಶ್ರಮದ ಅವಶ್ಯಕತೆಯಿರುತ್ತದೆ. ತತ್‌ಕ್ಷಣದ ಅಥವಾ ತ್ವರಿತ ಗತಿಯಲ್ಲಿ ಏಕಾಗ್ರತೆಯನ್ನು ಸಾಧಿಸುವ ಸಾಧಕರ ಸಂಖ್ಯೆ ಬಹು ವಿರಳ. ಆದರೆ ಒಂದೊಮ್ಮೆ ನೀವು ನಿಮ್ಮ

ಆಂತರ್ಯದ ಕವಾಟ ಪುಟ ದ್ವಾರವನ್ನು ಮುಕ್ತವಾಗಿ ತೆರೆದುಕೊಂಡಿದ್ದರೆ. ಅದು ಮತ್ತೆ ಮತ್ತೆ ಇಂತಹ ಸಾಧನೆಗಳಿಗೆ ಸದಾ ತೆರೆಯುತ್ತಲೇ ಇರುತ್ತದೆ ಎಂದು ಖಚಿತವಾಗಿ ಹೇಳಬಹುದು.

ಈ ಪರಿಶ್ರಮದ ಮಾರ್ಗದಲ್ಲಿ ಹಲವು ಸಮಯದವರೆಗೆ ಈ ಕವಾಟ ದ್ವಾರವು ತೆರೆಯದೇ ಹೋಗಬಹುದು. ಅಷ್ಟು ಮಾತ್ರಕ್ಕೆ ನೀವು ನಿಮ್ಮ ಸಾಧನೆಯನ್ನು ನಿಲ್ಲಿಸಬಾರದು. ಅದೇ ಮಾರ್ಗದಲ್ಲಿ ಮುಂಬರಿಯಬೇಕು. ಒಮ್ಮೆ ಈ ದ್ವಾರವು ತೆರೆದಿದ್ದೇ ಆದಲ್ಲಿ ನೀವು ನಿಮ್ಮ ಸ್ವಾಯಾಕಾಂಕ್ಷೆಯಿಂದ ಆ ಔನ್ನತ್ಯದ ಆಯಾಮವನ್ನು ತಲುಪಬಹುದು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/9–10**

**ಶ್ರೀಮಾತೆಯವರ ಸಂಗೀತ**

*ನಿಮ್ಮ ಸಂಗೀತದಲ್ಲಿ ಪದೇ ಪದೇ ಪುನರಾವರ್ತನೆಯಾಗುವ ರಾಗದ ಮಹತ್ವವೇನು?*

ಈ ರಾಗವು ಸಾಮಾನ್ಯವಾಗಿ ಯಾವುದೋ ಒಂದು ತೊಂದರೆ, ಅಥವಾ ಅವ್ಯವಸ್ಥೆಯು ವ್ಯಕ್ತವಾದ ನಂತರ ಪ್ರಕಟವಾಗುವದನ್ನು ನೀವು ಗಮನಿಸಿರಬಹುದು. ಆ ಸಮಯದಲ್ಲಿ ಕಾಲ್ತೊಡಕಾಗಿ ಬರಲಿರುವ ಸಮಸ್ಯೆಗಳನ್ನು ತೊಡೆದುಹಾಕಿ ಪರಿಹಾರವನ್ನು ನೀಡಲೋಸುಗ ಈ ರಾಗವು ತಾನೇತಾನಾಗಿಯೇ ಹೊರಬರುತ್ತದೆ. ಇದು ಪ್ರಜ್ಞಾ ವಿಕಸನದ ಮಾರ್ಗದಲ್ಲಿ ಒಂದು ಪ್ರಗತಿಯಾಗಿ ತೋರಿಬರುತ್ತದೆ. ಅಥವಾ ಜ್ಞಾನೋದಯದ ರೂಪದಲ್ಲಿ ಪ್ರಕಟವಾಗುತ್ತದೆ. ನನ್ನ ಸಂಗೀತವು ನನ್ನ ಸಾಧನೆಯ ಆಂತರಿಕ ಚಲನೆಗಳನ್ನು ತೋರಿಸುತ್ತದೆ. ಕೆಲವೊಮ್ಮೆ ನನ್ನ ಸಾಧನೆಯಲ್ಲಿ ಅಡ್ಡಿ–ಆತಂಕಗಳು ಕಂಡುಬಂದಾಗ ಆ ವೈರುಧ್ಯಗಳನ್ನು ಜಯಿಸಿ ಮುಂದಡಿಯಿಡುವ ಹಂತದಲ್ಲಿ ಈ ನನ್ನ ವಿಶಿಷ್ಟ ರಾಗವು ಹೊರಬರುತ್ತದೆ. ಆ ನಂತರ ಪ್ರಜ್ಞಾ ಪಯಣವು ಮತ್ತೆ ಸುಗಮವಾಗಿ ಸಾಗಿ ಕೊನೆಗೊಮ್ಮೆ ಪ್ರಜ್ಞಾನೋದಯದೆಡೆ ಚರಿಸುತ್ತದೆ.

ವಿಶೇಷವಾಗಿ ಈ ಸಂಗೀತವು ಪಾಶ್ಚಿಮಾತ್ಯರ ಮನಸ್ಸಿಗೆ ಅರ್ಥವಾಗುವದಿಲ್ಲ. ಏಕೆಂದರೆ, ಅವರ ಸಾಧನೆಯ ಮಾರ್ಗವು ವಿಭಿನ್ನವಾಗಿರುವದರಿಂದ ಈ ಸಂಗಿತವು

ಅವರ ಅನುಭವಜನ್ಯವೇ ಆಗಿರುವದಿಲ್ಲ. ಆದರೆ, ಭಾರತೀಯ ಮನಸ್ಸುಗಳು ಈ ಸಂಗೀತವನ್ನು ತುಂಬು ಹೃದಯದಿಂದ ಆಸ್ವಾದಿಸುತ್ತವೆ. ಏಕೆಂದರೆ, ಈ ಸಂಗೀತದಲ್ಲಿರುವ ರಾಗಗಳು ಪ್ರತಿಯೋರ್ವ ಭಾರತೀಯನ ಆಂತರ್ಯದ ಅನುರೂಪದ ಅಂಶಗಳೇ ಆಗಿರುವದರಿಂದ ಅವು ನೇರವಾಗಿ ಅವರನ್ನು ಸೇರಿ ನೆಲೆಸುತ್ತವೆ. ಆ ಹಂತದಲ್ಲಿ ರಾಗಾಲಾಪಗಳ ಛಂದಸ್ಸಾಗಲಿ, ಸಂಗೀತದ ಚೌಕಟ್ಟಾಗಲಿ ಅವರ ಅನುಭೂತಿಗೆ ಅಡ್ಡಿಯಾಗುವದಿಲ್ಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 12/238–39**

*ಯಾರಾದರೊಬ್ಬರು ಸಾಧಕರು ಆಟದ ಮೈದಾನದಲ್ಲಿ ಕುಳಿತು ನಿಮ್ಮ ಸಂಗೀತವನ್ನಾಲಿಸುತ್ತ ಧ್ಯಾನಮಗ್ನರಾಗಿದ್ದರೆ ಇತರರು ಹೇಗೆ ವರ್ತಿಸಬೇಕು?*

ಈ ಸಂಗೀತವು ಕೆಲವು ಆಳವಾದ ಭಾವನೆಗಳನ್ನು ಜಾಗೃತಗೊಳಿಸಲು ಸಹಕಾರಿಯಾಗಿದೆ.

ಯಾರಾದರೊಬ್ಬರು ಸಾಧಕರು ಈ ಸಂಗೀತವನ್ನಾಲಿಸುತ್ತ ಧ್ಯಾನಮಗ್ನ–ರಾಗಿದ್ದರೆ, ಇತರರು ಸಾಧ್ಯವಾದಷ್ಟು ಮಟ್ಟಿಗೆ ಮೌನವಾಗಿ ಅಥವಾ ಶಾಂತ ಚಿತ್ತತೆಯಿಂದ ವರ್ತಿಸಬೇಕು. ಸಾಧಕರ ಮನವು ಮೌನದ ಸ್ಥಿತಿಯನ್ನು ಪ್ರವೇಶಿಸಿದ ನಂತರ ಅವರ ಅಸ್ತಿತ್ವದ ಒಂದು ಭಾಗವು ಯಾವುದೇ ಪ್ರತಿಕ್ರಿಯೆಗಳನ್ನು ನೀಡದೆ ಅಥವಾ ಯಾವುದೇ ಭಾವನೆಯನ್ನು ವ್ಯಕ್ತಪಡಿಸದೆ ಕೇವಲ ಸಾಕ್ಷಿ ರೂಪದಲ್ಲಿ ಅದನ್ನು ಸ್ವೀಕರಿಸಿದರೆ, ಅದು ಸಾಧಕರ ಭಾವನೆಗಳ ಮೇಲೆ ಗಣನೀಯ ಪರಿಣಾಮವನ್ನುಂಟು ಮಾಡುತ್ತದೆ. ಹಾಗೂ ಆ ಹಂತದಲ್ಲಿ ಅದು ಆಳವಾದ ಪ್ರಶಾಂತತೆಯನ್ನು ಅಥವಾ ಅರೆ–ಸಂವೇದನೀಯ ಸ್ಥಿತಿಯನ್ನು ಸೃಷ್ಟಿಸಿದರೆ ಅದು ಹೆಚ್ಚಿನ ಪರಿಣಾಮವನ್ನುಂಟು ಮಾಡುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 12/239–40**

**ಸಿನೆಮಾ**

ನಾವು ಮಕ್ಕಳಿಗೆ ಉತ್ತಮ ಜೀವನವನ್ನು ನಿರೂಪಿಸುವ ಚಲನ ಚಿತ್ರಗಳನ್ನು ತೋರಿಸಬೇಕೆಂದು ಬಯಸುತ್ತೇವೆ. ಆದರೆ ನಾವಿನ್ನೂ ಆ ಹಂತವನ್ನು ತಲುಪಿಲ್ಲ,

ಅದರಿಂದ ಇನ್ನೂ ದೂರದಲ್ಲಿದ್ದೇವೆ. ಅಂತಹ ಚಲನ ಚಿತ್ರಗಳನ್ನು ರಚಿಸಬೇಕಿದೆ. ಆದರೆ, ಪ್ರಸ್ತುತ ಸಂದರ್ಭದಲ್ಲಿ ಈ ಚಿತ್ರ ಮಾಧ್ಯಮವು ಉತ್ತಮ ಜೀವನಕ್ಕೆ ವ್ಯತಿರಿಕ್ತವಾದ ಅಂಶಗಳನ್ನೇ ತೋರಿಸುತ್ತಿದೆ. ಇದು ನಮ್ಮ ಜೀವನದ ಬಗೆಗೆ ನಮಗೇ ಅಸಹ್ಯವನ್ನುಂಟು ಮಾಡುವ ಪರಿಸ್ಥಿತಿಯನ್ನು ತಂದಿಕ್ಕಿದೆ.

ಇದೂ ಸಹ ಬರಲಿರುವ ನಮ್ಮ ಪೂರ್ವ ಸಿದ್ಧತೆಗೆ ಉಪಯುಕ್ತವಾದ ಅಂಶವೇ ಆಗಿದೆ.

ನಮ್ಮ ಆಶ್ರಮದಲ್ಲಿ ಚಲನ ಚಿತ್ರಗಳನ್ನು ತೋರಿಸುವುದು ಮನರಂಜನೆಗಾಗಿ ಅಲ್ಲ ಬದಲಿಗೆ ಅದನ್ನೊಂದು ಶಿಕ್ಷಣದ ಭಾಗವಾಗಿಸಿ ಅದಕ್ಕೆ ಅನುಮತಿಯನ್ನು ನೀಡಲಾಗಿದೆ. ಆದ್ದರಿಂದಲೇ ನಾವು ಶಿಕ್ಷಣದ ಸಮಸ್ಯೆಯನ್ನು ಎದುರಿಸುತ್ತಿದ್ದೇವೆ.

ನಾವು ಮಕ್ಕಳಲ್ಲಿ ಕೀಳು, ಒರಟು, ಹಿಂಸೆಯನ್ನು ಪ್ರಚೋದಿಸುವ ಮತ್ತು ಅಮಾನವೀಯ ಸಂಘರ್ಷಗಳಿಂದ ಮುಕ್ತವಾಗಿಸಿ ಅವರಿಗೆ ಕೇವಲ ಪರಿಶುದ್ಧ ಜೀವನದ ಬಗೆಗೆ ಮಾತ್ರ ಕಲಿಸಬೇಕೆಂದು ಪರಿಗಣಿಸಿದರೆ, ನಾವು ನಮ್ಮ ಇತಿಹಾಸದುದ್ದಕ್ಕೂ ನಡೆದ ಹಿಂಸೆ–ಕ್ರೌರ್ಯ–ಯುದ್ಧಗಳ ಕತೆಗಳನ್ನು ಮತ್ತು ಮಾನವನಲ್ಲಿ ಮನೆ ಮಾಡಿದ ಅಮಾನವೀಯ ಸಂಪರ್ಕದ ಎಲ್ಲಾ ಮಾಹಿತಿಗಳನ್ನು ತಕ್ಷಣವೇ ತೆಗೆದು ಹಾಕಬೇಕಾಗುತ್ತದೆ. ಅವರನ್ನು ಅವರ ಮನೆ–ಕುಟುಂಬ ಮತ್ತು ಬಂಧು–ಬಾಂಧವರೊಂದಿಗಿನ ಎಲ್ಲಾ ಸಂಪರ್ಕವನ್ನು ನಿಲ್ಲಿಸಿಬಿಡಬೇಕಾಗುತ್ತದೆ. ಸದ್ಯಕ್ಕೆ ಪ್ರಚಲಿತದಲ್ಲಿರುವ ಮಕ್ಕಳ ಎಲ್ಲಾ ಪ್ರಮುಖ ಪ್ರಚೋದನೆಗಳ ಮೇಲೆ ನಿಯಂತ್ರಣವನ್ನು ಸಾಧಿಸಬೇಕಾಗುತ್ತದೆ.

ಅದನ್ನು ಜಾರಿಗೆ ತರಬೇಕಾದರೆ, ಈಗ ಪ್ರಸ್ತುತಿಯಲ್ಲಿರುವ ಕಾನ್ವೆಂಟ್ ಮಾದರಿಯ ಶಿಕ್ಷಣ ಪದ್ಧತಿಯನ್ನು ನಿಲ್ಲಿಸಿ ಕಾಡಿನ ಗುಹೆಗಳ ಮಧ್ಯದಲ್ಲಿ ನಡೆಸಲಾಗುತ್ತಿದ್ದ ತಾಪಸ ಶಿಕ್ಷಣ ಪದ್ಧತಿಯೆಡೆಗೆ ಮರಳಬೇಕಾಗುತ್ತದೆ. ಅದು ಬಹು ಹಿಂದಿನ ಕಲ್ಪನೆಯಾಗಿದೆ.

ಆದರೆ, ಈ ರೀತಿ ಭೂತ ಕಾಲದಲ್ಲಿದ್ದ ಶಿಕ್ಷಣ ಪದ್ಧತಿಗೆ ಮರಳುವ ಪರಿಹಾರವು ನಿಷ್ಪರಿಣಾಮಕಾರಿಯಾದ ಫಲವನ್ನು ನೀಡುತ್ತದೆ. ಹಾಗೂ ಆ ಶಿಕ್ಷಣ ಪದ್ಧತಿಯಿಂದ ಮನುಕುಲವಿಂದು ಬಿದ್ದು ಒದ್ದಾಡುತ್ತಿರುವ ಕೆಸರುಗುಂಡಿಯಿಂದ ಮರ್ತ್ಯವನ್ನು ಹಿಡಿದೆತ್ತಲು ಸಾಧ್ಯವಿಲ್ಲ.

ಶ್ರೀ ಅರವಿಂದರ ಪ್ರಕಾರ ಈ ಸಂಧಿಗ್ದವನ್ನು ಬೇರೊಂದು ಮಾರ್ಗದಿಂದಲೇ ಪರಿಹರಿಸಬಹುದು.

ಮರ್ತ್ಯ ಜೀವನವನ್ನು ಅದರಲ್ಲಿರುವ ಎಲ್ಲಾ ಕಶ್ಮಲ, ಅಸತ್ಯ ಮತ್ತು ಕ್ರೌರ್ಯದಿಂದ ಕೊಡವಿಕೊಂಡೇಳಲು ಸಹಕರಿಸಬೇಕು. ಹಾಗೂ ಮೂಲದಲ್ಲಿದ್ದ ಎಲ್ಲಾ ಐತಿಹ್ಯಗಳನ್ನು ಪ್ರಜ್ಞಾಪೂರ್ವಕವಾಗಿ ಇಂದಿನ ಸಾಮಾಜಿಕ ಪ್ರಪಂಚದಲ್ಲಿ ಹೇಗೆ ಪರಿವರ್ತನೆಗೆ ತರಬೇಕೆಂಬುದನ್ನು ಕಲಿಸಬೇಕು. ಹಾಗೂ ಈ ಪರಿವರ್ತನೆಯ ಕಾರ್ಯದಲ್ಲಿ ಋತ, ಸತ್ಯ, ಸೌಂದರ್ಯ ಮತ್ತು ಪ್ರಕಾಶ ಮೂಲಗಳ ಸಹಾಯ ಹಸ್ತದ ದಾರಿ ಬೆಳಕಿನಲ್ಲಿ ಮುನ್ನಡೆಯಬೇಕು.

ಇದು ಪಲಾಯನ ವಾದಕ್ಕಿಂತ ಅಥವಾ ಕುರುಡರಾಗಿ ಕಣ್ಣು ಮುಚ್ಚಿ ಕುಳಿತುಕೊಳ್ಳುವದಕ್ಕಿಂತ ಹೆಚ್ಚು ಕಷ್ಟಕರವಾದರೂ ಸತ್ಯ–ಬಲ–ಶುದ್ಧತೆಯನ್ನು ವ್ಯಕ್ತಪಡಿಸಲು ಪರಿಣಾಮಕಾರಿಯಾದ ಮಾರ್ಗವಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 12/242–43**

## ಲೇಖಕರು ಮತ್ತು ಉನ್ನತ ಪ್ರಜ್ಞೆ

ಕವಿಗಳು ಮತ್ತು ಸೃಷ್ಟಿಕರ್ತರುಗಳಲ್ಲಿ ದಿವ್ಯತೆಯೊಂದಿಗೆ ಯಾರು ಪ್ರಜ್ಞಾ–ಪೂರ್ವಕವಾದ ಸಂಪರ್ಕವನ್ನು ಹೊಂದಿರುವವರು ಎಂಬುದನ್ನು ಖಚಿತತೆಯಿಂದ ಹೇಳಬಲ್ಲಿರಾ? ಈ ಪ್ರಪಂಚದಲ್ಲಿ ಯೋಗಿಗಳಲ್ಲದ ಕೆಲವು ಸಾಮಾನ್ಯರುಗಳಿದ್ದಾರೆ. ಅವರು ಶಿಷ್ಯ ವೃಂದವನ್ನು ಹೊಂದಿದ ಗುರುಗಳಲ್ಲ. ಅವರು ಈ ಲೋಕಕ್ಕೆ ಯಾವ ಕೊಡುಗೆಯನ್ನು ನೀಡಿದ್ದಾರೆ ಎಂಬುದು ತಿಳಿದಿಲ್ಲ. ಅವರು ಖ್ಯಾತನಾಮರಾಗುವ ಅಪೇಕ್ಷೆಯನ್ನೂ ಹೊಂದಿಲ್ಲ ಮತ್ತು ಜನರನ್ನು ತಮ್ಮತ್ತ ಸೆಳೆಯುವ ವ್ಯರ್ಥ ಪ್ರಯತ್ನವನ್ನೂ ಮಾಡುವದಿಲ್ಲ. ಆದರೂ ಅವರು ಆ ಉನ್ನತ ಪ್ರಜ್ಞೆಯನ್ನು ಹೊಂದಿದ್ದಾರೆ. ಮತ್ತು ಆ ದಿವ್ಯತೆಯೊಡನೆ ನಿಕಟ ಸಂಪರ್ಕವನ್ನು ಹೊಂದಿದ್ದಾರೆ. ಹಾಗೂ ಅವರು ಯಾವುದೇ ಒಂದು ಕಲೆಯನ್ನು ರಚಿಸಿದರೂ ಅವರು ಆ ಔನ್ನತ್ಯದ ಶಕ್ತಿಯಿಂದಲೇ ಅದನ್ನು ರಚಿಸಿರುತ್ತಾರೆ. ಭಾರತದಲ್ಲಿರುವ ಅತ್ಯುತ್ತಮ ವರ್ಣಚಿತ್ರಗಳನ್ನು ಮತ್ತು ಶ್ರೇಷ್ಠ ಶಿಲ್ಪ ಕಲಾಕೃತಿಗಳನ್ನು ಬೌದ್ಧ ಸನ್ಯಾಸಿಗಳೇ ರಚಿಸಿದ್ದಾರೆ. ತಮ್ಮಿಡೀ ಜೀವನವನ್ನೇ ಆಧ್ಯಾತ್ಮಿಕ ಚಿಂತನೆಯಲ್ಲಿಯೇ ಕಳೆದ ಆ

ಸನ್ಯಾಸಿಗಳು ಅದರ ಜೊತೆಜೊತೆಗೆ ಉತ್ತಮ ಕಲೆಯನ್ನೂ ಸೃಷ್ಟಿಸಿದರು. ಆದರೆ, ಅವರು ತಾವು ಸೃಷ್ಟಿಸಿದ ಕಲೆಯಲ್ಲಿ ತಮ್ಮ ಹೆಸರನ್ನು ನಮೂದಿಸಿ ಮುಂದಿನ ಪೀಳಿಗೆಗೆ ತಮ್ಮನ್ನು ಪರಿಚಯಿಸಿಕೊಳ್ಳುವ ಗೋಜಿಗೆ ಹೋಗಲಿಲ್ಲ. ಅವರು ತಮ್ಮ ಕಲೆಯ ಮೂಲಕ ಖ್ಯಾತನಾಮರಾಗಲು ಏಕೆ ಪ್ರಯತ್ನಿಸುವದಿಲ್ಲವೆಂದರೆ, ಅವರು ತಮ್ಮ ಜೀವನದಲ್ಲಿ ಈ ಕಲಾಭಿವ್ಯಕ್ತಿಯನ್ನೇ ಮುಖ್ಯವೆಂದು ಪರಿಗಣಿಸುವದಿಲ್ಲ. ಹಾಗೂ ಈ ಕಲೆಯಲ್ಲಿಯೇ ಅವರು ಹೆಚ್ಚಿನ ಸಮಯ ಮತ್ತು ಶ್ರಮವನ್ನು ವ್ಯಯಿಸುವದಿಲ್ಲ. ಹಾಗೂ ಅವರು ತಮ್ಮ ಕೆಲಸವನ್ನು ಜನರ ಮುಂದಿಡುವ ಪ್ರಯತ್ನಕ್ಕೆ ಹೋಗುವದಿಲ್ಲ. ಹಾಗೆಯೇ ಎಷ್ಟೋ ಸಾಧಕರ ಕಾರ್ಯಗಳು ಇನ್ನೂ ಜಗತ್ತಿನೆದುರಿನಲ್ಲಿ, ಈ ಜನರ ಸಮ್ಮುಖದಲ್ಲಿ ಪ್ರಕಟವಾಗಿಲ್ಲ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 7/107–08**

## ಮೃತ್ಯು ಮುಖದಲ್ಲಿ ಪ್ರಜ್ಞೆಯ ಸ್ಥಿತಿ

ಅದೊಂದು ಅತ್ಯಂತ ಮುಖ್ಯವಾದ ಸ್ಥಿತಿಯಾಗಿದೆ. ಏಕೆಂದರೆ, ಅದು ಮರ್ತ್ಯನ ಅನ್ನಮಯ ಮತ್ತು ಪ್ರಾಣಮಯ ಕೋಶಗಳೆರಡೂ ಒಟ್ಟಿಗೆ ಇರುವ ಕೊನೆಯ ಸ್ಥಿತಿಯಾಗಿದೆ. ಹಾಗಾಗಿಯೇ ಅದನ್ನು ಕೊನೆಯ ಪ್ರಜ್ಞಾಸ್ಥಿತಿ, ಕೊನೆಯ ಆಸೆ, ಅಂತಿಮ ಆಕಾಂಕ್ಷೆ ಅಥವಾ ಅಂತಿಮ ಭರವಸೆಯ ಘಟ್ಟ ಎಂದು ಕರೆಯಬಹುದು. ಮರ್ತ್ಯದ ಚೈತನ್ಯವು ಆಗ ಮೊದಲ ಬಾರಿಗೆ ಗೊತ್ತಿರದ ಅದೃಶ್ಯ ಪ್ರಪಂಚದೊಂದಿಗೆ ಮುಖಾಮುಖಿಯಾಗುತ್ತದೆ. ಮರಣ ಸನ್ನಿಹಿತವಾದ ವ್ಯಕ್ತಿಯ ಬಂಧುಗಳು ಅವನನ್ನು ಶಾಂತ ಚಿತ್ತತೆಯಿಂದ ಮರಣವನ್ನಪ್ಪಲು ಸಹಕರಿಸಬೇಕು. ಇದರಿಂದ ಆ ಚೈತನ್ಯವು ಇನ್ನೂ ಊರ್ಧ್ವದಲ್ಲಿರುವ ಪ್ರಜ್ಞೆಯ ಪಾತಳಿಯೆಡೆಗೆ ಅಧಿರೋಹಿಸಲು ಸಹಕಾರಿಯಾಗುತ್ತದೆ. ಆದರೆ, ಸಾಮಾನ್ಯವಾಗಿ ಹೆಚ್ಚಿನವರು ಆ ಮರಣ ಸನ್ನಿಹಿತವಾದ ವ್ಯಕ್ತಿಯನ್ನು ಮರ್ತ್ಯಕ್ಕೇ ಅಂಟಿಕೊಂಡಿರುವಂತೆ ಪ್ರೇರೇಪಿಸುತ್ತಾರೆ. ತಮ್ಮ ಸ್ವಾರ್ಥ ಮನೋಭಾವನೆಯಿಂದ ಅವರು ಆ ಚೈತನ್ಯವನ್ನು ಮುಕ್ತವಾಗಿ ಮುನ್ನೋಡಲು ಬಿಡುವದಿಲ್ಲ. ಇದರಿಂದ ಸಾವಿನ ಸಮೀಪದಲ್ಲಿರುವ ವ್ಯಕ್ತಿಯು ಆ ಔನ್ನತ್ಯದ ಪ್ರಜ್ಞೆಯನ್ನು ತೊರೆದು ಜಡ ಭೌತಿಕ ನೆಲೆಗೇ ಜೋತುಬೀಳಲು ಹೆಣಗುತ್ತಾನೆ. ಕೊನೆಗೆ ಆ ಚೈತನ್ಯವು ದಾರುಣ ಸಾವನ್ನು ಹೊಂದಿ ತನ್ನ ಔನ್ನತ್ಯವನ್ನು ಮುಟ್ಟುವಲ್ಲಿ ವಿಫಲವಾಗುತ್ತದೆ. ಹಾಗಾಗಿಯೇ

ಅವರನ್ನು ಅವರ ಪಾಡಿಗೆ ಮುಕ್ತವಾಗಿ ಮರಣದೊಳಗೊಂದಾಗಲು ಸಹಕರಿಸಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/449**

**ಉನ್ನತ ಪ್ರಜ್ಞೆಯ ಪರಿಣಾಮ**

*ಶ್ರೀಮಾತೆಯೇ, "ಉನ್ನತ ಪ್ರಜ್ಞೆಯನ್ನು ಹೊಂದುವುದೆಂದರೆ", ಉನ್ನತ ಆಲೋಚನೆಗಳನ್ನು ಮಾಡುವುದು ಎಂದರ್ಥವೇ?*

ಓರ್ವ ಸಾಧಕನು ತನ್ನ ಪ್ರಜ್ಞೆಯನ್ನು ಉನ್ನತ ಮಟ್ಟದಲ್ಲಿ ಇರಿಸಿದಾಗ ಸ್ವಾಭಾವಿಕ–ವಾಗಿಯೇ ಅದು ಆ ಸಾಧಕನ ಆಲೋಚನೆಗಳ ಮೇಲೆ ನಿಯಂತ್ರಣವನ್ನು ಸಾಧಿಸುತ್ತದೆ. ಹಾಗೂ ಉನ್ನತ ಮಟ್ಟದ ಆಲೋಚನೆಗಳನ್ನು ಮಾತ್ರ ಸಾಧಕನೊಳಗೆ ಪ್ರವಹಿಸುವಂತೆ ನಿಗಾ ಇಡುತ್ತದೆ. ಪ್ರಜ್ಞೆಯನ್ನು ಉನ್ನತ ಮಟ್ಟದಲ್ಲಿ ಇಡುವುದು ಎಂದರೆ, ಅದು ಮರ್ತ್ಯನನ್ನು ಕೆಳ ಸ್ತರದಿಂದ ಮೇಲೆತ್ತುವುದು ಎಂದರ್ಥ. ಹಾಗೂ ದಿವ್ಯತೆಯ ಬೆಳಕು, ಶಾಂತಿ, ಜ್ಞಾನ ಮತ್ತು ಸಾಮರಸ್ಯದೊಡನೆ ಒಂದಾಗಿಸುವುದು ಎಂದರ್ಥ. ಇದರ ಆರಂಭಿಕ ಹಂತದಲ್ಲಿ ಸಾಧಕರ ಪ್ರಜ್ಞೆಯನ್ನು ಅದರ ಕೆಳ ಸ್ತರದ ಜಡದಿಂದ ಪ್ರತ್ಯೇಕಿಸಬೇಕು. ಹೀಗೆ ಪ್ರತ್ಯೇಕಗೊಂಡ ಪ್ರಜ್ಞೆಯನ್ನು ಸಾಧ್ಯವಾದಷ್ಟು ಎತ್ತರದ ಸ್ತರದೆಡೆಗೆ ಎತ್ತಬೇಕು. ಆಗ ಸ್ವಾಭಾವಿಕವಾಗಿಯೇ ಆ ಪ್ರಜ್ಞೆಯು ಉನ್ನತ ಮಟ್ಟದ ಆಲೋಚನೆಗಳನ್ನು ಮಾತ್ರ ಸ್ವೀಕರಿಸುತ್ತದೆ. ಅದರ ದಾರಿಬೆಳಕಿನಲ್ಲಿ ನಡೆದು ಪ್ರಜ್ಞೆಯು ಉತ್ತಮ ಚಟುವಟಿಕೆಗಳಲ್ಲಿ ತೊಡಗುತ್ತದೆ. ನಮ್ಮ ಊರ್ಧ್ವದಲ್ಲಿ ಚಿಂತನೆಗಳಿಂದ ದೂರವಾದ ಪ್ರಜ್ಞೆಯೊಂದಿದೆ. ಹಾಗೂ ಅದಕ್ಕೂ ಔನ್ನತ್ಯದಲ್ಲಿ ಚಿಂತನೆಗಳೇ ಇಲ್ಲದ ಪರಿಪೂರ್ಣವಾದ ಉನ್ನತ ಮಟ್ಟದ ಪ್ರಜ್ಞೆಯೊಂದು ಸದಾ ಜಾಗೃತವಾಗಿರುತ್ತದೆ. ಆ ಪ್ರಜ್ಞೆಯೊಳಗಿಂದ ಸಮ್ಯಕ್ ಜ್ಞಾನದ ಅವತರಣವಾಗುತ್ತದೆ. ಅದನ್ನು ಶಬ್ದ ಸಮುಚ್ಚಯಗಳಲ್ಲಿ ಸೆರೆಹಿಡಿಯಲು ಸಾಧ್ಯವಿಲ್ಲ.

*ಪ್ರಿಯ ಮಾತೆಯೇ, "ಊರ್ಧ್ವದಿಂದಿಳಿದ ಮೌನವು ಸುಲಭವಾಗಿ ಸ್ಥಾಪನೆಯಾಗುತ್ತದೆ." ಎಂಬ ವಾಕ್ಯದಲ್ಲಿ "ಊರ್ಧ್ವದಿಂದ" ಎಂದರೆ ಏನು?*

ಒಂದು ವೇಳೆ ಉನ್ನತ ಪ್ರಜ್ಞೆಯ ಸ್ತರದೆಡೆಗೆ ನಿಮ್ಮನ್ನು ನೀವು ತೆರೆದುಕೊಂಡಾಗ ಆ ಔನ್ನತ್ಯದ ಶಕ್ತಿಯು ಕೆಳಗೆ ಪ್ರವಹಿಸಲು ಆರಂಭಿಸುತ್ತದೆ. ಹಾಗೂ ಈ ಪ್ರಜ್ಞಾ

ಪ್ರವಾಹವು ಮೌನವನ್ನು ಸ್ಥಾಪಿಸುತ್ತದೆ. ಏಕೆಂದರೆ ಅಲ್ಲಿ ಸ್ಥಾಪನೆಯಾದ ಮೌನವು ಆ ಔನ್ನತ್ಯದಿಂದ ನಿಯಂತ್ರಿಸಲ್ಪಡುತ್ತಿರುತ್ತದೆ. ಈ ಶಕ್ತಿಯು ಉನ್ನತ ಮಾನಸದಿಂದ ಬರಬಹುದು ಅಥವಾ ಅದಕ್ಕೂ ಔನ್ನತ್ಯದಲ್ಲಿರುವ ಸುಪ್ರಮಾನಸದಿಂದಲೂ ಸಹ ಇಳಿದು ಬರಬಹುದು. ಹಾಗೆ ಇಳಿದು ಬಂದ ಶಕ್ತಿಯಿಂದ ಮೌನವು ನೆಲೆಸುತ್ತದೆ. ಏಕೆಂದರೆ, ಆ ಶಕ್ತಿಯು ಪ್ರಜ್ಞೆಯಲ್ಲಿರುವ ಜಂಜಡಗಳನೆಲ್ಲ ಕಿತ್ತೆಸೆದು ಅಲ್ಲಿ ನಿರ್ಮಾಯಘನದ ಶಾಂತಿಯನ್ನು ತುಂಬಿಸುತ್ತಿರುತ್ತದೆ.

ವಾಸ್ತವವಾಗಿ ಒಬ್ಬರ ಮನಸ್ಸಿನಲ್ಲಿ ಶಾಂತಿನಲ್ಲಿ ನೆಲೆಸುವ ಸುಲಭ ಮಾರ್ಗವೆಂದರೆ, ಅವರ ಪ್ರಜ್ಞೆಯನ್ನು ಉನ್ನತ ಮಾನಸದೆಡೆಗೆ ತೆರೆದಿಡುವಂತೆ ಪ್ರೇರೇಪಿಸುವುದು. ಇದರಿಂದಾಗಿ ಆ ಸ್ತರದ ಪ್ರಕಾಶ, ಶಕ್ತಿ, ಶಾಂತಿಗಳು ಕೆಳಗಿಳಿದು ಬಂದು ಆ ಪ್ರಜ್ಞೆಯನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡು ಅದರೊಳಗೆ ಮೌನವನ್ನು ತುಂಬಿಸುತ್ತದೆ. ಈ ಮೌನದಲ್ಲೂ ಸಹ ಆ ವ್ಯಕ್ತಿಯು ಜಾಗೃತವಾಗಿ ತನ್ನ ಕಾರ್ಯವನ್ನು ನಿರ್ವಹಿಸಬಹುದು. ಅವರು ಬರೆಯಬಹುದು, ಮಾತನಾಡಬಹುದು. ಆದರೆ, ಈ ಎಲ್ಲಾ ಕಾರ್ಯ ಚಟುವಟಿಕೆಗಳು ಮೊದಲಿನಗಿಂತಲೂ ಉತ್ತಮ ರೀತಿಯಲ್ಲಿ ಪರಿವರ್ತಿತವಾಗಿರುತ್ತವೆ. ಏಕೆಂದರೆ, ಆ ಪ್ರಜ್ಞೆಯನ್ನು ತನ್ನ ವಶಕ್ಕೆ ತೆಗೆದುಕೊಂಡ ಔನ್ನತ್ಯವು ತನ್ನ ಮೂಲಕವೇ ಆ ಎಲ್ಲಾ ಪರಿವರ್ತನೆಗಳನ್ನು ರೂಪಿಸಿರುತ್ತದೆ. ಹೀಗೆ ಪ್ರಜ್ಞೆಯೊಳಗೆ ಮೌನವು ತುಂಬಿ ನಿಂತಾಗ ಮನಸ್ಸಿನ ಉದ್ರೇಕ ಭಾವನೆಯು ಕರಗಿ ಶಾಂತತೆಯ ಅಭಿವ್ಯಕ್ತಿಯು ಎಲ್ಲೆಡೆ ಮಾರ್ದನಿಸುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/328–29 – ಶ್ರೀಮಾತೆ**

## ಶ್ರೀ ಅರವಿಂದರ
## 'ಊರ್ವಶಿ'

**– ಅನು: ಶ್ರೀ ಕಿಶೋರಕುಮಾರ ಕಾಸಾರ (ಸಮಷ್ಟಿ), ಕಲಬುರ್ಗಿ**

**ಪುರೂರವಸ್**

ಕೋಟಿಕುಮುದಗಳು ಕಣ್ಬಿಟ್ಟು ಕಿಂಕಿಣಿಮಾಲೆಯನೇ ಕರೆಯಿಸುವಾ ಕ್ಷೀರಪಥದಿ,
ಯಕ್ಷಿಣಿರತ್ನಗಂಬಳಿಯ ಹಾಸಿ ಅಸಂಭಾವ್ಯ ದೃಶ್ಯಕಾವ್ಯಗಳ ಬಿತ್ತರಿಸುವಾ
ಭೂರಿಶೃಂಗಗೋಮಂಡಲದಿ ಭ್ರಮಿಸಿದನು ಪುರೂರವಸ್ಸನು.
ಆನಂದವೆಂಬಾಲಯದೊಳಗೆ ಆರೂಢನಿಹ ಆಸ್ಥಾಣುವಿನ ಆಣತಿಯಲಿ
ಪ್ರಕೃತಿಯ ಪರಮೋಚ್ಚ ಪರ್ವತಾವಳಿಯ ಪ್ರದೀಪ್ತದಲಿ ಪವಿತ್ರತಮವಿಹ
ನಿಸರ್ಗನಿಯತಿಯ ನಿಗೂಢನಿಲಯದಲಿ ನಿಲಿಂಪರೊಡನಾಡಿದನವ
ನೃಪನಾಯಕನು.
ಸುಪ್ರಮಾನಸದ ಸುಪ್ರಭೆಯೊಳಗೆ ಸುಳಿದು ಸುಲಕ್ಷಣರಿಹ ಸೃಷ್ಟಿಯಾಧಿಕ್ಯರೊಡನೆ,
ದಿವ್ಯತೆಯಾ ಧಾಮದಲಿ ದಿಗ್ವಲಯಗಳನೇ ಧರಿಸಿನಿಂದ ಧಾತೃಪ್ರಮಾತೃಗಳೊಡನೆ
ಚಾರಣಗೈದ **ಚಾಂದ್ರಾಯನದ ಚಿಗುರುಚಂದ್ರಾಮರಾಯನವ**
ಭವಾದ್ರಿಶೃಂಗದಿಂ ಭವಿಸಿ ಬುವಿಯೆಡೆಗೆ ಬಂದಿಳಿಯಲೆಂ ಬವಿಸಿದನು.
ಆತ್ಮಾಂಗನೆಯ ದೀಪ್ತಮಂದಿರದ ಧ್ರುವಗಳೆರಡರ ಮಧ್ಯೆ ದಾವಾನಲವನೇ
ಹರಿಸಿ, ಹಳ್ಳವಾಗಿಸಿ ಕೊಳ್ಳಕೊನ್ನಾರದೊಳಗಿಂದಿಳಿದ ಕೊತಕೊತನೆ ಕುದಿವ
ಜ್ವಾಲಾಗ್ನಿರಸವದು ಅಗ್ನಿಯಾರ್ಣವವನೇ ಸೃಜಿಸಿರಲು,
ಕುದಿಕುದಿವ ಕೋಲಾಹಲದ ಕಡಲಾಳವದು ಕಾಲದರಿವಿಲ್ಲದೆ
ಘೂರ್ಣಿಸುತ ಗೋಳಗಳನೇ ಗುಂಭದೊಳಗೆಳೆದು ಗುಟುಕಿಸಲೆಂದೆದೆರು ನೋಡಿರಲು,
ಪ್ರಕ್ಷುಬ್ಧವಿಹ ಪಾವಕದ ಪಾರಾವಾರವದು ಪ್ರಳಯಪ್ರವಾಹದೊಲಾಗಿ ಪವಡಿಸಿರಲು
ಗಂಡೆದೆಯ ಗುಂಡಿಗೆಯ ಗಾಂಭೀರ್ಯನವ ಸುಡುವಸಾಗರದೊಳಗಿಳಿದು
ಕೈಬೀಸಿ, ಕಾಲ್ಬಡಿದು, ಕಾಲಾಗ್ನಿರುದ್ರನನೇ ಕಡೆಗಣಿಸಿ ಬಂದರಿಗೆ ಬಂದಿಳಿದನು.
ಅಂತರಾತ್ಮಾಯನದ ಅಂತಸ್ತಿನಿಂದಿಳಿದು ಅವಕಾಶದಲಿ ಅಂಡಲೆದು
ಮುಂಬರಿದು ಮರ್ತ್ಯಮನೋಮಯದ ಮಧ್ಯದಲಿ ಮಿಡುಕುವ
ಉಲ್ಕಾಪಾತದೊಲು ಉರಿದುರಿದು ಉದುರಿ ಊರಾಚೆಗೆಸೆಯುವ
ಉರಿಪಿಂಡದಂತಲ್ಲದೇ

ಪ್ರಶಾಂತವಲಯದಿ ಪ್ರಕಾಶಮಾನದಿ ಪಯಣಿಸುವ ಏಕಾಂಗಿ ನಕ್ಷತ್ರದೊಲು ನಡೆದು,
ಅನಂತತೆಯ ಅವ್ಯಕ್ತಾವಕಾಶದೊಳಗವತರಿಸಿ ನಿರ್ವಲಯದ ನಿರಾಳದೊಳಗೆಳೆದ
ಸ್ಥೂಲರೇಖೆಯನಾಂತು ಸುತ್ತಿಬಳಸುತಾ ಸೀಮಾಂತವನೇ ಸೇರಿನಿಂದನು.
ಚಿರಂತನದ ಚಾರುದಿಶೆಗಳವು ಚರಿಸುತ ಬಂದು ಸಂಧಿಸುವ ಸಂಗಮಪಥದೊಳಗೆ
ಪದವಿಟ್ಟ ಪಥಿಕನವ, ಪರಮಪೂರಷನಿಂದಾದ ಪರಂಧಾಮದೀ
ಪಂಚಾಯತನದೊಳಗೆ
ಸ್ಥೂಲ–ಸೂಕ್ಷ್ಮ–ಕಾರಣವೆಂಬಾದಿ ಶರೀರಬಿಂಬಗಳಾಗಿ ಉದಿಸಿಬರಲಿಹ
ಪ್ರಥಮಾನುಷರಿಗೆ ಆತ್ಮದಾವರಣವ ತೊಡಿಸಿ, ಜನ್ಮಜನ್ಮಾಂತರದ
ಸರಣಿಸಂಕುಲಗಳ ಸೃಜಿಸಿ,
ಕಳೆದಕಾಯಗಳು ಮರಳಿ ಮಣ್ಣೊಳು ಮಲಗಿರಲು ಬರಲಿರುವ ಭವಾವಳಿಗೆ
ನವೀನ ಜನನದ ಜಾತಕವ ಬರೆವ ರಹಸ್ಯಾಗಾರವಾಗಿಹ
ವಿಶ್ವಾತ್ಮಸಂಸ್ಥಿತ ವಿಶ್ವಹೃದಯದಾ ವೈಶಾಲ್ಯತೆಯಿಂದಿಳಿದು
ಮಬ್ಬಿಡಿದ ಮಂದಕಾಂತಿಯಲಿ ಮಿನುಗುವ ಮಿಣುಕುಸೂರ್ಯರ ಮುಂಬೆಳಕಿನಲಿ
ಮುನ್ನಡೆದು ರಕ್ಕಸಿನಿಶೆಯ ರಾತ್ರಿಯರಮನೆಯನೇ ಸೇರಿನಿಂದನು.
ಮರ್ತ್ಯಚಕ್ಷುಗಳಿಂದ ಮರೆಮಾಚಲ್ಪಟ್ಟ ಬೆಳಕಿನ ಸೂಕ್ಷ್ಮಕ್ಷೇತ್ರವೊಂದು
ಸಾಹಸಿಗನೆದುರಿಗೆ ಸುಳಿದಿತ್ತು. ಬರಿಯ ಆಲೋಚನೆಗಳಲೇ ಆಲಾಪಿಸುವ
ಆಗಂತುಕರ, ಆಗಮನಾರ್ಥಿಗಳ ಲಕ್ಷ್ಯಾವಧಿಯಕ್ಷಿಗಳಿಗೆ ಸಾಕ್ಷಿಯಾಗದೆ
ಸುದೂರದಲೇ ಸುತ್ತುಹಾಕುತಿಹ ಬೆಳಕಿನ ಬಯಲಿನಲಿ ಬಂದಿಳಿದ ಬಾಂಧವನವ
ನಿಗೂಢನಿಲಯದಲೇ ನೆಲೆನಿಲ್ಲದೆ ನೆಲಮುಗಿಲಿನ ನಿಯತಿಯಂತೆ ನೇರವಿಳಿದು,
ಕತ್ತಲೆಯ ಕಾರಸ್ಥಾನವನೇ ಬೆಳಕಿನರಮನೆಯಾಗಿಸಿಕೊಂಡು ಬಸವಳಿದ
ಭೂದೇವಿಯ ಬಸಿರ ಬಯಕೆಗೆ ಬಣ್ಣವಿಡಿಸಲೆಂದು ಬೆಳಕಿನ ಬದುವನು
ಬಿಟ್ಟು, ಆ ದಿವ್ಯ ಪ್ರಪಾತದ ಪರಿಭುವಿನಲೇ ಪರಿಭ್ರಮಿಸಿದನು.
ಸಹಸ್ರಸೂರ್ಯಾಗ್ನಿಯರನು ಸುರುಳಿಸಾಗರದೊಳು ಸುರುವಿದೊಲಾಗಿಹ
ನೂರುನೀಹಾರಿಕೆಗಳ ನೀಲಾವರ್ತಗಳಲಿ, ಆ ತಿರುಗಣಿ ಮಡುವುಗಳಲಿ
ಚಕ್ರವಿಕ್ರಮದಿ ಚರಿಸಿ ಚಿರಂತನವಿಹ ನಿಶೆಯ ನಾಲ್ಕು ದಿಗ್ವಲಯಗಳನೆಲ್ಲ
ಶೋಧಿಸಿದನು.
ನೋಡನೋಡುತ್ತಿದ್ದಂತೆ ನೂರಡಿಯ ಗೋಡೆಯೊಂದು ನೆಲಕಚ್ಚಿ
ನಿರ್ನಾಮಗೈಯುವಂತೆ

ಅಂಧಕಾರದ ಆವರಣವದು ಅಳಿದು ಬಟ್ಟಬಯಲೊಂದು ನೆಟ್ಟಗೆ ನಿಂತಿತ್ತು.
ಆ ಶೂನ್ಯಮಯದ ರಂಗವಿಸ್ತಾರದಲಿ ನಿಃಕಾಲ ವೃತ್ತಗಳಿಲ್ಲ, ನಿರ್ವಯಲ
ಮಾರ್ಗಗಳಿಲ್ಲ.
ಮತ್ತೆ ನೋಡಿದೊಡೆ, ಸಹಸ್ರದ್ವಾರಗಳೊಮ್ಮೆಗೆ ತೆರೆದು, ಸಹಸ್ರರಂಗವಲ್ಲಿಯನಿಕ್ಕಿ
ಹಾಸಿ ಹಡದಿಯ ಹರಸಿ ಹಾರೈಸುವೊಲು, ಔನ್ನತ್ಯದ ಆಯಾಮದಲೆಳೆದ
ಅದ್ಭುತರೇಖೆಯದು ಕಳೆದು ಕಂಡಿತ್ತೊಂದು ಮಾರಕವಿಹ ಮಂದ್ರಲೋಕ.
ಕರಾಳವಿಹ ಕಾಲದೇಶಗಳ ಕಾರಸ್ಥಾನವದು, ಜನ್ಮಜರಾಮೃತ್ಯುಗಳ
ಜಾಲಂಧರವಾಗಿತ್ತು.
ಗ್ರಹಣವಿಡಿದ ಅಜ್ಞಾನಿ ದೇವತೆಗಳ ಶ್ರಮದಿ ಸೃಷ್ಟಿಯಾದ ವಿಶ್ವವದು
ಪಾಪಪುಣ್ಯಗಳ ಪುನರಾವರ್ತನೆಯಲಿ ಮರ್ತ್ಯವನಮರ್ತ್ಯದೆಡೆಗೇರಿಸುವ
ಸುವರ್ಣಮಂದಿರವಾಗಿತ್ತು. ಇಲ್ಲಿಯೇ ಕಾಳಸಾಗರದಿಂದೆದ್ದು
ಕಾಲಕಾಲೇಶ್ವರನೆಡೆಗೆ
ಸಾಗುವ ಸಾಹಸಿಗಳಿಹರು. ಮುಳುಮುಳು ಅತ್ತು ಪಿಳಿಪಿಳಿ ನಕ್ಕು ನರಳಾಡಿ
ಹೊರಳಾಡಿ
ಹೊಟ್ಟೆಬಟ್ಟೆಗಳಿಗಾಗಿ ಹೋರಾಡಿ ಹೊನ್ನಲೋಕದೆಡೆ ಚರಿಸುವ
ಚಾರುಮೂರ್ತಿಗಳಿಹರು.
ವೈರುಧ್ಯವಿಹ ವಿಶ್ವಗಳೆರಡರ ಮಧ್ಯೆ ಕಂಡರಿಸಿದ ಕಣಿವೆಯೊಂದು ಕೊಲ್ಲಿಯಾಗಿ
ಕುಳಿತಿರಲು
ಸಾಹಸಿಗನವ ಸಮನಾಂತರದ ಸುರುಳಿಗಳನು ಸೇರಿಸುವ ಸಂಪರ್ಕ
ಸೇತುವೆಯೊಂದನು ಸೃಜಿಸಿ
ಪರಾರ್ಧವನ್ನಪರಾರ್ಧದೆಡೆಗೆ ಪುನರ್‌ಜೋಡಿಸಿ ವಿಕಸನದ ನಿಃಶ್ರೇಣಿಯೊಂದನು
ನೆಟ್ಟು
ನೇರವಿಳಿದಿರಲು, ನೀಲಾವರ್ತದಲಿ ಗಿರ್ರೆಂದು ಪರಿಭ್ರಮಿಸುತಿಹ ಛದ್ಮಸ್ಥ
ಗಹ್ವರವೊಂದು
ಏಕವಿದ್ದುದನೇಕವಾಗಿ ಚಕ್ರವಿಕ್ರಮಣದಿ ವಿಭ್ರಮಿಸಿ ವಿಶಾಲವ್ಯಾಪ್ತವಿಹ
ಸ್ವರ್ಗದ ಸೀಮೆಯಿದು ದುಡುಕಿನ ಧಾಮವೆಂಬುದನು ಸಾರಿದ್ದವು.
ಮನೋಮಯದಾ ಮಹಾಬಿಲಗಳಲೊಂದನಾಯ್ದು ಮುನ್ನೂಕಿ ಮುಂಬರಿದಿರಲು
ಸೂರ್ಯನ ಮೇಲೊಬ್ಬ ಸೂರ್ಯನು ಸುತ್ತುತ ಸುಮನಸರ ಸೌಧಗಳಿಗೆ

ಪಲ್ಲವಿಸಿದ ಪ್ರಕಾಶದ ಪುಂಜವನು ಪ್ರಕ್ಷೇಪಿಸುತಿದ್ದರು. ಅದರ ಇನ್ನೊಂದೆಡೆಯ
ಶೂನ್ಯಮಯದ ಸಹಸ್ರಾಂಗಣದಲಿ ಸೃಷ್ಟಿಸಾಮ್ರಾಟರಿಂದ ನೇಮಿತರಾದ
ದಿವ್ಯ ದೇವದೂತರುಗಳು ಸಹಸ್ರಾವಧಿಯಲಿ ಸುತ್ತುಹಾಕುತ
ಲೋಕಲೋಕಂಗಳನು ಕಣ್ಗಾವಲಿಯಲಿ ಕಾಯುತಿಹರು,
ಅಪ್ರಜ್ಞೆಯಾಳದ ಅಯಜ್ಞರಿಂದ ಆಕ್ರಮಣಕ್ಕೊಳಗಾಗದೊಲದನು ಆಶ್ರಯಿಸಿಹರು.
ಅದರಡಿಯ ಆಳನಿರಾಳದಲಿ ನಿಶ್ಚಂದ್ರ ನಿಸ್ತಾರವಿಹ ನೀಲಾಕಾಶವೊಂದು ನಿಂತಿತ್ತು.
ಅವ್ಯಕ್ತಾವಕಾಶದ ಆಯಾಮದಲಿ ಅಂತರಿಕ್ಷವದು ತೊಗಲುಬಾವಲಿಯೊಲಾಗಿ
ತೂಗಿತ್ತು.
ಮೇಲೆ ಬಾನಿಲ್ಲ, ಕೆಳಗೆ ನೆಲವಿಲ್ಲ, ನಡೆಯಲೊಂದಡಿಯ ಈಡಿಲ್ಲ.
ಶೂನ್ಯವಾದರೂ ಸಂಪದ್ಭರಿತವಿಹ ಸಹಸ್ರಾಂಗಣವದು
ವಾಯುಮಂಡಲವಾಂತು ವಂದಿತವಿಹುದು. ಮರ್ತ್ಯಲೋಕದ ಮಾನುಷರಿಗೆಂದು
ಹೃದ್ಯಾಬ್ಧಿಯಿಂದೊಗೆತಂದ ಪ್ರಾಣರಸದ ಪೂರ್ಣಕುಂಭವನು
ಮೊಗೆಮೊಗೆದು ಸುರುಸುರುವಿ ಶ್ವಾಸದಾರ್ಣವದಲೆಗಳನೇ ಸೃಜಿಸಿ
ಅಂಗೈಯೊಳಗವನು ಅದುಮಿ ಅಂತರಿಕ್ಷದ ಅಣ್ವಾಕೃತಿಗಳನೆಲ್ಲ
ಪ್ರತಿಮೆಯೊಳಗೆ ಪೂರೈಸಿದ ಪ್ರಾಣದೇವತೆಗಳಾ ಪ್ರದೀಪ್ತ ಪ್ರಾಂಗಣದಲಿ
ವಾಯುವಿನ ವಕ್ತಾರರ ವಿದ್ವತ್‌ಸಭೆಯೊಂದು ಸಮಾವಿಷ್ಟಗೊಂಡಿತ್ತು.
ಆದರೆ, ಆಕಾಶಕುಹರದಾಳದಲಿ ಅವ್ಯಕ್ತವಿಹ ಅನಂತ ಗುಹ್ಯಗಳು ಆ ಎಂದು
ಬಾಯ್ದೆರೆದು
ಬಂದು ಹೋಗುವ ಬಾಂಧವರನೆಲ್ಲ ಬರಸೆಳೆದು ಬಡಬಾಗ್ನಿಯಲಿ ಬೇಯಿಸುತ
ರಾಹುರವಿಯ ರಜ್ಜಿಸುವಂತೆ, ಸ್ವರ್‌ಭಾನು ಸೋಮನನು ಸೆರೆಹಿಡಿವಂತೆ
ನೀಲಾಕಾಶದಿ ನಿದ್ರಿಸಿಹ ನಾಗರಂಧ್ರಗಳು, ಕಾಳಮೇಘದಿ ಕುಳಿತ ಕುಳಿಬಾನೆಗಳು
ಚಾರುಲೋಕದಿ ಚರಿಸುವ ಚಾರಣರ ಚಿನ್ಮಯಗಳನೆಳೆದವರನು ಚಿರನಿದ್ರೆಗೆ
ತಳ್ಳುವ ತವಕದಲ್ಲಿರಲು, ಪ್ರಜ್ಞೆಯಾಳದಲೆಲ್ಲೋ ಪುನರ್‌ಸ್ಥಾಪಿತವಾಗಲೆಂದು
ಪ್ರತೀಕ್ಷಿಸಿದ್ದ ಪ್ರಾಕ್ತನ
ಅಜ್ಞಾನದ ಅಂಧಾಪೇಕ್ಷೆಯೊಂದು ಅನಂತತೆಯನೇ ಆಳಲೆಂಬೊಂದು
ಅವಕಾಶಕೆ ಇದಿರುನೋಡಿತ್ತು.
ಆ ನಿಶೆಯ ನೀಳಗುಹ್ಯದಿ ಹಸಿವಿನಿಂದ ಹೊಟ್ಟೆಹೊಸೆಯುತಿಹ ಸದ್ದಿರದ
ಸರ್ಪವೊಂದು

ನಿಶೆಯವಳ ನೀಲಕೇಶದ ಛಾಯೆಯನು ಕರೆಸಿ ಕತ್ತಲೆಯ ಕವಿಸಿ
ಪ್ರಕಾಶವನೆಲ್ಲೆಡೆಯಿಂದ ಪ್ರತಿಬಂಧಿಸಿ ಪ್ರಜ್ಞೆಯ ಮೇಲೆ ಪ್ರಭುತ್ವವನು ಪಡೆವ
ಧಾವಂತದಲ್ಲಿರಲು, ದಾರ್ಶನಿಕನವ ಮೌನ ಮೃತ್ಯುಗಳ ಮಧ್ಯೆ ಮಾರ್ಮಲೆತು
ದೈತ್ಯರೆಡೆಯಿಂದ ಧಾವಿಸಿಬಂದ ದಾವಾನಲವನು ಧೈರ್ಯದಲೆದುರಿಸುತ
ದಾಪುಗಾಲಿಟ್ಟನು.
ಇಳಿಯುತಿಳಿಯುತ ಇನ್ನೇನು ಇಳೆಮುಗಿಲನು ಇಬ್ಭಾಗಿಸುವ ಇಬ್ಬನಿಯಲುಗನ್ನು
ಮುರಿದು ಮರ್ತ್ಯಲೋಕದೆಡೆ ಮುನ್ನುಗ್ಗಲೆಂದವನು ಮಾನಿಸಿರಲು
ಅಪ್ರಜ್ಞೆಯ ಆಳಕರಾಳದಲಿ ಕುಳಿತ ಕಳಂಕಿತ ಕಲಕಲಾ ಲೋಕಗಳಿಂದೆದ್ದ
ಧೂಮಪ್ರಭೆಯ ಧೂಮ್ರವೊಂದು ದ್ರಷ್ಟಾರನ ದಂಗೆಡಿಸಲೆಂದು ಧೇನಿಸಿತ್ತು.
ಭೂಮದಾ ಬಾಂದನು ಬಿಟ್ಟು ಭಾರವಿಹ ಭೌತಿಕದ ಬುವಿಯೆಡೆಗೆ ಬಂದಿಳಿದೊಡೆ
ಮೋಹಮಮತೆಗಳೇ ಮಹಾಗದ್ದುಗೆಯನೇರಿ ಮಂಡಿಸಿರುವ
ಮರ್ತ್ಯದಾವರಣವದು ಮುತ್ತಿತ್ತು.
ಸ್ಥೂಲದೊಂದು ಸ್ಪರ್ಶಮಾತ್ರಕೆ ಸ್ತಂಭೀಭೂತನಾದವನ ಸ್ಮೃತಿಯೊಳಗೆ
ಸೆರೆಹಿಡಿದ ಸರಣಿಬಿಂಬಗಳು,
ಲೋಕಲೋಕಂಗಳ ಯಾತ್ರಿಕನಾಗಿ ಕಂಡುಂಡು ಧೇನಿಸಿದ ದಿವ್ಯಧಾಮಗಳಾ
ದರ್ಶನಗಳು,
ಚಾರಣನಾಗಿ ಚರಿಸಿರಲು ಚಿತ್ರಪಟಲದಿ ಚಿತ್ತೈಸಿದ ಚಿರಂತನದ
ಚೇತನಾಯಲಗಳ ಚಿತ್ರಗಳು
ಚಿಂತನೆಯೆಂಬೊಂದು ಚಾಂಚಲ್ಯದ ಚಲನೆಯಲಿ ಮುಳುಗಿ ಮರೆಯಾದವು
ದಾರಿಯಿರದ ಧನ್ವನದ ದರಿಗಿರಿಗಳಲಿ ತಿರುತಿರುಗಿ ದಿಕ್ತಟದಿ ದಿಕ್ತಪ್ಪಿದೊಲು
ದೂರವಾದವು.
ಕೊನೆಗೊಮ್ಮೆ ಕಾಡಲಿ ಕಳೆದುಹೋದ ಕುರಿಗಳೆಲ್ಲ ಕಲೆತು ಕುರುಂಬರ
ಕೊಟ್ಟಿಗೆಯೊಳು ಕಾಲಿಡುವೊಂತೆ
ಸ್ಮೃತಿಸಾಗರದಿಂದೆದ್ದ ಸಹಸ್ರಾರು ಶ್ರೀಸ್ವರೂಪಗಳವು ಹೃದಯದ
ಮೌನಮಂದಿರದೊಳು
ಮೂಡಿ, ಮೂರಿಪ್ಪತ್ತು ಮಂದಿಯೊಲಾಗಿ ಮಲೆತು ಕಲೆತು ಮಾರ್ಮಲೆತು
ಅಧಿವೇಶನವೊಂದನು ಆರಂಭಿಸಿದವು. ಅವರೋಹಣದಿ ಅರಿತ
ಆಯಾಮಗಳನೆಲ್ಲ ಆಲಾಪಿಸಿದವು;

ನಡುಗಡ್ಡೆಯ ನಿರ್ಲಿಪ್ತದಲಿ ನಿರಾಮಯರಾಗಿ ನೆಲೆಸಿಹ ನೀರ್ನಿವಾಸಿಗಳನು
ನಿರ್ನಾಮಗೈದವರನು ನಿರ್ವಾಸಿಗಳನಾಗಿಸಲೆಂದು ನೋಂತ ನೂರು
ನಾಯಕರು,
ಕಳ್ಳಕಾಕರುಗಳಾಗಿ ಕೊಲ್ಲಿಕೊಲ್ಲಿಗಳಿಂದಿಳಿದ ಕೀಕಟ–ಕಿರಾತರೆಂಬಾದಿ
ಕಾಳಕುಲಕಾಯಕರು,
ಬಾಂಬಯಲಿನ ಬೆಟ್ಟದಡಿಯಲಿ ಬೆಳೆದ ಭವ್ಯಸೌಧಗಳನು ಬರಿದಾಗಿಸಲೆಂದು
ಬಂದಿಳಿದ ಬಾರ್ಬರರು,
ಒಟ್ಟೊಟ್ಟಿಗೆ ಕಟ್ಟಿಸಿ ದಿಟ್ಟಿಸಿ ದಟ್ಟೈಸಿರಲು, ದಾಂಗುಡಿಯ ಧಿರಿಸಿನಲಿ
ಧಾಂಧಲೆಯನೆಬ್ಬಿಸಿ
ಹೆಣ್ಣು–ಗಂಡೆನ್ನದೆ, ಮುದಿ–ಮಕ್ಕಳೆನ್ನದೆ ಹರಿಹಾಯ್ದು ಹೊತ್ತೊಯ್ದು
ಹೊನ್ನಮಯವಿಹ
ಭೂವಿಸ್ತಾರವನು ಬರಿದಾಗಿಸುತ, ನಡೆದು ನೇರ ನೃಪತಿಯರಮನೆಯ
ನಾಲ್ಮಹಡಿಯ
ನಿಲಯವನು ನೋಡನೋಡುತ್ತಲೇ ನಿರಾಭರಣಮಯದಿ ನಿಶ್ಶೇಷವಾಗಿಸಿ,
ಭೂಪತಿಯ ಬಳ್ಳಿ ಬಿಚ್ಚಿರಲು, ಆರಥಿಯ ಕೊಳ್ಳಿ ಹಚ್ಚಿರಲು,
ಪವಡಿಸಿದ ಪಂಜುಗಳಿಗೆಲ್ಲ ಪುಟವಿಕ್ಕಿ ಪ್ರಾಸಾದವನೇ
ಪ್ರಳಯಪ್ರಾಂಗಣವನಾಗಿಸಿರಲು,
ಕೆಂಡದ ಕೆನ್ನಾಲಿಗೆಯಲಿ ಕುಲಗಳಾಳಿದ ಕಟ್ಟಡವದು ಕನಲಿ ಕಪ್ಪಿಡಿದರಲು
ನೃಪಬಳಗದ ನೂರ್ಮಂದಿಯು ಸುಡುತಿರುವ ಸುವರ್ಣದ್ವಾರದ ಹಿಂಬದಿಗೆ
ಹುದುಗಿಟ್ಟ
ಹೊನ್ನಕಲಶಗಳನು, ಕುಲಪುರುಷರ ಪುರಾಣಪತ್ರಗಳನು, ಸಂಪದ್ಭರಿತ
ಸಾಮ್ರಾಜ್ಯದ ಸರ್ವಸ್ವವನು
ಸೂರಡಿಯೆ ಬಿಟ್ಟು, ಅಳಿದುಳಿದ ಸಂತತಿಯ ರಕ್ಷೆಗಾಗಿ ನಡೆದು ಮೊರಡಿಯಾಚೆ
ಮರೆಯಾಗುವಂತೆ,
ಪರಾರ್ಧದಿಂಧಪರಾರ್ಧದೆಡೆಗವತರಿಸಿದ ಆರೂಢನವ ಅಧಿಮಾನಸದ
ಆಯಾಮದಲನುಭವಿಸಿದ
ದಿವ್ಯವೈಭವ, ದಿವ್ಯಾನುಗ್ರಹ, ದಿವ್ಯಪ್ರಕಾಶ, ದಿವ್ಯಜೀವನಗಳೆಲ್ಲ
ಅಧಿಮಾನಸದ ಅಗ್ನಿದ್ವಾರದ ಆಂತರ್ಯದಲ್ಲೇ ಅಳಿದುಹೋದವು.

ಪೂರ್ಣಪ್ರಜ್ಞೆಯ ಪ್ರಾಕಾರದಲೇ ಪವಿತ್ರತಮವಿಹ ಭವ್ಯತೆ, ಭಾವಾಧಿಕ್ಯತೆ,
ಭೂಮಶಾಂತತೆಗಳೆಲ್ಲವೂ
ಬಂಗಾರದ ಮುಚ್ಚಳದ ಮರೆಯಲ್ಲಿ ಮಿನುಗುವ ಮೂಲೋಕಗಳಂತೆ
ಮುಚ್ಚಿದ ಮಾನಸದ ತಾವಿನಲೇ ತಾವಿದ್ದು ತನಯನನು ತಳದೆಡೆಗೆ ತಳ್ಳಿದ್ದವು.
ಮಾನಸದಿಂದಿಳಿದಮಾನುಷನ ಮಾನಸದಲಿ ಮರೆಯಲಾಗದ ಮಹಾಲೋಕಗಳ
ಸ್ಮೃತಿಸಾಗರವೊಂದು ಮೈದಳೆದು ಮಥಿಸಿರಲು, ಕಡೆದ ಕಡಲೊಳಗಿಂದ
ಕಡಲಾಣಿ ಮುತ್ತುಗಳು ಮೈಗರೆವಂತೆ ಊರ್ಧ್ವಸಂಪದವೆಲ್ಲ ನಕ್ಷತ್ರಪಾತದೊಲು
ಹಿಂದೋಡಿ, ಮಾನವನವ ಮುಂದೋಡಿ ಮರ್ತ್ಯಮಯ ವಿಶ್ವದ ಭೂರಂಗವದು
ಬಾಂಧವನನು ಬರಸೆಳೆದು ಬಂಧಿಸಿತ್ತು, ಒಂದಾಗಲೆಂದವನೊಡನೆ ಒಳಗೆಳೆದು
ವಂದಿಸಿತ್ತು.
ಭೂಮಸಂಪತ್ತಿನಿಂದಿಳಿದು ಭೂವಿಪತ್ತಿನೆಡೆಗೆ ಭವಿಸಿರಲು
ಪ್ರಜ್ಞೆಯಾಗರದಲಿ ಪ್ರಣವಿಸಿದ ಪಾರ್ಥಿವನ ಶ್ರವಣ–ದರ್ಶನಗಳೆಲ್ಲ
ಮರ್ತ್ಯದಲಿ ಮಡಗಿಹ ಶ್ರಾವ್ಯ–ದೃಶ್ಯಗಳಾಗಿ ಪ್ರವರ್ತಿತವಿಹವು.
ಕುಡಿನೋಟಗಳೆಲ್ಲ ಕಾಲಾತೀತವಾಗಿ, ವ್ಯಾಪ್ತಗಮನವೆಲ್ಲ ವಿಕ್ಷಿಪ್ತಮಯವಾಗಿ
ಕಂಡರಿಸಿದ ಕಾಣ್ಕೆಗಳಲ್ಲಿ ಹಿರಿದೆಲ್ಲ ಕಿರಿದಾಗಿ, ಕಿರಿದೆಲ್ಲ ಬರಿದಾಗಿ, ಭಾರವಿಡಿದಿರಲು
ಭೂವಲಯದ ರೇಖೆಗಡಿಯಲಿ, ಆ ನಿರ್ವಯಲದ ನಿರಾಳದಲಿ ಸುತ್ತುತಿರುವ
ಸುಂದರಾಂಗನ
ಪ್ರಜ್ಞಾಗೇಹವನು ಕಾರ್ಮಣದೇಹದಲಿ ಕೂಡಿಡಲೆಂ ಧೇನಿಸಿತ್ತೊಂದು ದಿವ್ಯಭಾವ.
ಪ್ರಜ್ಞೆಯ ಪದಾರ್ಥಗಳಿಂ ಪುನರುಜ್ಜೀವನಗೊಂಡ ಪ್ರಭಾವೀತನವದು
ಪ್ರತ್ಯರ್ಥವಿಲ್ಲದಾ ಪರಮಾತ್ಮನ ಪ್ರಾಂಗಣದಿಂದಿಳಿದಿಲ್ಲಿ ಪರಿಭ್ರಮಿಸಿತ್ತು.
ಆಸ್ಥಾಣುವಿನ ಆಂತರ್ಯದಿಂದಿಳಿದು ಅಂತರಾತ್ಮಾಯನದಾಲಯದೊಳಗೆ
ಅಂಡಲೆದು, ಆವಾಸಸ್ಥಾನವನರಸಿ ಆರೂಢನಾಗಲೆಂದಿಲ್ಲಿ ಅವರೋಹಿಸಿತ್ತು.
ಮೆದ್ದಮೊಲವೊಂದನ್ನು ಮತ್ತೆ ಮೈಮುರಿದು ಮಣಿಸುವ ಮಹಾನಾಗರದೊಲು
ಸಾಧಕನ ಸ್ಮೃತಿಸಾಗರದಲಿ ಸದ್ದಿರದೆ ಸೇರಿತಳವ ಸುಪ್ತವಾಗಿ ಸುಪ್ತಿಗೊಳಗಾದ
ನಿರಾಕಾರವಿಹ ನೂರು ನೆನಪುಗಳವು ನೀರ ನಿರಾಳದೊಳಗಿದ್ದೆಂದು ನಿರ್ಮಾಯಘನದ
ನಿರ್ಲಿಪ್ತ ನಿಯಮಗಳನಾ ನೃಪನಾಯಕನೊಳಗೆ ನೇರವಿಳಿಸಿರಲು
ನೆರವೇರಿತ್ತೊಂದು ನೇಮ.
ಜೀವನದೇವತೆಗಳ ದಿವ್ಯರಾಜ್ಯದೊಳಗೆ ಧೇನಿಸಿದ ಸುಂದರ–ಸಮೃದ್ಧ ಬದುಕಿನ

ಕೋಟಿಕ್ಷಣಗಳವು ಕಂಕಣ ಕಣಗಳಾಗಿ ಕಮಲಸರೋವರದ
ಕೆಸರಾಳದೊಳಗಿಂದೇಳುವ
ಬುದ್ಬುದಮಾಲೆಯಿಂದಾಗುವ ಉದ್ಬುದರಂಗದೊಲು ಊರ್ದ್ವಪ್ರಜ್ಞೆಯವನಲ್ಲಿ
ಉದಯಿಸಿತ್ತು.
ಪ್ರೇಮರಾಜ್ಯದಾ ಪವಿತ್ರಪ್ರಾಂಗಣದಿಂ ಪರಿತ್ಯಕ್ತನಾಗಿಲ್ಲಿ ಪದವಿರಿಸಿದವನ
ಪ್ರಜ್ಞೆಯೊಳಗೆ ಪ್ರೇಮವೇ ಪುನರಣಿಸುತ್ತಿರಲು ಪೂರ್ಣಲೋಕದಿಂದೊಗೆತಂದ
ಪ್ರೇಮವನೀ ಪ್ರಾಣಲೋಕದಿ ಪುನರ್‌ಸ್ಥಾಪಿಸಲೆಂದಲ್ಲಿ ಪ್ರತೀಕ್ಷಿಸಿದ್ದನು.
ಸ್ವಪ್ನಸಾಮ್ರಾಜ್ಯದ ಸಾರ್ವಭೌಮನಾಂತು ಚಕ್ರವರ್ತಿ ಪದಪೀಠದಲಿ
ಪ್ರತಿಷ್ಠಾಪಿತನಾದವನು
ತಾ ಕಂಡ ಕನಸುಗಳಿಗೆಲ್ಲ ಕಾಮನಬಿಲ್ಲಿನ ಬಣ್ಣಗಳ ಬಳಿದು ಭೂಮದಿಂ
ಬುವಿಯೆಡೆಗೆ
ನಿರಂತರದ ನಿಚ್ಚಣಿಕೆಯೊಂದನು ನೆಟ್ಟು ನಿಲಿಂಪರು ನೇರವಿಳಿದಿಲ್ಲಿ ನಿಂತು ನೆಲಕೆ,
ಮಡಿದ ಮಣ್ಣೊಳಗಿಂದ ಮೇಲೇರುವಾ ಮರ್ತ್ಯರಲ್ಲಿ ಮುಟ್ಟಿ ಮನೋಮಯವ,
ನೆಲಮುಗಿಲಿನಂಗಳದಿ ನಿತ್ಯದೊಡನಾಟವನು ನಿಯಮಿಸಲೆಂದಿಲ್ಲಿ ನೋಂತಿಹನವ
ನೇತಾರ.
ಕಲ್ಪನೆಯೆಂಬಾ ಕೂಸಿಗೆ ಕನಸಿನ ಕುಲಾವಿಯ ಕಟ್ಟಿ ಕಾಲದೋಘದಲಿ ಕಾದಿದ್ದನವ
ಕಾರ್ಮಣ.
ಅಂತರಿಕ್ಷದಾ ಅವ್ಯಕ್ತಾವಕಾಶದಿ ಕಲಕಲಗುಟ್ಟುವ ಕರ್ತಾರನ ಕೋಟಿಕಂಗಳಂತಿರುವ
ಲಕ್ಷನಕ್ಷತ್ರಾವಳಿಗಳ ಕಕ್ಷೆಯೊಳಗೆ ಸುಭಿಕ್ಷವಾಗಿ ಸುತ್ತುತಿರುವ ಸಾಹಸಿಗನವ
ಸಮಯದ ಸುವಿಶಾಲ ಮಸೂರವದು ಮೂಲೋಕಗಳನೆಲ್ಲ ಮುಷ್ಠಿಯೊಳಗಿಟ್ಟು
ಕೋಟಿಕಣಗಳನೆಲ್ಲ ಕಣ್ಗಾವಲಿನಲಿ ಕಾಯುತ ಕಾಲವಂಚಕರನು ಕಾಲಡಿಯಲಿ
ಕುಣಿಸಿರಲು
ಕಾಲರಾಯನ ಕೈಯೊಳಿಹಾ ಕಂದರ್ಪ–ದರ್ಪಣವನ್ನೇ ಕಂಗೆಡಿಸುವೊಲು
ಕಾಲಚಕ್ರದ ಕುಲಗತಿಯನ್ನೇ ಕುಂಠಿತಗೊಳಿಸುತವನು ಕೆಳಲೋಕದೆಡೆ ಕಾಲಿಟ್ಟಿಹನು.
ಇಂತು ಕಾಲದೇಶಾಯಮಾಗಳನೇ ಅವಮಾನಿತವಾಗುವೊಲು ಗೈದ
ಕಾರ್ಮಣನೆದುರಿಗೆ ಕುಟಿಲ ಕಾಮನೆಯ ಕೆಂಬೂತವೊಂದು ಕಂಡು ಕುಣಿದಾಡಿತ್ತು.
ಕಾನನದಿ ಕಾಣಸಿಗುವ ಕೊಳ್ಳಿದೆವ್ವದ ಕೆಂಡದೊಲು ಕೆಣಕುತವನೊಡನೆ
ಕಳ್ಳಾಟವಾಡಿತ್ತು.

ಎಲ್ಲ ಎಲ್ಲೆಗಳನೆಲ್ಲ ಅಲ್ಲಲ್ಲೇ ಇಲ್ಲವಾಗಿಸುವ ಮಲ್ಲಯೋಧನೊಲು
ಮುರಿದವುಗಳನೆಲ್ಲ ಮುಂದಡಿಯಿಟ್ಟಿರಲು,
ತಂಡತಂಡದಲಿ ಬಹ ಪುಂಡರ ದಂಡೊಂದು ದಾರಿಹೋಕನನು ಸೆರೆಹಿಡಿದು
ಸಾಮಾನ್ಯರವರು ಸಂಗ್ರಹಿಸಿದ ಸಂಪತ್ತನೆಲ್ಲ ಸೂರೈಗೈದವರನು
ಸುಡುಗಾಡಿಯೆಸೆಯುವೊಲು
ಅವತರಿಸಲಿಹ ಆಗಮನಾರ್ಥಿಯನಾ ಅರ್ಧಮಾರ್ಗದಲೇ ಅಡ್ಡಗಟ್ಟಿ
ಆಕ್ರಮಣಗೈಯಲೆಂದಾಲೋಚಿಸಿದ
ದೈತ್ಯನಕ್ಷತ್ರಗಳ ದಾರಿಯೊಳಗಿಂ ಧೀರನಡೆಯಿಟ್ಟವನು ದೀಧೀತಿಯ ದಂಗೆಯಲಿ
ತಿಳಿಯದೆ ತಪ್ಪುಹೆಜ್ಜೆಯನಿಟ್ಟು ತುಡುಗು ತಾರೆಗಳ ತಿರುಗಣಿಯಲಿ
ತೊಗಲುಬಾವಲಿಯೊಲಾಗಿ ತೂಗಿದ್ದನು.
'ಗೋ' ಇಲ್ಲದ ಗುಂಭದಾಳದಲಿ ಗಿರ್ರೆಂದು ಗಿರಕಿಸುತ್ತುವ ಗೋಳಗಳ
ಗುಂಫದೆಡೆಯಲಿ
ಮಬ್ಬಿಡಿದ ಮುನ್ನೂರು ಮಂಡಲಗಳ ಮಧ್ಯದಲಿ ಮುಳುಗಿ ಮರೆಯಾಗಿದ್ದನು.
ಕೊನೆಗೆ ಕಡುಗೊಡಲಿವೀರನೋರ್ವ ಕಾಂಡಗಳನೆಲ್ಲ ಕಡಿದೊಗೆದು
ಕಾಡೊಳಗಿಂದ ಕಂಡರಿಸುವಂತೆ
ಕತ್ತಲೆಯೊಳಗಡಗಿಹ ಕುರೂಪವಿಹ ಕಕ್ಷೆಗಳನೆಲ್ಲ ಕಡಿದೊಗೆದು ಕೆಳಗಿಳಿದ
ಕಾರ್ಮಣನನು
ಸೌರಮಂಡಲದ ಸುವಿಶಾಲ ಕಕ್ಷೆಯೊಂದು ಕರೆದು ಕುಳ್ಳಿರಿಸಿತ್ತು.
ದೂರದೂರಿನಿಂದ ಬಂದ ಬಂಧುವಿನಂತವನನು
ಭೂದೇವಿಯ ಬಂಧುಮಕ್ಕಳೆಲ್ಲ ಬಂದು ಬರಸೆಳೆದವನನು ಬಿಗಿದಪ್ಪಿದರು,
ತೆಗೆದಪ್ಪಿದರು
ತೂಗುದೊಟ್ಟಿಲೊಳಗೆ ತೂಗುತಿಹ ತನಯನಂತವನನ್ನು ತಾಯ ತೋರೆದೆಗೆ
ತಂದಿಳಿಸಿದರು.
ಅನಂತಕಾಲದಿಂ ಅಲವತ್ತುಕೊಂಡ ಅವನೀತಲಳ ಬಸಿರಬಯಕೆಗೆ
ಉಸಿರನ್ನಿಡಲೆಂದಿಲ್ಲಿ
ಪದವಿರಿಸಿದ ಪಾರ್ಥಿವನ ಪೂರ್ಣಪ್ರಜ್ಞೆಯನು ಪ್ರಾಣಪ್ರಜ್ಞೆಗೆ
ಪರಿವರ್ತಿಸುತವನನು
ಪಡೆದಿಹಳ ಅಪ್ರಜ್ಞೆಯಾಳದ ಅಪ್ರಕೇತದ ಅರೂಪವದು ರೂಪವಡೆದಿರಲು

ಕಣ್‌ಮಿಣುಕಿಸುವ ಕುಡಿದೀಪಕಿಂತಲೂ ಕೊಂಚ ಕಾಂತಿಮಯವಿಹವಳ
ಕತ್ತಲೆಯ ಕೈಯದು
ದಿವ್ಯಲೋಕದಿಂದಿಳಿದ ಧಾರಕನ ಯುವ ದೈವತ್ವವನಲ್ಲಿ ದಮನಗೈದವನನ್ನು
ದಾಸ್ಯಪ್ರವೃತ್ತಿಯಲೇ ದಿನಗಳ ದೂಡಿಸಲೆಂದಿಲ್ಲಿ ಧೇನಿಸಿತ್ತು...

(ಸಶೇಷ)

---

**ಟಿಪ್ಪಣಿ:**

**ಪುರೂರವಸ್:** ಈ ಹಿಂದೆ ಪೀಠಿಕೆಯೊಳಗೆ ಉಲ್ಲೇಖಿಸಿದಂತೆ ಶ್ರೀ ಅರವಿಂದರು 1898–99 ಸುಮಾರಿಗೆ ಬರೋಡಾದಲ್ಲಿದ್ದ ಸಂದರ್ಭದಲ್ಲಿ ಊರ್ವಶಿ ಕಿರು ಕಾವ್ಯವನ್ನು ರಚಿಸಿದ್ದರು. ಹಾಗೂ ಅದು ಹಲವು ಮುದ್ರಣಗಳನ್ನು ಕಂಡು ಸಾಹಿತ್ಯ ವಲಯದಲ್ಲಿ ತನ್ನದೇ ಆದ ವಿಶಿಷ್ಟ ಛಾಪನ್ನು ಮೂಡಿಸಿತ್ತು. ಆದರೆ ಆ ಹಂತದಲ್ಲಿ ಶ್ರೀ ಅರವಿಂದರಿಗೆ ದರ್ಶನಗಳ ಭಾವವು ಜಾಗೃತವಾದರೂ ಸಹ ಪೂರ್ಣ ಯೋಗವು ಮಾತ್ರ ಇನ್ನೂ ಸಿದ್ಧಿಸಿರಲಿಲ್ಲ. ಹಾಗಾಗಿಯೇ ಆ ಹಂತದಲ್ಲಿ ರಚಿತವಾದ ಹಲವಾರು ಕಿರು ಕಾವ್ಯಗಳಲ್ಲಿ ಲೋಕ ಲೋಕಗಳ ವರ್ಣನೆಯ ಹೊಳಹು ಅಲ್ಲಲ್ಲಿ ಕಂಡು ಬಂದರೂ ಕಾವ್ಯದುದ್ದಕ್ಕೂ ಹಾಸುಹೊಕ್ಕಾಗಿರಲಿಲ್ಲ. ಇದಾದ ನಂತರ ಶ್ರೀ ಅರವಿಂದರು ಪಾಂಡಿಚೇರಿಗೆ ಬಂದ ನಂತರ ಅವರ ಯೋಗ ಮಾರ್ಗವು ಆರಂಭವಾಗಿ ಅವರಲ್ಲಿ ಕ್ರಮೇಣ ಚೈತನ್ಯದ ಸಪ್ತ ಸ್ತರಗಳ ಅವತರಣವಾಗಿತ್ತು. ಅವುಗಳಲ್ಲಿ ಅವರು ಆನಂದಮಯದ ಅನುಭೂತಿಯನ್ನು ಪಡೆದರೂ, ಸುಪ್ರಮಾನಸದ ಪ್ರಭೆಯನ್ನು ಮಾತ್ರ ಇಳೆಗಿಳಿಸಲು ಸಾಧ್ಯವಾಯಿತು. ಆ ಪ್ರಬಲಶಕ್ತಿಯ ಅವತರಣಕ್ಕೆ ಅವರ ದೇಹವನ್ನೇ ಮಾಧ್ಯಮವನ್ನಾಗಿಸಿರಲು, ಆ ಮೂಲಕ ಅವರ ಚೈತನ್ಯವೂ ಸಹ ಮಹಾಸಮಾಧಿಯಲ್ಲಿ ಲೀನವಾಯಿತು.(1950) ಈ ಮಧ್ಯೆ ಶ್ರೀ ಅರವಿಂದರಿಗೆ ಯಾವಾಗ ದರ್ಶನಗಳ ಮಾಲೆಯು ಸಾಕ್ಷಾತ್ಕಾರವಾಗುತ್ತಾ ಹೋಯಿತೋ ಅವರ ಸಾಹಿತ್ಯ ಕೃಷಿಯೂ ಸಹ ಅದರ ಔನ್ನತ್ಯವನ್ನು ಮುಟ್ಟಿತು. ಅದರಲ್ಲಿ ಕವನಗಳೆಂಬ ಕಿರು ಕಾಲುವೆಗಳು, ಪತ್ರಗಳೆಂಬ ಹಳ್ಳ–ಕೊಳ್ಳಗಳು, ಕಿರುಕಾವ್ಯಗಳೆಂಬ ಕೆರೆಗಳು, ಸಂಶೋಧನಾ ಗ್ರಂಥಗಳೆಂಬ ಸರೋವರಗಳು, ಯೋಗ ಸಾಹಿತ್ಯವೆಂಬ ನದಿಗಳು ಸೇರಿ ಕೊನೆಗೆ ಸಾವಿತ್ರಿ ಎಂಬ ಮಹಾಸಾಗರವು ಮೈದಳೆದು ಘೂರ್ಣಿಸಿತ್ತು. ಸಾವಿತ್ರಿ ಕಾವ್ಯದಲ್ಲಿ ಹೇಳಲಾದ ಎಲ್ಲಾ ಸಂಕೇತಗಳೊಳಗೆ ದಿವ್ಯ ಜೀವನ ಗ್ರಂಥದೊಳಗಿನ ಮೂಲ ಹೊಳಹುಗಳಿವೆ,

ಯೋಗ ಸಮನ್ವಯದ ಧಾರಕ ಶಕ್ತಿಯ ಹಿನ್ನೆಲೆಯಿದೆ, ವೇದ ರಹಸ್ಯದೊಳಗಿನ ಪ್ರತಿಮೆಯ ಪ್ರೇರೇಪಣೆಯಿದೆ, ಭವಿಷ್ಯ ಕಾವ್ಯದೊಳಗಿನ ಛಂದಸ್ಸಿನ ರೂಪವಿದೆ. ಒಟ್ಟಿನಲ್ಲಿ ಅವರ ಎಲ್ಲಾ ಪ್ರಕಾರದ ಸಾಹಿತ್ಯ ಶಿಖರಗಳಿಗೆ ಹಿಮಗಿರಿ ಕೈಲಾಸದಂತಿರುವ ಸಾವಿತ್ರಿಯು ವಿಶ್ವದ ಸರ್ವ ಶ್ರೇಷ್ಠ ಕಾವ್ಯಗಳ ಸಾಲಿನಲ್ಲಿ ಮೊದಲನೇ ಸ್ಥಾನದಲ್ಲಿದೆ ಎಂಬುದಂತೂ ಸತ್ಯ! ಆದರೆ, ಶ್ರೀ ಅರವಿಂದರು ಸಾವಿತ್ರಿಯನ್ನು ಬರೆದು ಮುಗಿಸಿದ ನಂತರ ಹಲವಾರು ವರ್ಷಗಳವರೆಗೆ ಅದನ್ನು ಪರಿಷ್ಕರಿಸುತ್ತಲೇ ಇದ್ದರು. ಕೊನೆ ಕೊನೆಗೆ ಅವರ ಮಹಾಸಮಾಧಿಯ ಕೆಲ ತಿಂಗಳುಗಳ ಹಿಂದಿನವರೆಗೂ ಅದನ್ನು ನವೀನಗೊಳಿಸುತ್ತಲೇ ಇದ್ದರು. ಆದರೆ, ಅವರಿಗೆ ತಮ್ಮ ಉರ್ವಶಿ ಕಾವ್ಯದಲ್ಲೂ ಮುಖ್ಯವಾದೊಂದು ಪರಿಷ್ಕರಣೆಯ ಅವಶ್ಯಕತೆಯಿರುವದನ್ನು ಮನಗಂಡಿದ್ದರು. ಆ ಕಾವ್ಯವು ಆರಂಭವಾಗುವ ಸಮಯಕ್ಕೆ ಪುರೂರವನು ಮೇಲಿನ ಲೋಕಗಳಿಂದ ಇಳಿಗಿಳಿದು ಬರುವ ಸನ್ನಿವೇಶವನ್ನು ಪ್ರಸ್ತಾಪಿಸಲಾಗುತ್ತದೆ. ಆದರೆ, ಅವನು ಊರ್ಧ್ವದ ಯಾವ ಸ್ತರದಿಂದ ಕೆಳಗಿಳಿದು ಬಂದನು ಎಂಬುದನ್ನು ಮಾತ್ರ ಅಲ್ಲಿ ಹೇಳಿರಲಿಲ್ಲ. ಆ ಸಮಯಕ್ಕೆ ಅವರ ಯೋಗ ಜೀವನವಿನ್ನೂ ಆರಂಭವಾಗದಿರುವುದೇ ಅದಕ್ಕೆ ಮೂಲಕಾರಣವಾಗಿರಬಹುದು. ಒಟ್ಟಿನಲ್ಲಿ ಶ್ರೀ ಅರವಿಂದರಿಗೆ ಉರ್ವಶಿ ಕಾವ್ಯದ ಆ ಆರಂಭಿಕ ಸಾಲುಗಳಿಗೆ ಹಿನ್ನೆಲೆಯನ್ನು ನೀಡಲೇಬೇಕೆಂಬ ಅದಮ್ಯ ಅಭೀಪ್ಸೆಯಿದ್ದಿತ್ತು ಎಂಬುದಂತೂ ಸತ್ಯ! ಏಕೆಂದರೆ, ಆ ಹಂತದಲ್ಲಿ ಕಾಳಿದಾಸನೂ ಸಹ ತನ್ನ ಪ್ರಥಮಾಂಕದ ಪ್ರಥಮ ಸಾಲುಗಳಿಗೆ ಬೇಕಿರುವ ಹೆಚ್ಚಿನ ಹಿನ್ನೆಲೆಯ ಮಾಹಿತಿಯನ್ನು ನೀಡಿರಲಿಲ್ಲ. ಬಹುಶಃ ಅವನೋರ್ವ ಕವಿ ಮಾತ್ರನಾಗಿದ್ದರಿಂದ ಅವನಿಂದ ಈ ಸೂಕ್ಷ್ಮವು ಹೊರಬೀಳದೇ ಇರಬಹುದು. ಇದೇ ಓರ್ವ ಕವಿ ಮತ್ತು ಓರ್ವ ದ್ರಷ್ಟಾರರಿಗಿರುವ ವ್ಯತ್ಯಾಸ!

ಇದೇ ಚಿಂತನೆಯಲ್ಲಿದ್ದಾಗ ಸುಮಾರು 1933 ರ ಸಮಯಕ್ಕೆ ಶ್ರೀ ಅರವಿಂದರು ತಮ್ಮ ಊರ್ಧ್ವ ಲೋಕದ ದರ್ಶನಗಳ ಕಾಣ್ಕೆಯಿಂದ ಪುರೂರವಸ್ಸನ ಅವರೋಹಣದ ವರ್ಣನೆಯನ್ನು ತಿಳಿಸಲೆಂದು ಈ ಕವನವನ್ನು ರಚಿಸಿದರು. ಸಾವಿತ್ರಿ ಮಹಾಕಾವ್ಯದ ಎರಡನೇ ಪುಸ್ತಕದಲ್ಲಿ ಲೋಕ ಲೋಕಗಳ ಯಾತ್ರಿಕನಾದ ಅಶ್ವಪತಿಯ ಅನ್ನಮಯದಿಂದ ಸುಪ್ರಮಾನಸದೊರೆಗಿನ ಆರೋಹಣವನ್ನು ತೋರಿಸಲಾಗುತ್ತದೆ. ಮುಂದೆ ಸಾವಿತ್ರಿಯ ಯಾನದ ಸಂದರ್ಭದಲ್ಲಿ ಸುಪ್ರಮಾನಸವನ್ನೂ ದಾಟಿ

ಆನಂದಮಯದ ಅನುಭೂತಿಯನ್ನು ಪ್ರಸ್ತುತಪಡಿಸಲಾಗುತ್ತದೆ. ಆದರೆ ಇಲ್ಲಿ ಅದಕ್ಕೆ ವ್ಯತಿರಿಕ್ತವಾಗಿ ಪುರೂರವಸ್ಸನ ಅವರೋಹಣದ ಪಯಣವನ್ನು ತೋರಿಸಲಾಗಿದೆ. ಉರ್ವಶಿ ಕವನದ ಆರಂಭದಲ್ಲಿನ ಪುರೂರವಸ್ಸನ ಆಗಮನದ ಮೂಲದ ಕುರಿತಾದ ಸಮಸ್ಯೆಗೆ ಇಲ್ಲಿ ಸೂಕ್ತ ಉತ್ತರವನ್ನು ನೀಡುತ್ತಾರೆ. ಅದರ ಪ್ರಕಾರ ಇಲ್ಲಿ ಪುರೂರವಸ್ಸನು ನೇರ ಆನಂದಮಯದಿಂದಲೇ ಮರ್ತ್ಯಕ್ಕಿಳಿದು ಬರುವ ಸಾಹಸ ಯಾತ್ರೆಯನ್ನು ಅತಿ ಸಂಕ್ಷಿಪ್ತವಾಗಿ ಹೇಳಲಾಗುತ್ತದೆ. ಹಾಗೆ ನೋಡಿದರೆ ಈ ಒಂದು ಅವರೋಹಣದ ಯಾನವು ಪುರೂರವಸ್ಸನದೊಬ್ಬನದೇ ಅಲ್ಲ. ಬದಲಿಗೆ ಔನ್ನತ್ಯದ ಆಯಾಮದಿಂದ ಇಳಿಗಿಳಿದು ಬಂದ ನಮ್ಮೆಲ್ಲರ ಅವರೋಹಣದ ಕಥೆಯೂ ಇದೇ ಆಗಿದೆ. ಅಲ್ಲಿ ಪುರೂರವಸ್ಸನ ಬದಲಿಗೆ ಇಡೀ ಮರ್ತ್ಯ ಕುಲವನ್ನೇ ಆರೋಪಿಸಿ ನೋಡಬಹುದು. ಏಕೆಂದರೆ, ಮರ್ತ್ಯದ ಪ್ರತಿಯೊಂದು ಸ್ಥೂಲ ಕಾರ್ಮಣನೂ ಸಹ ಆ ಆನಂದಮಯದ ಪ್ರಜ್ಞಾವಲಯದಿಂದಲೇ ಹಂತಹಂತವಾಗಿ ಒಂದೊಂದೇ ಸ್ತರಗಳನ್ನು ಅವರೋಹಿಸುತ್ತಾ, ಪಂಚ ಕೋಶಗಳ–ಸಪ್ತ ಸ್ತರಗಳ ಮಂಡಲವನ್ನು ಹಿಂದಿಕ್ಕಿ ಇಳೆಗೆ ಬಂದಿಳಿದಿರುತ್ತಾನೆ. ಇದು ಬರೀ ಒಂದು ಕವನವಲ್ಲ ಬದಲಿಗೆ ಇದೊಂದು ಮಂತ್ರವಾಗಿದೆ. ಭೂಮದಿಂದ ಬುವಿಯೆಡೆಗೆ ನೆಟ್ಟ ವಿಶ್ವ ಶ್ರೇಣಿಗಳನ್ನು ಸೂಕ್ಷ್ಮದಲಿ ಪರಿಚಯಿಸುವ ಸೂತ್ರವಾಗಿದೆ. ಈ ಸೂತ್ರವನ್ನು ಬಿಡಿಸುತ್ತಾ ಹೋದಂತೆ ವಿಶ್ವದ ಪ್ರತಿಯೊಂದು ಸ್ತರವನ್ನು ದರ್ಶಿಸಬಹುದು. ಹಾಗಾಗಿಯೆ ಇದನ್ನು ಮಂತ್ರ ರೂಪದಲ್ಲಿ ಅವಗಾಹನೆಗೆ ತೆಗೆದುಕೊಳ್ಳಬೇಕು. ಇದುವೇ ಈ ಕವನದ ಅಸ್ತಿತ್ವವಾಗಿದೆ–ಅಸ್ಮಿತೆಯಾಗಿದೆ.

(ಸಶೇಷ)

# ಶ್ರೀ ಅರವಿಂದರ
# 'ಗೀತಾ ಪ್ರಬಂಧಗಳು'

**– ಅನು: ಜಾನ್ವಿ**

## 34

## ಎರಡನೆಯ ಸರಣಿ:
## ಭಾಗ–1
## ಜ್ಞಾನ, ಭಕ್ತಿ ಮತ್ತು ಕರ್ಮಗಳ ಸಮನ್ವಯ
## ಅಧ್ಯಾಯ – 1
## ದ್ವಿವಿಧ ಪ್ರಕೃತಿ (1/3)

ಭಗವಂತನು ತನ್ನ ಉನ್ನತ ಪ್ರಕೃತಿಯ ಶಕ್ತಿಯ ಮೂಲಕ ಹೇಗೆಲ್ಲ ಮತ್ತು ಏನೆಲ್ಲವನ್ನು ಸೃಷ್ಟಿಸುತ್ತಾನೆ, ಪ್ರಕಟನೆಯಲ್ಲಿ ತರುತ್ತಾನೆ ಎಂಬುದನ್ನು ಗೀತೆಯಲ್ಲಿ ಅನೇಕ ಸಂದರ್ಭಗಳಲ್ಲಿ ಹೇಳಿರುವುದನ್ನು ನೋಡಿದರೆ ನಮಗೆ ಸ್ಪಷ್ಟವಾಗುವುದೇನೆಂದರೆ ಸಜೀವ ಹಾಗೂ ನಾವು ನಿರ್ಜೀವ ಎಂದು ಭಾವಿಸಿರುವ ಸಮಸ್ತ ವಸ್ತುಗಳಲ್ಲಿ ಅವನು ಹೇಗೆ ವಾಸವಾಗಿದ್ದಾನೆ ಮತ್ತು ಹೇಗೆ ಕಾರ್ಯ ಮಾಡುತ್ತಾನೆ ಎಂಬುದು ಸ್ಪಷ್ಟವಾಗುತ್ತದೆ. ನಾವು ಅವುಗಳನ್ನು ಸ್ವಲ್ಪ ಬಿಡಿಸಿ, ಬಿಚ್ಚಿ ನೋಡಬೇಕು; ಏಕೆಂದರೆ ಆ ಎಲ್ಲ ಪರಿಕಲ್ಪನೆಗಳು ಸ್ವಲ್ಪ ಮುಕ್ತವಾಗಿದ್ದು, ಸ್ವಚ್ಛಂದವಾಗಿದ್ದು ಕಾವ್ಯಮಯವಾಗಿವೆ, ಅವುಗಳನ್ನು ತಾತ್ವಿಕ ಚಿಂತನೆಯ ಕ್ರಮದಲ್ಲಿ ಸರಿಯಾಗಿ ಜೋಡಿಸಿ ಓದಬೇಕಾಗುತ್ತದೆ, ಅಧ್ಯಯನ ಮಾಡಬೇಕಾಗುತ್ತದೆ. ಮೊದಲ ತತ್ತ್ವವೇನೆಂದರೆ, ದೈವೀ ಶಕ್ತಿಯು ಅಥವಾ ಸಾನಿಧ್ಯವು ವಸ್ತು ಅಥವಾ ದ್ರವ್ಯದ ಐದು ಪ್ರಾಥಮಿಕ ಅವಸ್ಥೆಗಳಲ್ಲಿ ಕಾರ್ಯವನ್ನು ಅಧಿಕೃತಗೊಳಿಸುತ್ತದೆ. "ನಾನು ನೀರಿನಲ್ಲಿರುವ ರಸ (ರುಚಿ), ಆಕಾಶದಲ್ಲಿ ಇರುವ ಶಬ್ದ, ಅಗ್ನಿಯಲ್ಲಿರುವ ಬೆಳಕಿನ ಶಕ್ತಿ" ಹೀಗೆ ಹೇಳುವಾಗ ಇದನ್ನು ಪೂರ್ಣ ಹೇಳಿಕೆಯನ್ನಾಗಿಸಲು "ವಾಯುವಿನಲ್ಲಿರುವ ಸ್ಪರ್ಶ ಅಥವಾ ಸಂಪರ್ಕ" ಎಂದು ಹೇಳಬಹುದು. ಅರ್ಥಾತ್ ಪುರುಷೋತ್ತಮನೇ ತನ್ನ ಪರಾಪ್ರಕೃತಿಯ ರೂಪದಲ್ಲಿ ಶಕ್ತಿಯಾಗಿದ್ದಾನೆ. ಎಲ್ಲ ಇಂದ್ರಿಯಾತ್ಮಕ ಸಂಬಂಧಗಳ ಮೂಲದಲ್ಲಿಯೂ ಅವನೇ ಇದ್ದಾನೆ. ಇದನ್ನೇ ಪುರಾತನ ಸಾಂಖ್ಯ ದರ್ಶನದ ಪ್ರಕಾರ, ಆಕಾಶ, ಬೆಳಕು, ಪ್ರಭೆ, ವಿದ್ಯುತ್, ಅನಿಲ ಹಾಗೂ ದ್ರವ, ಇನ್ನಿತರ ಮೂಲ ದ್ರವ್ಯ ಅವಸ್ಥೆಗಳೆಲ್ಲವೂ ಪರಿಮಾಣಾತ್ಮಕವಾಗಿವೆ

(Quantitative) ಅಥವಾ ನಿಮ್ನ ಪ್ರಕೃತಿಯಲ್ಲಿ ದ್ರವ್ಯ(ದ್ರವ)ಗಳ ಮೂಲಭೂತ ಭೌತಿಕ ರೂಪಗಳಾಗಿವೆ. ಐದು ತನ್ಮಾತ್ರಗಳು, ಸ್ಪರ್ಶ, ರುಚಿ, ಗಂಧ ಮತ್ತು ಉಳಿದವುಗಳು ಗುಣಾತ್ಮಕ ದ್ರವ್ಯಗಳಾಗಿವೆ (Qualitative). ಈ ತನ್ಮಾತ್ರಗಳು ಸೂಕ್ಷ್ಮತಮ ಶಕ್ತಿಗಳಾಗಿವೆ. ಇವು ಸಂವೇದನಾಶೀಲ ಪ್ರಜ್ಞೆಯನ್ನು ಭೌತಿಕ ದ್ರವ್ಯದ ಸ್ಥೂಲ ರೂಪದ ಜೊತೆ ಸಂವಹನ ಮಾಡುವಂತೆ ಮಾಡುತ್ತವೆ; ಇದೇ ಸಮಗ್ರ ಭೌತ ಜಗದ ಅರಿವಿನ ಆಧಾರವಾಗಿದೆ. ಭೌತಿಕದ ದೃಷ್ಟಿಯಿಂದ ನೋಡಿದರೆ ಭೌತ ದ್ರವ್ಯವು ಸತ್ಯ ಹಾಗೂ ಸಂವೇದನಾತ್ಮಕ ಸಂಬಂಧವು ಅದರ ವ್ಯುತ್ಪನ್ನವಾಗಿದೆ.

ಆದರೆ, ಆಧ್ಯಾತ್ಮಿಕ ದೃಷ್ಟಿಯಿಂದ ನೋಡಿದರೆ ಸತ್ಯವು ಇದರ ವಿಪರೀತವಾಗಿದೆ. ಭೌತ ದ್ರವ್ಯ ಮತ್ತು ಭೌತಿಕ ಮಾಧ್ಯಮಗಳೇ ನಿಜವಾಗಿ ವ್ಯುತ್ಪನ್ನಗಳಾಗಿದ್ದು (driveative), ಮೂಲದಲ್ಲಿ ಅವು ಪ್ರಕೃತಿಯ ಕಾರ್ಯ, ಕಾರ್ಯ ವಿಧಾನ ಹಾಗೂ ಗುಣಗಳು ಜೀವನ ಸಂವೇದನಾಶೀಲ ಪ್ರಜ್ಞೆಗೆ (ಇಂದ್ರಿಯ ಸಂವೇದನೆಗೆ) ತೋರುವ ರೂಪಗಳಾಗಿವೆ. ಮೂಲ ಹಾಗೂ ಏಕೈಕ ಶಾಶ್ವತ ಸತ್ಯವೇನೆಂದರೆ ಅದು ಪ್ರಕೃತಿಯ ಶಕ್ತಿ, ಸತ್ತೆಯ (ಅಥವಾ ಜೀವಿಯ ಇರುವಿಕೆಯ) ಶಕ್ತಿ ಮತ್ತು ಗುಣವಾಗಿದ್ದು, ಆ ಸತ್ಯವೇ ಇಂದ್ರಿಯಗಳ ಮೂಲಕ ಜೀವಿಗೆ ಈ ರೂಪದಲ್ಲಿ ವೇಧ್ಯವಾಗುವುದು. ಇಂದ್ರಿಯಗಳಲ್ಲಿ ಇರುವ ಬಹು ಮುಖ್ಯ ಶಾಶ್ವತ ಗುಣವೇನೆಂದರೆ ಆಧ್ಯಾತ್ಮಿಕವಾದ, ಅತ್ಯಂತ ಸೂಕ್ಷ್ಮವಾಗಿರುವ ಈ ಮೂಲಭೂತ ಅಲೌಕಿಕ ಅಸ್ತಿತ್ವದ ಶಾಶ್ವತ ಗುಣಾತ್ಮಕತೆ ಮತ್ತು ಶಕ್ತಿಯೇ ಆಗಿದೆ. ಈ ಶಕ್ತಿ ಅಥವಾ ಪ್ರಕೃತಿಯ ಅಸ್ತಿತ್ವದ ಶಕ್ತಿಯು ವಾಸ್ತವವಾಗಿ ಈಶ್ವರನೇ ಆಗಿದ್ದು ಪ್ರಕೃತಿಯ ರೂಪದಲ್ಲಿ ಈ ರೀತಿ ತೋರುತ್ತಿರುತ್ತಾನೆ. ಪ್ರತಿಯೊಂದು ಇಂದ್ರಿಯವೂ ಮೂಲತಃ ಶುದ್ಧ ರೂಪದಲ್ಲಿ ಪ್ರಕೃತಿಯೇ ಆಗಿದೆ, ಪ್ರತಿ ಇಂದ್ರಿಯ ಹಾಗೂ ಅದರ ಅರ್ಥೈಕೆ ಕೂಡ ದಿವ್ಯವಾಗಿದೆ, ಈಶ್ವರನ ಕ್ರಿಯಾಶೀಲ ಚಿತ್‌ಶಕ್ತಿಯೇ ಆಗಿದೆ.

ಇದನ್ನು ನಾವು ಇನ್ನೂ ಮುಂದಿನ ದೃಷ್ಟಾಂತಗಳಲ್ಲಿ ವಿವರವಾಗಿ ನೋಡಬಹುದಾಗಿದೆ. “ನಾನು ಸೂರ್ಯ ಚಂದ್ರರ ಬೆಳಕು, ಪ್ರಭೆ, ಮಾನವರಲ್ಲಿನ ಪೌರುಷ ನಾನು, ಬುದ್ಧಿವಂತರಲ್ಲಿರುವ ಬುದ್ಧ ನಾನು, ತೇಜಸ್ವಿ ಪುರುಷರ ತೇಜಸ್ವಿ ನಾನು, ಬಲಶಾಲಿಗಳ ಬಲವೇ ನಾನು, ತಪಸ್ವಿಗಳ ತಪಸ್ಸು, ತಪಶ್ಶಕ್ತಿ ನಾನೇ” (7/8–11) ಈ ದೃಷ್ಟಾಂತಗಳಲ್ಲಿ ಪ್ರತಿಯೊಂದರಲ್ಲೂ ಈಶ್ವರೀ ಶಕ್ತಿಯ ಉಪಸ್ಥಿತಿಯನ್ನು ತೋರಿಸುವ ವಿಶೇಷ ಗುಣ, ಗುರುತು ಹೇಳುತ್ತ ಆ ವಿಶೇಷತ್ವವು

ತನ್ನದೇ ಅಥವಾ ಈಶ್ವರನದೇ ಗುಣಶಕ್ತಿ ಎಂಬುದನ್ನು ಸ್ಪಷ್ಟ ಪಡಿಸಲಾಗಿದೆ. "ಸರ್ವ ವೇದಗಳಲ್ಲಿ ನಾನು ಓಂಕಾರ (ಪ್ರಣವ)" (7/8) ಈ ವಚನವನ್ನು ನೋಡಿದರೆ, ಶ್ರುತಿಗಳಲ್ಲಿ ಹೇಳಿದಂತೆ ಸಮರ್ಥ ನಿರ್ಮಾಣ ಕ್ಷಮ ಧ್ವನಿಯಾಗಿರುವ ಪ್ರಣವವು ಎಲ್ಲದರ ಮೂಲಭೂತ ಆಧಾರವಾಗಿದೆ, ಸೃಷ್ಟಿಯ ತಳಹದಿಯಾಗಿದೆ. ಈ ಶಬ್ದವು ಅಥವಾ ವಾಣಿಯು ಎಲ್ಲ ಭಾಷೆಗಳ ಮೂಲ ಅಕ್ಷರವಾಗಿದೆ. ಓಂಕಾರವು ವಾಕ್ ಮತ್ತು ಧ್ವನಿ ಶಕ್ತಿಯ ವಿಶ್ವಾತ್ಮಕ ಸೂತ್ರವಾಗಿದೆ, ರಚನೆಯಾಗಿದೆ. ಅದು ಎಲ್ಲ ಶಬ್ದ, ಮಾತು, ಅಕ್ಷರ, ನುಡಿ, ಭಾಷೆ ಹಾಗೂ ಇನ್ನಿತರ ಸಮಸ್ತ ಧ್ವನಿಗಳನ್ನು ಒಳಗೊಂಡಿದೆ, ಸಮೀಕರಿಸುತ್ತದೆ, ಕ್ರೋಢೀಕರಿಸುತ್ತದೆ, ಸಮನ್ವಯಗೊಳಿಸುತ್ತದೆ ಹಾಗೂ ಎಲ್ಲ ಆಧ್ಯಾತ್ಮಿಕ ಶಕ್ತಿಗಳನ್ನು ವ್ಯಕ್ತಗೊಳಿಸುತ್ತದೆ. ಅದರ ಮೂಲಕವೇ ಸಮಸ್ತ ಶಬ್ದ ಜಗತ್ತು ವಿಕಾಸ ಹೊಂದುತ್ತದೆ. ಇದರ ಮೇಲಿಂದ ಸ್ಪಷ್ಟವಾಗುವುದೇನೆಂದರೆ ಈ ವಿಕಾಸವು ಕೇವಲ ಭೌತಿಕ ಇಂದ್ರಿಯಗಳ ಅಥವಾ ಪ್ರಾಣ, ಬುದ್ಧಿ, ವಿವೇಕ, ಶಕ್ತಿ, ಸಾಮರ್ಥ್ಯ, ಮಾನವತೆ, ಸನ್ಯಾಸದ ಶಕ್ತಿ ಇವೇ ಪರಾಪ್ರಕೃತಿಯ ಭಾಗಗಳು, ವಿಶೇಷತೆಗಳು ಎಂದು ಅರ್ಥವಲ್ಲ, ಆಧ್ಯಾತ್ಮಿಕ ಅಥವಾ ಆತ್ಮ ಶಕ್ತಿಯಲ್ಲಿ ಅವಶ್ಯವಾಗಿ, ಸತ್ವರೂಪದಲ್ಲಿರುವ ಪ್ರಕೃತಿಯೇ ಅದಾಗಿದ್ದು, ಅದೇ ಸ್ವಭಾವವನ್ನು ನಿರೂಪಿಸುವಂಥದಾಗಿದೆ. ಪ್ರಕಟವಾಗುವ ಆತ್ಮ ಚೈತನ್ಯದ ಬಲವೇ ಅದು, ಪ್ರಜ್ಞೆಯ ಬೆಳಕೇ ಅದು, ಪ್ರತಿ ವಸ್ತುವಿನಲ್ಲಿ ಬರುವ ಶಕ್ತಿ ಸಾಮರ್ಥ್ಯವು ಮೂಲ ಶುದ್ಧ ರೂಪದಲ್ಲಿ ಪ್ರಕಟವಾಗುವುದೇ ಅದರ ರೂಪ, ಅದೇ ಅದರ ಮೂಲ ಶುದ್ಧ ಸ್ವಭಾವ. ಆ ಶಕ್ತಿ, ಬೆಳಕು, ಸಾಮರ್ಥ್ಯವು ಶಾಶ್ವತವಾದುದು, ಅದರ ಮೂಲಕವೇ ಎಲ್ಲವೂ ಬೆಳೆಯುವುವು, ಪ್ರಕಟವಾಗುವುವು, ವಿಕಾಸವಾಗುವುದು, ಎಲ್ಲವೂ ಅದರ ವೈವಿಧ್ಯಮಯ ಸ್ವರೂಪಗಳೇ ಆಗಿವೆ. ಈ ಹಂತದಲ್ಲಿ ಗೀತೆಯು ಹೀಗೆ ಸರ್ವ ಸಮಾವೇಶಕ ಸಮಾರೋಪಕ ಮಾತನ್ನು ಹೇಳುತ್ತದೆ – "ಅರ್ಜುನ, ಸಮಸ್ತ ಭೂತಗಳ (ಜೀವಿಗಳ) ಸನಾತನ ಬೀಜವೇ ನಾನಾಗಿದ್ದೇನೆ, ಎಂಬುದನ್ನು ಅರಿತುಕೋ" (7/10) ಇದು ಶಾಶ್ವತವಾದ ಬೀಜವು, ಅಂದರೆ ಆಧ್ಯಾತ್ಮಿಕ ಅಸ್ತಿತ್ವದ ಶಕ್ತಿಯಾಗಿದೆ, ಪುರುಷೋತ್ತಮನ ಪ್ರಜ್ಞಾಯುಕ್ತ ಇಚ್ಛೆಯಾಗಿದೆ, ಪುರುಷೋತ್ತಮನು ಈ ಬೀಜವನ್ನು ಬ್ರಹ್ಮನಲ್ಲಿ ಹಾಕುತ್ತಾನೆ, ಅತಿಮಾನಸ ವೈಶಾಲ್ಯದಲ್ಲಿ ನೆಡುತ್ತಾನೆ. ಅದರಿಂದಲೇ ಸಮಸ್ತ ದೃಶ್ಯ ಪ್ರಪಂಚವು ಸೃಷ್ಟಿಯಾಗುತ್ತದೆ. ಇದೇ ಸಮಸ್ತ ಸೃಷ್ಟಿಯ ಜೀವರಾಶಿಗಳಲ್ಲಿ ಸಾರಭೂತ ಆತ್ಮ ತತ್ತ್ವವಾಗಿದ್ದು, ಬೀಜ ರೂಪದಲ್ಲಿ ಇರುತ್ತ ಆಯಾ ಜೀವಿಯ ಸ್ವಭಾವವನ್ನು ರೂಪಿಸುವುದು.

ಈ ಮೂಲಭೂತ ಅವಶ್ಯಕ ಗುಣದ ಶಕ್ತಿ ಮತ್ತು ನಿಮ್ನ ಪ್ರಕೃತಿಯ ವೈವಿಧ್ಯಮಯ ಸೃಷ್ಟಿಯ ನಡುವೆ, ವಸ್ತುವಿನ ಮೂಲ ಸ್ವರೂಪದ ಶುದ್ಧತೆ ಮತ್ತು ಅದರ ತೋರಿಕೆಯ ನಡುವೆ ಸಾಕಷ್ಟು ಅಂತರವಿರುತ್ತದೆ. ವ್ಯಾವಹಾರಿಕವಾಗಿ ಇದು ಅವಶ್ಯ ಕೂಡ. ಆ ಅಂತರವನ್ನು ಈ ಅಧ್ಯಾಯಗಳ ಕೊನೆಯಲ್ಲಿ ಸ್ಪಷ್ಟವಾಗಿ ತೋರಿಸಿ ಕೊಡುತ್ತ ಹೀಗೆ ಹೇಳಿರುವುದನ್ನು ನೋಡಬಹುದು. "ಇಷ್ಟಾನಿಷ್ಟ ಹಾಗೂ ಆಶೆಗಳಿಂದ ದೂರವಾಗಿರುವ ಕರ್ಮಗಳನ್ನು ಮಾಡುವ ವ್ಯಕ್ತಿಯ ನಿಜವಾದ ಶಕ್ತಿಯು ನಾನೇ" ಇಲ್ಲಿ ಕರ್ಮ ಹಾಗೂ ಕರ್ಮ ಫಲದ ಮೋಹದಿಂದ ಮಾಡಿದ ಕೆಲಸವನ್ನಲ್ಲ ಬದಲಾಗಿ ನಿರಪೇಕ್ಷ ಭಾವದಿಂದ ಮಾಡುವ ಕರ್ಮಗಳನ್ನು ಕುರಿತು ಹೇಳಿದೆ. "ಧರ್ಮವಿರುದ್ಧ ಕರ್ಮ ಮಾಡುವ ವ್ಯಕ್ತಿಯ ಅಭೀಪ್ಸೆಯ ಶಕ್ತಿ ಕೂಡ ನಾನೇ" (7–11) ಎಂದು ಕೃಷ್ಣನು ಸ್ಪಷ್ಟವಾಗಿ ಹೇಳಿದ್ದಾನೆ. ಇನ್ನು ಪ್ರಕೃತಿಯ ಅಮುಖ್ಯ ಅಥವಾ ದ್ವಿತೀಯ ದರ್ಜೆಯ ವ್ಯಕ್ತಿ ನಿಷ್ಠ ಅನುಭವದಂತೆ ಭಾವಗಳು (ಅಂದರೆ ಮನಸ್ಸಿನ ಸ್ಥಿತ್ಯಂತರಗಳು, ಬಯಕೆ, ಕಾಮನೆ, ಆಶೆಗಳು, ಆ ವೇಗದ ಚಲನೆಗಳು, ಇಂದ್ರಿಯಗಳ ಪ್ರತಿಕ್ರಿಯೆ, ತರ್ಕದ ಸೀಮಿತ ಹಾಗೂ ದ್ವಂದ್ವ ಚಲನೆ, ಅನಿಸಿಕೆ ಹಾಗೂ ನೈತಿಕ ಭಾವನೆಗಳ ಚಲನೆಗಳು) ತ್ರಿಗುಣಾತ್ಮಕವಾಗಿವೆ, ಸಾತ್ವಿಕವೋ ರಾಜಸಿಕವೋ ತಾಮಸಿಕವೋ ಆಗಿವೆ. ಉನ್ನತವಾದ ಆಧ್ಯಾತ್ಮಿಕ ಪ್ರಕೃತಿಯಂತೂ ನೇರವಾಗಿ ಕಾರ್ಯ ಮಾಡುವುದಿಲ್ಲ. ಎಲ್ಲವೂ ನಡೆಯುವುದು ತ್ರಿಗುಣಗಳ ಆಟದಿಂದಲೇ. "ಇವೆಲ್ಲವೂ ಉತ್ಪನ್ನವಾಗುವುದು ನನ್ನಿಂದಲೇ, ಅವುಗಳಿಗೆ ನನ್ನ ಹೊರತು ಬೇರೆ ಯಾವ ಉಗಮ ಸ್ಥಾನವೂ ಇಲ್ಲ. ನಾನು ಅವುಗಳಲ್ಲಿ ಇಲ್ಲ, ಆದರೆ ಆ ಎಲ್ಲವೂ ನನ್ನೊಳಗೆಯೇ ಇವೆ ಎಂಬುದನ್ನು ತಿಳಿದುಕೋ" (7/12) ಇವುಗಳ ನಡುವೆ ಅತಿ ಗಟ್ಟಿಯಾದ, ಪ್ರಬಲವಾದ ಆದರೂ ಸೂಕ್ಷ್ಮವಾದ ಅಂತರವಿದೆ. ಕೃಷ್ಣನು ಸ್ಪಷ್ಟವಾಗಿ ಹೇಳುತ್ತಾನೆ: "ನಾನೇ ಈ ಜಗದ ಬೆಳಕು, ಜಾಗೃತ ಪ್ರಜ್ಞೆ, ಶಕ್ತಿ, ಆಶೆ, ಬಯಕೆ, ಸಾಮರ್ಥ್ಯ, ಬಲ, ಬುದ್ಧಿ ಎಲ್ಲವೂ ನಾನೇ, ಇವೆಲ್ಲವೂ ನನ್ನಿಂದಲೇ ಜನ್ಮತಾಳುತ್ತವೆ, ಅವುಗಳ ಉಗಮ ಸ್ಥಾನ ನಾನೇ. ಅವೆಲ್ಲವೂ ನನ್ನೊಳಗೆ ಇವೆ" ಭಗವಂತನ ಈ ವಚನಗಳ ಹಿನ್ನೆಲೆಯಲ್ಲಿಯೇ ನಾವು ಗೀತೆಯನ್ನು ಅರ್ಥೈಸಬೇಕಾಗುತ್ತದೆ. ಉನ್ನತ ಹಂತದಿಂದ ನಿಮ್ನ ಹಂತಕ್ಕೆ ಹೇಗೆ ಅವರೋಹಣವಾಗುತ್ತವೆ ಮತ್ತು ಪುನಃ ನಿಮ್ನದಿಂದ ಉನ್ನತಕ್ಕೆ ಹೇಗೆ ಆರೋಹಣ ಗೈಯುತ್ತವೆ ಎಂಬುದನ್ನು ಇದೇ ಆಧಾರದ ಮೇಲಿಂದಲೇ ಗ್ರಹಿಸಬೇಕಾಗುತ್ತದೆ.

ಭಗವಂತನ ಮೊದಲಿನ ಹೇಳಿಕೆಯೇನೂ ಕಠಿಣವಿಲ್ಲ, ಸುಲಭವಾಗಿ ಅರ್ಥವಾಗುತ್ತದೆ. ಬಲಿಷ್ಠನಾದ ವ್ಯಕ್ತಿಯು, ತಾತ್ವಿಕವಾಗಿ ಅವನ ಶಕ್ತಿಯು ದೈವಿಕವೇ ಆಗಿದೆ ಎಂದರೂ, ಆಶೆ, ಕಾಮನೆ, ಮೋಹಗಳಿಗೆ ಬಲಿಯಾಗುತ್ತಾನೆ, ಪಾಪ ಕರ್ಮ ಮಾಡುತ್ತಾನೆ, ಪುಣ್ಯ ಕರ್ಮ ಮಾಡಲು ಒದ್ದಾಡುತ್ತಾನೆ. ಹೀಗೆ ಏಕೆ ಎಂದರೆ, ಅವನು ಮಾಡುವ ಎಲ್ಲ ಕರ್ಮಗಳೂ ತ್ರಿಗುಣಾತ್ಮಕವೇ ಆಗಿದ್ದು, ಉನ್ನತ ಪ್ರಕೃತಿ ಅವುಗಳ ಮೇಲೆ ಕೆಲಸ ಮಾಡುವುದಿಲ್ಲ, ಅವನ ಮೂಲ ದೈವೀ ಸ್ವಭಾವ ಇಲ್ಲಿ ಕೆಲಸ ಮಾಡುವುದಿಲ್ಲ. ಇಂಥ ಯಾವ ಕರ್ಮಗಳಿಂದಲೂ ಅವನ ದೈವೀ ಶಕ್ತಿಗೆ ಯಾವ ಬಾಧೆಯೂ ಆಗುವುದಿಲ್ಲ. ಏನೇ ಆಗಲಿ, ಎಷ್ಟೇ ವ್ಯತಿರಿಕ್ತ ನಡೆ, ದೋಷ, ತಪ್ಪು ಸಂಭವಿಸಲಿ ಅದು ಮಾತ್ರ ಸಾರಭೂತವಾಗಿ ಒಂದೇ ರೀತಿಯಾಗಿ ಇರುತ್ತದೆ. ಭಗವಂತನು ಅವನ ದೈವೀ ಪ್ರಕೃತಿಯಲ್ಲಿದ್ದುಕೊಂಡು, ಎಂಥದೇ ಗೊಂದಲ, ಅನುಮಾನ ಸಂದರ್ಭ ಇದ್ದರೂ, ನಿಮ್ಮ ಪ್ರಕೃತಿಯ ಚಲನೆಗಳು ಏನೇ ಇದ್ದರೂ ಅವನಿಗೆ ಸಹಾಯ ನೀಡಿ, ಅವನು ಪುನಃ ಎಲ್ಲವನ್ನೂ ಅರಿತುಕೊಂಡು ತನ್ನ ಜೀವನವನ್ನು ಅದರ ಜ್ಞಾನದಲ್ಲಿ ಬೆಳಗಿಸಿಕೊಂಡು, ತನ್ನ ಸಂಕಲ್ಪ ಹಾಗೂ ಕಾರ್ಯಗಳನ್ನು ದೈವೀ ಸಂಕಲ್ಪದಡಿಯಲ್ಲಿ ನಡೆಸಿಕೊಂಡು ಹೋಗುವಂತೆ ಮಾಡುತ್ತದೆ, ಅವನಿಗೆ ಅವಶ್ಯ ಸಹಾಯ, ಬಲ ನೀಡುತ್ತದೆ. ಆದರೆ ಈ ಕಾಮ, ಆಶೆ ಅನ್ನುವುದು ದೈವಿಕವಾಗಿರಲು ಹೇಗೆ ಸಾಧ್ಯ? ಏಕೆಂದರೆ, ನಮ್ಮ ಕಾಮನೆ, ಬಯಕೆ ಇವೆಲ್ಲ ನಮ್ಮ ಶತ್ರುಗಳು, ನಿಮ್ಮ ಪ್ರಕೃತಿಯ ಪ್ರವೃತ್ತಿಗಳು “ರಜೋಗುಣ ಸಮುದ್ಭವಃ” ಎಂಬ ನೈತಿಕ ನಂಬಿಕೆ, ಧೋರಣೆ ನಮ್ಮ ಸಮಾಜದಲ್ಲಿ ವ್ಯಾಪಕವಾಗಿ ಹರಡಿದೆ. ಅಂತೆಯೇ ಸುಮಾರಾಗಿ ನಾವೆಲ್ಲರೂ ನೈತಿಕತೆ, ತಪ್ಪು–ಒಪ್ಪು, ಒಳ್ಳೆಯದು–ಕೆಟ್ಟದ್ದು ಎಂದು ಭೇದ ಕಲ್ಪಿಸಿಯೇ ಮಾತನಾಡುತ್ತೇವೆ. ಆಧ್ಯಾತ್ಮ ಒಂದೇ ಧರ್ಮಪರ ಎಂಬ ಸಾಮಾಜಿಕ ಕಲ್ಪನೆಯ ಭೂತ ನಮ್ಮನ್ನು ಕಟ್ಟಿಹಾಕಿ ಬಿಟ್ಟಿದೆ.

ಆಧ್ಯಾತ್ಮಿಕ ಕಾಮವು ಒಳ್ಳೆಯ ಆಶೆ, ಅದು ನೈತಿಕ, ಅದು ಸಾತ್ವಿಕ ಇಚ್ಛೆ ಎಂಬ ನಂಬಿಕೆ ಜನರಲ್ಲಿ ವ್ಯಾಪಕವಾಗಿದೆ. ಏಕೆಂದರೆ ಒಳ್ಳೆಯದು ಅಥವಾ ಸದ್ಗುಣವು ಯಾವಾಗಲೂ ಸಾತ್ವಿಕವಾಗಿರುತ್ತದೆ ಎಂದೇ ಬಹಳ ಜನ ತಿಳಿದುಕೊಂಡಿದ್ದಾರೆ. ಆದರೆ ಇದೇ ಪರಮ ಸತ್ಯವೆಂದು ಹೇಳಲು ಸಾಧ್ಯವಾಗುವುದಿಲ್ಲ; ಗೀತೆಯ ಮುಂದಿನ ಸಾಲಿನಲ್ಲಿಯೇ ಎಲ್ಲ ಸಾತ್ವಿಕ ಬಯಕೆಗಳೂ ಸಾತ್ವಿಕವಾಗಿರುವುದಿಲ್ಲ

ಎಂದು ಸ್ಪಷ್ಟವಾಗಿ ಹೇಳಲಾಗಿದೆ. ಬಯಕೆಗಳು ನಿಮ್ಮ ಪ್ರಕೃತಿಯ ಗುಣಗಳು, ಅವುಗಳನ್ನು ದೈವಿಕ ಚಲನೆಗಳೆಂದು ಭಾವಿಸಲಾಗುವುದಿಲ್ಲ. ಪಾಪ ಕರ್ಮವನ್ನಂತೂ ಬಿಡಲೇ ಬೇಕು, ಭಗವಂತನ ಹತ್ತಿರ ಪರಮಾತ್ಮನ ಬಳಿ ಸಾರಬೇಕೆಂದವರು ಪಾಪ ಕರ್ಮಗಳನ್ನು ತೊರೆಯಬೇಕು. ಆದರೆ ಅಷ್ಟೇ ಅಲ್ಲ, ದಿವ್ಯತೆಯಲ್ಲಿ ಪ್ರವೇಶ ಪಡೆಯಬೇಕಾದರೆ ಸದ್ಗುಣ ಅಥವಾ ಸಾತ್ವಿಕ ಗುಣವನ್ನು ದಾಟಲೇಬೇಕಾಗುತ್ತದೆ. ಸಾತ್ವಿಕತೆಯನ್ನು ಪಡೆಯಲೇಬೇಕು. ಅದು ಅತ್ಯವಶ್ಯ; ಆದರೆ ಮುಂದೆ ಅದನ್ನೂ ಕೂಡ ಮೀರಲೇಬೇಕು. ನೈತಿಕತೆಯು ಶುದ್ಧೀಕರಣದ ಸಾಧನ, ಅದರ ಮೂಲಕ ನಾವು ಭಗವಂತನೆಡೆಗೆ ಸಾಗಬಹುದು, ಆದರೆ ಭಗವಂತನು ಈ ಎಲ್ಲ ರೀತಿಯ ದ್ವಂದ್ವಗಳನ್ನು ಮೀರಿ ಆಚೆಗಿದ್ದಾನೆ. ಅವನು ಕೇವಲ ರಾಜಸಿಕದಲ್ಲೂ ಇಲ್ಲ, ಸಾತ್ವಿಕ ಪ್ರಕೃತಿಯಲ್ಲೂ ಇಲ್ಲ. ಧರ್ಮವೆಂದರೆ ಆಧ್ಯಾತ್ಮಿಕ ಅರ್ಥದಲ್ಲಿ ನೈತಿಕತೆಯಲ್ಲ. ಗೀತೆ ಹೇಳುವಂತೆ, ಧರ್ಮವು ಆಯಾ ವ್ಯಕ್ತಿಯ ವೈಯಕ್ತಿಕ ಸ್ವಭಾವಕ್ಕನುಗುಣವಾಗಿ ಇರುತ್ತದೆ, ವ್ಯಕ್ತಿಯ ಮೂಲ ವೈಯಕ್ತಿಕ ಗುಣ ಸ್ವಭಾವವನ್ನವಲಂಬಿಸಿರುತ್ತದೆ ಮತ್ತು ಈ ಸ್ವಭಾವವು ಆಯಾ ವ್ಯಕ್ತಿಯ ಆತ್ಮ ಸತ್ಯದ ಅಂತರ್ಗತ ಶುದ್ಧ ಶಕ್ತಿಯೂ, ಗುಣವೂ ಆಗಿರುವುದು, ಅದು ಅವನ ಪ್ರಜ್ಞಾಯುಕ್ತ ಸಂಕಲ್ಪ ಮತ್ತು ಕಾರ್ಯ ಶಕ್ತಿಯ ಮೂಲ ಸತ್ವವೂ ಆಗಿರುವುದು. ಇಲ್ಲಿ ಬಯಕೆ ಅಂದರೆ ನಮ್ಮೊಳಗಿರುವ ಭಗವಂತನಿಗಾಗಿ ನಡೆಸುವ ತೀವ್ರ ಬಯಕೆ ಮತ್ತು ಶೋಧನೆಯಾಗಿದೆ, ಇದು ನಿಮ್ಮ ಪ್ರಕೃತಿಯ ಸಂತೋಷದ ಪ್ರಯತ್ನವಲ್ಲ; ತನ್ನದೇ ಆನಂದ, ಪಾರಮಾರ್ಥಿಕ ಆನಂದ ಪ್ರಾಪ್ತಿಯ ಚಲನೆಯಾಗಿದೆ ಮತ್ತು ಅದೇ ಅದರ ಪರಮ ಧ್ಯೇಯವಾಗಿದೆ. ಇದು ಸತ್ ಅಥವಾ ಅಸ್ತಿತ್ವದ ಆನಂದದ ಬಯಕೆಯಾಗಿದ್ದು, ತನ್ನದೇ ಆದ ಚಿತ್‌ಶಕ್ತಿಯ ಅನಾವರಣ, ಪ್ರಕಟನೆಯಾಗಿದೆ, ಸ್ವಭಾವಾನುಸಾರ ವರ್ತಿಸುವ ಕ್ರಿಯಾ ಶಕ್ತಿಯ ಪ್ರಯೋಗವೂ ಆಗಿದೆ.

ಹಾಗಿದ್ದರೆ, ಭಗವಂತನು ಸಂಭೂತಿಗಳಲ್ಲಿ ಇಲ್ಲ, ನಾಮ ರೂಪಾಕಾರಗಳಲ್ಲಿ ನಿಮ್ಮ ಪ್ರಕೃತಿಯ ಕ್ರಿಯೆ–ಪರಿಣಾಮಗಳಲ್ಲಿ, ಅಷ್ಟೇ ಏಕೆ ಸಾತ್ವಿಕದಲ್ಲೂ ಇಲ್ಲ ಎಂದು ಹೇಳುವುದರ ಔಚಿತ್ಯವೇನು? ಅವೆಲ್ಲವೂ, ಎಲ್ಲ ಜಗತ್ತೇ ಅವನಲ್ಲಿ ಇದೆ ಎಂದ ಮೇಲೆ, ಅವುಗಳಲ್ಲಿ ಆತನು ಇಲ್ಲಿ ಹೇಳುವುದರ ಅರ್ಥ ಏನು? ಒಂದು ದೃಷ್ಟಿಯಿಂದ, ಅವನು ಅವುಗಳಲ್ಲಿ ಇರಲೇಬೇಕು, ಇಲ್ಲವಾದರೆ ಅವುಗಳಿಗೆ ಅಸ್ತಿತ್ವವೇ ಇರುತ್ತಿರಲಿಲ್ಲ. ಇದರ ಅರ್ಥವೇನೆಂದರೆ ಭಗವಂತನ ನಿಜವಾದ ಮೂಲ

ಆಧ್ಯಾತ್ಮಿಕ, ಪಾರಮಾರ್ಥಿಕ ಪ್ರಕೃತಿ ಏನಿದೆಯೋ ಅದು ಈ ಪ್ರಕಟಗೊಂಡ ಸಂಭೂತಿಗಳಿಗೆ ಸೀಮಿತವಾಗಿಲ್ಲ. ಅವೆಲ್ಲ ಕೇವಲ ತೋರಿಕೆಯ, ತೋರಿಬರುವ ಸಂಗತಿಗಳು. ಅವೆಲ್ಲವೂ ಅವನೊಳಗೆಯೇ ಇವೆ, ಅಹಂಕಾರದ ನಿಮಿತ್ತದಿಂದ ಹಾಗೂ ಅವಿದ್ಯೆಯಿಂದಾಗಿ ಅವು ನಿರ್ಮಾಣವಾಗಿವೆ. ಅವಿದ್ಯೆಯು ಯಾವಾಗಲೂ ವಾಸ್ತವಿಕತೆಯ ವಿಪರೀತ ದರ್ಶನ ಅಂದರೆ ಊರ್ಧ್ವಮೂಲ (ಬುಡಮೇಲು) ದರ್ಶನವನ್ನೇ ಮಾಡಿಸುತ್ತದೆ ಅಥವಾ ಅರ್ಧ ಸತ್ಯ ಅರ್ಧ ಸುಳ್ಳು ಮಿಶ್ರಿತ ಅನುಭವವನ್ನೇ ಕೊಡುತ್ತದೆ. ಅಂತಯೇ ನಾವು ಆತ್ಮವು ಶರೀರದ ಒಳಗೆ ಇದೆ, ಅದು ಭೌತಿಕ ಶರೀರದ ಪರಿಣಾಮ ಅಥವಾ ಅದರಿಂದಾಗಿ ಇರುವಂಥದು ಎಂದು ಭಾವಿಸುತ್ತೇವೆ. ಆದರೆ ನಿಜವಾಗಿ ನಮ್ಮ ಶರೀರವೇ ಆತ್ಮದೊಳಗೆ ಇದೆ, ಅದು ಆತ್ಮ ನಿಮಿತ್ತವಾಗಿ ಇದೆಯೇ ಹೊರತು ಅದಕ್ಕೆ ಸ್ವಯಂ ಅಸ್ತಿತ್ವವಲ್ಲ. ಅದು ಆತ್ಮದ ಪ್ರಕಟನೆಯ ಮಾಧ್ಯಮವೇ ಹೊರತು ಸ್ವತಂತ್ರವಾಗಿಲ್ಲ. ಆತ್ಮವೆಂಬುದು ನಮ್ಮ ಇರುವಿಕೆಯ(ಸತ್ತೆಯ) ಒಂದು ಸಣ್ಣ ಭಾಗವೆಂದು ನಾವು ಭಾವಿಸಿದ್ದೇವೆ; ಅಂಗುಷ್ಠ ಮಾತ್ರಾ ಪುರುಷಃ – ನಮ್ಮ ಭೌತಿಕ ಹಾಗೂ ಮಾನಸಿಕ ಬೃಹತ್ ಅಸ್ತಿತ್ವದಲ್ಲಿ ಅದೊಂದು ಸಣ್ಣ ಭಾಗ ಎಂಬುದು ನಮ್ಮ ಗ್ರಹಿಕೆ. ಆದರೆ ನಿಜವಾಗಿ ಅದು ಅನಂತ ಚೈತನ್ಯ ಸತ್ತೆಯ ಕೇವಲ ತೋರಿಕೆಯ ಒಂದು ಸಣ್ಣ ಅಂಶ ಮಾತ್ರ. ಅಂತೆಯೇ ಅದಿಲ್ಲಿ ಚಿಕ್ಕದಾಗಿ ತೋರುತ್ತದೆ. ಆದ್ದರಿಂದ ಅವುಗಳೊಳಗೆ ಭಗವಂತ ಇದ್ದಾನೆ ಅನ್ನುವುದಕ್ಕಿಂತ ಅವೆಲ್ಲವೂ ಭಗವಂತನಲ್ಲಿ ಇವೆ ಎಂಬುದೇ ಹೆಚ್ಚು ಸೂಕ್ತವಾಗಿದೆ. ತ್ರಿಗುಣಗಳಿಂದ ಕೂಡಿದ ನಿಮ್ನ ಪ್ರಕೃತಿಯು ವಸ್ತುಗಳ ವಿಪರೀತ ದರ್ಶನ ಮಾಡಿಸುವುದರ ಜೊತೆಗೆ ಅವುಗಳಿಗೊಂದು ನಿಮ್ನ ಗುಣ ಧರ್ಮವನ್ನು ಕಲ್ಪಿಸುವ ಶಕ್ತಿಯೇ ಮಾಯೆ. ಅದು ಭ್ರಮೆಯನ್ನು ಸೃಷ್ಟಿಸುವ ಶಕ್ತಿ, ಅದು ಇಲ್ಲದ್ದನ್ನು ಇರುವಂತೆಯೂ, ಇರುವುದನ್ನು ಇಲ್ಲದಂತೆಯೂ, ತೋರಿಸುವುದರ ಜೊತೆಗೆ ಸದಾ ಅಸತ್ಯದ ಜೊತೆ ವ್ಯವಹರಿಸುವುದು, ನಮ್ಮ ಇಂದ್ರಿಯಗಳನ್ನು ಭ್ರಮಿತಗೊಳಿಸಿ, ವಾಸ್ತವಿಕ ಮೌಲಿಕ ದೃಷ್ಟಿಯನ್ನೇ ಹದಗೆಡಿಸಿ, ಅಹಂಭಾವ, ನಿಮ್ನ ಮನೋಭಾವನೆ, ಸಂವೇದನೆ ಹಾಗೂ ಭೌತಿಕತೆ, ಸೀಮಿತ ಬುದ್ಧಿಗಳನ್ನು ಆರೋಪಿಸಿ ನಮ್ಮ ಅಸ್ತಿತ್ವದ ಪರಮ ಸತ್ಯವನ್ನೇ ಮುಚ್ಚಿ ಹಾಕಿಬಿಡುವುವು. ಈ ಮಾಯೆಯು ನಮ್ಮ ದಿವ್ಯ ಅಸ್ತಿತ್ವವನ್ನು ಮರೆ ಮಾಡುವುದು. ನಾವು ಅನಂತ ಆತ್ಮ ಚೈತನ್ಯದ ಅಮರ ಭಾಗಗಳು ಎಂಬ ಸತ್ಯವನ್ನೇ ಮರೆಸಿಬಿಡುವುದು. "ಈ ತ್ರಿಗುಣಗಳ ಮಾಯೆಯಿಂದಾಗಿಯೇ ಸರ್ವ ಮಹೇಶ್ವರನೂ, ಅವ್ಯಯನೂ ಆದ ನನ್ನನ್ನು

ಯಾರೂ ಸರ್ವ ಮಹೇಶ್ವರನೆಂದು ಗುರುತಿಸುವುದಿಲ್ಲ" (7/13) ಭಗವಂತನೇ ನಮ್ಮ ಅಸ್ತಿತ್ವದ ಸತ್ಯ ಎಂಬುದು ನಮಗರಿವಾದರೆ, ಎಲ್ಲವೂ ಬದಲಾವಣೆ ಹೊಂದುವುದು, ನಮ್ಮ ಹಾಗೂ ವಿಶ್ವದ ಸತ್ಯ ಅರಿವಾಗುವುದು, ನಮ್ಮ ಜೀವನ, ನಮ್ಮ ವ್ಯಕ್ತಿತ್ವಗಳು ದೈವೀ ಮೌಲ್ಯ ಪಡೆಯುವುವು. ಎಲ್ಲವೂ ದೈವೀ ನಿಯಮದಡಿಯಲ್ಲಿಯೇ ಕಾರ್ಯ ಮಾಡುವಂತಾಗುವುದು.

ಎಲ್ಲವೂ ಭಗವಂತನೇ ಆಗಿದ್ದಾನೆ, ನಮ್ಮ ಭ್ರಮಿತಗೊಳಿಸುವ ಎಲ್ಲದರ ಮೂಲದಲ್ಲೂ ಭಗವಂತನೇ ಇದ್ದಾನೆ, ಜೀವನೇ ಬ್ರಹ್ಮ ಬ್ರಹ್ಮನೇ ಜೀವ, ಇರುವಾಗ ಮಾಯೆ ಏಕಿಷ್ಟು ದುರತ್ಯಯವಾಗಿದೆ, ದಾಟಲು ಕಠಿಣವಾಗಿದೆ "ಮಮ ಮಾಯಾ ದುರತ್ಯಮಾ?" (7/14) ಇದೆಲ್ಲವೂ ಭಗವಂತನ ಮಾಯೆಯೇ, "ದೈವೀ ಹ್ಯೇಷಾ ಗುಣಮಯೀ ಮಮ ಮಾಯಾ", ಆಗಿರುವುದರಿಂದಲೇ ಅದನ್ನು ದಾಟುವುದು ಕಠಿಣವಾಗಿದೆ. ಇದೆಲ್ಲವೂ ಬ್ರಹ್ಮವೇ, ಎಲ್ಲವೂ ಬ್ರಹ್ಮನ ಮೂಲಕವೇ ವಿಕಾಸ ಹೊಂದುತ್ತದೆ. ಆದರೆ ಇದು ದೇವತೆಗಳ ರೂಪದಲ್ಲಿರುವ ಬ್ರಹ್ಮನ ಮೂಲಕ "ದೈವೀ" ಬೆಳೆಯುವುದು ಅಂದರೆ ಅಧೋ ಮತ್ತು ನಿಮ್ನ ವೈಯಕ್ತಿಕ ಪ್ರಕೃತಿ ಅರ್ಥಾತ್ ಸತ್ವ, ತಮ, ರಜ ಗುಣಗಳ ಮೂಲಕ ವಿಭಜಿಸಲ್ಪಟ್ಟೇ ಬೆಳೆಯುತ್ತದೆ. ಸ್ವತಃ ಈಶ್ವರನೇ ನಮ್ಮ ಮೇಲೆ ರಹಸ್ಯವಾದ, ಅಜ್ಞಾನದ ಪರದೆಯನ್ನು ಹಾಕಿದ್ದಾನೆ. ವಿಶ್ವ ವ್ಯಾಪಕವಾದ ಈ ತೆರೆಯನ್ನು ಬ್ರಹ್ಮ, ವಿಷ್ಣು, ಮಹೇಶ್ವರರು ಹೆಣೆದಿದ್ದಾರೆ. ಶಕ್ತಿ ಅಥವಾ ಊರ್ಧ್ವ ಪ್ರಕೃತಿಯು ಈ ತೆರೆಯ ಹಿಂಬದಿಯಲ್ಲಿದೆ, ನಮಗೆ ಕಾಣದಂತೆ ಮರೆಯಾಗಿದೆ. ನಾವು ಈ ಪರದೆ ಎಂಬ ಬಲೆಯನ್ನು ಕುರಿತು ಚಿಂತಿಸಬೇಕಾಗಿದೆ, ಅದನ್ನು ಹರಿದು ಹಾಕಿ ಬಿಡಬೇಕಾಗಿದೆ, ಭೇದಿಸಿ ಒಳ ತೂರಬೇಕಾಗಿದೆ. ದೇವತೆ, ಅಧಿದೇವತೆಗಳನ್ನು ಮೀರಿ, ಅವರನ್ನು ದಾಟಿ ಮೂಲ ಪರಮ ಪ್ರಭುವಾದ ಭಗವಂತನೆಡೆಗೆ ಹೋಗಬೇಕಾಗಿದೆ. ಅವನಲ್ಲಿ ದೇವತೆಗಳು ಇದ್ದಾರೆ, ಅವರ ಕೆಲಸ, ಕಾರ್ಯ, ಅತ್ಯಂತಿಕ ಆಂತರಿಕ ಆಧ್ಯಾತ್ಮಿಕ ವೈವಿಧ್ಯಗಳಿವೆ, ಅವುಗಳ ಅನುಭವ ಇದೆ, ಇದೆಲ್ಲವೂ ನಮ್ಮ ಅವಿನಾಶಿ ಅಸ್ತಿತ್ವದ ವೈವಿಧ್ಯತೆಯೇ – "ಯಾರು ನನ್ನೆಡೆಗೆ (ಭಗವಂತನೆಡೆಗೆ) ಹೊರಳುತ್ತಾರೋ, ಮುಖ ಮಾಡುತ್ತರೋ ಅವರು ಕೊನೆಗೆ ಈ ಮಾಯೆಯನ್ನು ದಾಟಿ ನನ್ನನ್ನೇ ಹೊಂದುತ್ತಾರೆ" (7/14).

(ಸಶೇಷ)

## ಮುಖಪುಟದ ಕವನ

### ಶೃಂಗದುತ್ತುಂಗ ತುಂಗಶ್ರೇಣಿಗಳ ಸಾಮ್ರಾಜ್ಯ ತಾಣವಿದುವು

ಶೃಂಗದುತ್ತುಂಗ ತುಂಗಶ್ರೇಣಿಗಳ ಸಾಮ್ರಾಜ್ಯ ತಾಣವಿದುವು
ಜೊತೆಗಿದೋ ಜ್ಯೋತಿ–ಕಾಂತಿಗಳ ಮಿಡಿತ ಸುವಿಶಾಲ ಸಮತೆ–ತಲವು
ಭೂಮ ರೂಪದಾ ಭೀಮಕಾಯದಲಿ ಪದನಿಯತಿಯೊಳಗೆ ಸಲಿಲ
ಸುವ್ಯಾಪ್ತ ಛಂದದುದಧಿಗಳ ಎದೆಗೆ ಗುರಿಯರಸಿ ಅಲೆಯ ತಾಲ,

ದೃಷ್ಟಿ ಗೋಚರಕೆ ಸೃಷ್ಟಿ–ಕ್ಷೇತ್ರವಿದು ಜೊತೆಗಿದೋ ಮೌನ ತಾನು
ತುಂತುಂಬಿಕೊಂಡು ಆತ್ಮಿಕದ ಘನತೆ–ಪೂರ್ಣದಲಿ ಇಂತು ತಾನು
ಜೀವನದ ಕರ್ಮ–ಕಾರ್ಯಗಳ ಲೀಲೆಗಳು ಸರ್ವ ಲೀನ, ಪೂರ್ಣ,
ಆಂತರ್ಯದಾಳದಾಳದಲಿ ಶಾಂತ ತಲ್ಲೀಯಗೊಳುತ ಪೂರ್ಣ,

**– ಪುಟ್ಟು ಕುಲಕರ್ಣಿ**
**(ಶ್ರೀ ಅರವಿಂದರ 'ಸಾವಿತ್ರಿ'; ದಳ 4 ರೇಣು 2 ಪುಟ 359)**

### ವಿಕಸನದಿ ಪಕಳೆ ವಿಸ್ತಾರವಾಗಿ ಸಂಕುಲಕೆ ಪುಷ್ಪವಾಗಿ

ಒಂದೊಮ್ಮೆ ಅಲ್ಲಿ ನಿರ್ಮಾಯ ಘನದ ನಿಶ್ಶೂನ್ಯದಲ್ಲಿ ಸೃಷ್ಟಿ–
ಸೃಷ್ಟಿಗೊಳ್ಳಲೆನೆ ತಾನುದಿತಗೊಂಡು ತುಂಬಲೆನೆ ಭವ್ಯ–ದೃಷ್ಟಿ,
ಒಂದೊಮ್ಮೆ ಮತ್ತೆ ಆಕಾರರಹಿತ ಆ ವಿಶ್ವಶಕ್ತಿ ಅಲ್ಲಿ
ಸಾಕಾರಗೊಳಲು ಕಾತರಿಸಿ ಬಂದು ಭವದ್ರವ್ಯ ಹುಟ್ಟಿನಲ್ಲಿ,

ಉತ್ತರೋತ್ತರದ ಆ ಊರ್ಧ್ವಗಮನದಲಿ ಸತತ ಸಾಗುವಲ್ಲಿ
ಜೀವನವು ಅತ್ತ ಸುಪ್ತಚೇತನದಿ ತಾ ಮಿಡಿದು ಸಾಗುವಲ್ಲಿ,
ಅದರ ಆ ಪಚ್ಚೆ ಹ್ಲಾದಾನುಹ್ಲಾದ ಆಹ್ಲಾದದಲ್ಲಿ ಸಾಗಿ
ಮರಕತವು ಚಿಗುರು–ಚಿಗುರುಗಳಲೆಲ್ಲ ನಗುನಗುತ ತೇಲಿತೂಗಿ,

ಮತ್ತಿದೋ ಅದರ ಸೌಂದರ್ಯವೆಲ್ಲ ಮುದಹಸಿತ ಮೋದವಾಗಿ
ವಿಕಸನದಿ ಪಕಳೆ ವಿಸ್ತಾರವಾಗಿ ಸಂಕುಲಕೆ ಪುಷ್ಪವಾಗಿ,
ಸಂವೇದವೀಗ ಸಂವಾದಗೊಂಡು ಅಂಗಾಂಶ–ಕೋಶಗಳಲಿ
ನರ–ನಾಡಿಗಳಲಿ ಮರ್ಮರದ ನಾದ–ವರ್ಣಮಯ ಪರ್ಣಗಳಲಿ

**– ಪುಟ್ಟು ಕುಲಕರ್ಣಿ**
**(ಶ್ರೀ ಅರವಿಂದರ 'ಸಾವಿತ್ರಿ'; ದಳ 10 ರೇಣು 4 ಪುಟ 648–9)**

## ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್
## ಪ್ರಕಟವಾಗಿರುವ ಪುಸ್ತಕಗಳ ಪಟ್ಟಿ

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 1 | ಸಮಗ್ರ ಶಿಕ್ಷಣ |
| 2 | ಶ್ರೀ ಅರವಿಂದರು ದಿವ್ಯ ಜೀವನ |
| 3 | ಶ್ರೀ ಅರವಿಂದರು ಭಾರತೀಯ ಧರ್ಮ ಪರಂಪರೆ ಮತ್ತು ಭಗವಾನ್ ಶ್ರೀ ಅರವಿಂದರ ದರ್ಶನ |
| 4 | ಶ್ರೀ ಮಾತಾರವಿಂದರ ಪೂರ್ಣಯೋಗ |
| 5 | ಪ್ರಾರ್ಥನಾ ಪದ್ಯಗಳು |
| 6 | ರವಿ ಬೆಳಗಿದ ಪಥ (ಶ್ರೀಮಾತೆಯವರ ವಚನವೇದ ಸಂಕಲನ) |
| 7 | ನವ್ವೆಂಬರ್ 24, 1926 ಅಧಿಮಾನಸ ಪ್ರಜ್ಞೆಯ ಅವರೋಹಣ ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ದೃಷ್ಟಿಯಲ್ಲಿ ಸಿದ್ಧಿದಿನದ ಮಹತ್ವ |
| 8 | ಶ್ರೀ ಅರವಿಂದರು (ಒಂದು ಸಂಕ್ಷಿಪ್ತ ಪರಿಚಯ) |
| 9 | ಶ್ರೀಮಾತೆ (ಒಂದು ಸಂಕ್ಷಿಪ್ತ ಪರಿಚಯ) |
| 10 | ಕೇಂಬ್ರಿಜ್‌ನ ಸುಗಂಧಿತ ಪುಷ್ಪ (ಮಾನವತೆಗೆ ಶ್ರೀ ಅರವಿಂದರ ಕೊಡುಗೆ) |
| 11 | ಅತಿಮಾನಸ ಹಾಗೂ ಹೊಸ ಜಗತ್ತೊಂದರ ಜನನ (ಶ್ರೀಮಾತೆ ಹಾಗೂ ಶ್ರೀ ಅರವಿಂದರ ಬರಹಗಳ ಸಂಕಲನ) |
| 12 | ಭಾರತ ಮತ್ತು ಭರತಮಾತೆಯ ದೈವನಿಯತಿ |
| 13 | ಆದರ್ಶ ಶಿಕ್ಷಕ |
| 14 | ಪೂರ್ಣಯೋಗ |
| 15 | ಶ್ರೀ ಅರವಿಂದರ ಧರ್ಮ ಹಾಗೂ ರಾಷ್ಟ್ರೀಯತ್ವ |
| 16 | ಶ್ರೀಮಾತೆಗೆ 72 (ಬಾಹತ್ತರ) ಕವನಗಳ ಅರ್ಪಣೆ |

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 17 | ಶಿಕ್ಷಣ ಕುರಿತು ಶ್ರೀಮಾತಾರವಿಂದರ ವಿಚಾರಧಾರೆ |
| 18 | ಶ್ರೀ ಅರವಿಂದ ದರ್ಶನ |
| 19 | ಶ್ರೀಮಾತೆ ಭಾರತಮಾತೆ |
| 20 | ದುರ್ಗಾಸ್ತೋತ್ರ |
| 21 | ಚಿಂತನಗಳು ಮತ್ತು ಸೂಕ್ತಿಗಳು |
| 22 | ಯೋಗ ಸಮನ್ವಯ |
| 23 | ಶ್ರೀ ಅರವಿಂದಾಶ್ರಮ |
| 24 | ಪ್ರಸೂತಿ ಪೂರ್ವದ ಶಿಕ್ಷಣ ಶೋಭಾಯಮಾನ ಭವಿಷ್ಯತ್ತಿನೆಡೆಗೆ |
| 25 | ಮಗುವನ್ನು ಪೋಷಿಸುವುದು ಹೇಗೆ? |
| 26 | ಸುಪ್ರಮಾನಸದ ಶ್ರೀಮಾತೆ |
| 27 | ಸಾವಿತ್ರಿ (ಶ್ರೀ ಅರವಿಂದರ ಮಹಾಕಾವ್ಯದ ಸಾರಾಂಶ) |
| 28 | ಪೂರ್ಣಯೋಗದ ಪಥದಲ್ಲಿ |
| 29 | ಬೆಳಕಿನ ಕಿರಣಗಳು |
| 30 | 24th November 1926<br>(Descent of Overmental Consciousness) |
| 31 | ಶ್ರೀ ಅರವಿಂದರ ಸಾವಿತ್ರಿ |
| 32 | ಮಾನುಷ ಚಕ್ರ |
| 33 | ಚೈತ್ಯ ಪುರುಷ |
| 34 | ಭವಾನಿ ಭಾರತಿ |
| 35 | ಶಿಕ್ಷಣ |
| 36 | ಯೋಗಾರಂಭ |
| 37 | ಶ್ರೀ ಅರವಿಂದರ ಸಾವಿತ್ರಿ |
| 38 | ಶ್ರೀ ಅರವಿಂದರು |

# ವಾರ್ತಾಪತ್ರ

## ಶ್ರೀ ಅರವಿಂದ ಸಂಕೀರ್ಣ

ಜೆ.ಪಿ.ನಗರ 1ನೇ ಹಂತ, ಬೆಂಗಳೂರು

ದಿನಾಂಕ 4ನೇ ಏಪ್ರಿಲ್ 2025 ಶುಕ್ರವಾರ ಶ್ರೀ ಅರವಿಂದೋ ಸಂಕೀರ್ಣ ಟ್ರಸ್ಟ್ ವತಿಯಿಂದ ಶ್ರೀ ಅರವಿಂದರು ಪಾಂಡಿಚೇರಿಗೆ ಆಗಮಿಸಿದ ದಿನವನ್ನಾಗಿ ಆಚರಿಸಲಾಯಿತು. ಬೆಳಿಗ್ಗೆ 7.30 ರಿಂದ 7.50 ರವರೆಗೆ ಸಾಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರ ವಿತರಿಸಲಾಯಿತು. ತತ್ಸಬಂಧ ಸಾಯಂಕಾಲ 5.00 ರಿಂದ 6.15 ಗಂಟೆಯವರಗೆ "Spiritual History of India in the Light of Sri Aurobindo" ಎಂಬ ವಿಷಯದ ಬಗ್ಗೆ ವೀಡಿಯೋ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಅನೇಕ ಗುರು–ಬಂಧುಗಳು, ಸಾಧಕರು ಮತ್ತು ಇತರರು ಹಾಜರಿದ್ದರು. ಜೂಮ್ ಹಾಗೂ ಯೂಟ್ಯೂಬ್ ಮುಖಾಂತರ ಸಹ ಪ್ರಸ್ತುತ ಪಡಿಸಲಾಯಿತು.

ದಿನಾಂಕ 24ನೇ ಏಪ್ರಿಲ್ 2025 ಗುರುವಾರ ಶ್ರೀ ಅರವಿಂದೋ ಸಂಕೀರ್ಣ ಟ್ರಸ್ಟ್ ವತಿಯಿಂದ ಶ್ರೀಮಾತೆಯವರು ಪಾಂಡಿಚೇರಿಗೆ ಆಗಮಿಸಿದ ದಿನವನ್ನಾಗಿ ಆಚರಿಸಲಾಯಿತು. ಬೆಳಿಗ್ಗೆ 7.30 ರಿಂದ 7.50 ರವರೆಗೆ ಸಾಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರ ವಿತರಿಸಲಾಯಿತು. ತತ್ಸಬಂಧ ಸಾಯಂಕಾಲ 5.00 ರಿಂದ 6.30 ಗಂಟೆಯವರಗೆ "ಮರಳಿ ಆರ್ಯಭೂಮಿಗೆ ಅದಿತಿಮಾತೆ" ಎಂಬ ವಿಷಯವಾಗಿ ಶ್ರೀ ರಮೇಶ್ ಸರಗೂರ್, ಶ್ರೀ ರಾಮಕೃಷ್ಣ ವಿದ್ಯಾಶಾಲ, ಮೈಸೂರು ಇವರು ಕನ್ನಡದಲ್ಲಿ ಉಪನ್ಯಾಸ ನೀಡಿದರು. ಈ ಕಾರ್ಯಕ್ರಮದಲ್ಲಿ ಅನೇಕ ಗುರು–ಬಂಧುಗಳು, ಸಾಧಕರು ಮತ್ತು ಇತರರು ಹಾಜರಿದ್ದರು. ಜೂಮ್ ಹಾಗೂ ಯೂಟ್ಯೂಬ್ ಮುಖಾಂತರ ಸಹ ಪ್ರಸ್ತುತ ಪಡಿಸಲಾಯಿತು.

"The Inner Attitude, Fate and Free Will" ವಿಷಯ ಕುರಿತು ದಿನಾಂಕ 15ನೇ ಏಪ್ರಿಲ್ 2025 ರಿಂದ 20ನೇ ಮೇ 2025 ವರೆಗೂ ಶ್ರೀ ಅರವಿಂದ ಸಂಕೀರ್ಣದ ಸಾಂಸ್ಕೃತಿಕ ಸಭಾ ಭವನದಲ್ಲಿ ಫೋಟೋ ಚಿತ್ರ ಪ್ರದರ್ಶನ ಆಯೋಜಿಸಲಾಗಿದೆ.




ಫೋಟೊ: ಇಮೇಜಿಂಗ್ ಸಾವಿತ್ರಿ

ವಿಕಸನದಿ ಪಕಳೆ ವಿಸ್ತಾರವಾಗಿ ಸಂಕುಲಕೆ ಪುಷ್ಪವಾಗಿ,
ಸಂವೇದವೀಗ ಸಂವಾದಗೊಂಡು ಅಂಗಾಂಶ–ಕೋಶಗಳಲಿ
ನರ–ನಾಡಿಗಳಲಿ ಮರ್ಮರದ ನಾದ–ವರ್ಣಮಯ ಪರ್ಣಗಳಲಿ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 10 ರೇಣು 4 ಪುಟ 648–9)**

**RNI No. 22511/1971**
No. of Pages **76 + 4 (Cov. Page)**
KAR Reg No.: RNP/KA/BGS/368/2024-2026
Licensed to post without prepayment License No.PMG BG/WPP-409/2024-2026
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2026
Licensed to Post at BG PSO, Mysuru Road, Bengaluru - 560 026



ಫೋಟೋ: ಇಮೇಜಿಂಗ್ ಸಾವಿತ್ರಿ

ತನ್ಮಯದ ಧ್ಯಾನದುತ್ತುಂಗದಲ್ಲಿ ಉನ್ಮನಿಯ ಜ್ಯೋತಿ ಕಿರಣ
ಸಾವಿರದ ದಳದಲೋಂಕಾರವಾಗಿ ಅಮೃತದಲಿ ಶುಭ್ರ ವರ್ಣ
ತಲ್ಲೀನ ಧ್ಯಾನದಲ್ಲೀಗ ಧರೆಗೆ ಆಧಾರವನ್ನು ಅರಸಿ
ಆ ಊರ್ಧ್ವನೆಲೆಯ ದೈವದಾ ಸೆಲೆಯ ಮಾಯಕದ ಸ್ಪರ್ಶವಿರಿಸಿ
ಭೂತ–ಚೇತನಕೆ ಋತದ ಚೈತನ್ಯ ಸಾಂಗತ್ಯ ದೊರಕಲೆಂದು
ಮನುಜ ಭಾವಕ್ಕು ದೇವಭೂಮಕ್ಕು ಸಂಯೋಗ ಯೋಗವಿಂದು
ಚಕ್ರ–ಚಕ್ರಗಳ ಆಖಾತಗಳಲಿ ಛಂದದಾ ಬಂಧದಲ್ಲಿ
ದೃಷ್ಟಿ ಗೋಚರದ ಸೃಷ್ಟಿ ಲೀಲೆಗಳ ಚಿರ–ಸೇತು ಬಂದುದಿಲ್ಲಿ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ ‘ಸಾವಿತ್ರಿ’; ದಳ 4 ರೇಣು 1 ಪುಟ 353)**

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, ‘Sri Aurobindo Marg’,
J.P. Nagar I Phase, Bengaluru - 560 078. Phone: 080 - 22449882.